Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 127
ಶುಕ್ರವಾರ,8 ಮೇ 2026 | ಪುಟಗಳು: 10+10 | ಬೆಲೆ: ₹ 5.00
c
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ವಾರಾಣಸಿ ಶೂಟಿಂಗ್‌ಗೆ 15 ಲಕ್ಷ ಲೀಟರ್ ನೀರು: ನಿರ್ದೇಶಕ ರಾಜಮೌಳಿಗೆ ಜಲಮಂಡಳಿ ನಕಾರ

ಉತ್ತರ ಪ್ರದೇಶದ ಮುಜಫ್ಫರ್‌ನಗರ ಜಿಲ್ಲೆಯಲ್ಲಿ 36 ಗಂಟೆಯಲ್ಲಿ 8 ಎನ್‌ಕೌಂಟರ್, 12 ಆರೋಪಿಗಳ ಬಂಧನ

ಆಗಸದಲ್ಲಿ ದಾರಿ ತಪ್ಪಿದ ಮಹಾ ಡಿಸಿಎಂ ಏಕನಾಥ್ ಶಿಂಧೆ ಹೆಲಿಕಾಪ್ಟರ್, ಕೊನೆಗೂ ಸುರಕ್ಷಿತ ಲ್ಯಾಂಡಿಂಗ್

PRM/KA/RERA/1251/310/PR/040524/006862
WWW.RERA.KARNATAKA.GOV.IN

LAUNCHING CASAGRAND CASABLANCA PHASE 2

OFF KANAKAPURA ROAD | 5 MINS FROM FORUM MALL

LUXURIOUS 2, 3 & 4 BHK APTS. & 5 BHK FLOOR VILLAS FROM ₹1.2CR - ₹3.37CR*

*T&C APPLY

27 ACRES ROMAN-THEMED COMMUNITY
674 LUXURY HOMES IN PHASE 2
24 ACRES OF OPEN SPACE
2.5 ACRES OF MONUMENTAL CLUBHOUSES
130+ WORLD-CLASS AMENITIES

PHASE I SOLD OUT 785 HAPPY FAMILIES

PRICE BENEFITS
MARKET PRICE, OFF KANAKAPURA RD. ~~₹9000/SFT.~~
CASAGRAND LAUNCH PRICE ~~₹8399/SFT.~~
CASAGRAND EARLY-BIRD PRICE ₹7999/SFT.
(FOR FIRST 25 BOOKINGS)

BLOCKBUSTER PRICE ADVANTAGE

TYPE	SIZE	LAUNCH PRICE	EARLY-BIRD PRICE
2 BHK	1410-1661 SFT.	~~₹1.25CR-₹1.5CR*~~	₹1.2CR-₹1.44CR*
3 BHK	1923-2171 SFT.	~~₹1.71CR-₹1.98CR*~~	₹1.64CR-₹1.9CR*
4 BHK	2742 SFT.	~~₹2.46CR*~~	₹2.37CR*
5 BHK FLOOR VILLA	3939 SFT.	~~₹3.51CR*~~	₹3.37CR*

PHASE 2 UNITS - 674 | UNITS SOLD - 183 | AVAILABLE UNITS - 491 | **HANDOVER IN 36 MONTHS**

CREDAI
EXCLUSIVE SITE VISIT AVAILABLE.
VISIT MODEL HOUSE AT SITE.
77956 54059

SCAN TO WATCH THE PREMIERE OF BLOCKBUSTER LIFE

CASAGRAND
building aspirations

PRM/KA/RERA/1251/310/PR/040524/006862
WWW.RERA.KARNATAKA.GOV.IN

T&C APPLY

LAUNCHING
CASAGRAND CASABLANCA
PHASE 2

LUXURIOUS 2, 3 & 4 BHK APTS. & 5 BHK FLOOR VILLAS
OFF KANAKAPURA ROAD | 5 MINS FROM FORUM MALL

₹1.2CR* ONWARDS

A TRUE BLOCKBUSTER LIFE YOU WON'T FIND ANYWHERE ELSE

★ COMMUNITY ★
- An iconic Roman-themed community of 1400+ homes
- 19 acres of lush landscapes with a tropical forest
- Vehicle-free community with basement parking for safer living
- 7-star styled double-height entrance & lift lobbies
- Resort like ambience for luxury living

★ AMENITIES ★
- Grand 28000 sft. temperature-controlled swimming pools
- 25+ sports courts like badminton, squash, table tennis, basketball & pickleball
- Leisure zones with 5 amphitheatres, forest walkways, koi & lily ponds, themed gardens & more

★ CONVENIENCE ★
- 2 independent entrances for seamless accessibility
- Multi-layer safety & security system
- All-in-one hub: supermarket, cafeteria, clinic, laundry & more
- 100% hassle-free living with assured maintenance services
- Casagrand exclusive community events, festivals & social experiences

★ FLOOR PLAN AND SPECIFICATIONS ★
- Spacious homes for maximum functionality, comfort & privacy
- Huge ceiling height windows for 2x brighter & breezier living
- Vaastu-compliant homes with no space wastage
- Convertible balcony in bedrooms offer 3x more ventilation & scenic views
- High-end specifications like Italian marble flooring, digital door lock & luxury bath fittings

★ LOCATION ★
- 6 mins signal free access to NICE road
- 5 mins from Vajarahalli metro station
- 10 mins from Forum mall & Global tech park
- Close proximity to schools, colleges, business centers & IT parks

★ LOCATION BENEFITS ★
BANNERGHATTA RD.
10 MINS

RR NAGAR
15 MINS

JP NAGAR
18 MINS

BANASHANKARI
20 MINS

ELECTRONIC CITY
25 MINS

JAYANAGAR
28 MINS

BTM LAYOUT
30 MINS

130+ ACTION PACKED AMENITIES

Indoor Amenities

Entertainment
Multipurpose Hall, AV Room, Cricket Simulator, Video Games Room, Entertainment Lounge, Guest Lounge, Terrace Sky Cinema, Rooftop Café & More

Kids Play Area
Ball Pool, Kids Gym, Rock Climbing, Adventurous Play Area & More

Learning
Library, Arts & Crafts Room, Crechè, Business Centre & More

Gym
Digital Interactive Gym, Boxing Corner, Functional Training & More

Health & Fitness
Yoga/Meditation Zone, Steam Room, Indoor Jacuzzi, Salon & Spa

Indoor Sports
Squash Courts, Badminton Courts, Table Tennis, Foosball, Billiards, Pool Table, Indoor Golf Area, Air Hockey & More

Outdoor Amenities

Kids
Rock Climbing Wall, Kids Jungle Gym, Children's Play Area, Trampoline, Skating Rink & More

Sports, Fitness & Wellbeing
Yoga Deck, Pickle Ball Court, Basket Ball Court, Multipurpose Sports Court, Cricket Practice Net, Tennis Court, Kabaddi Court & More

Facilities
Car Charging Bay, Laundry Room, Convenio Store, Clinic, Pharmacy, Guest Rooms & More

Features & Entertainment
Amphitheatre, Party Lawn, Pets Park, Jogging & Walking Track, Cycling Track, Hammock Garden, Koi Pond, Fruit Orchard, Maze Garden, Mini Miyawaki Forest, Multipurpose Lawn & More

Swimming Pool Amenities
Adults Pool, Kids Pool, Pool Side Party Lawn, Water Slide, Sunken Seating, Jacuzzi & More





WHY CASAGRAND?

Top 7 Ranked in India	**Top 2** Ranked in South India	**No.1** Ranked in Chennai for last 8 years*	**22+ years** of Trust & Legacy	**7000+** Homes sold in FY '24 – 25	**6 Cities** Chennai, Bengaluru, Hyderabad, Pune, Coimbatore & Dubai
2 months Guaranteed rental	**6 months** Guaranteed resale	**7 years** Warranty	**10 years** Maintenance by us	**2000+** Quality checks	**On-time** Delivery of projects

CREDAI
EXCLUSIVE SITE VISIT AVAILABLE.
VISIT MODEL HOUSE AT SITE. | **77956 54059**

SCAN TO EXPERIENCE THE BLOCKBUSTER LIFE

CASAGRAND
building aspirations

*Based on CBRE report 2024

Casagrand Premier Builder Limited is proposing, subject to receipt of requisite approvals, market conditions and other considerations, to make an initial public offer of its equity shares and has filed a draft red herring prospectus ("**DRHP**") with the Securities and Exchange Board of India ("**SEBI**"). The DRHP is available on the website of our Company, at www.casagrand.co.in, the SEBI at www.sebi.gov.in as well as on the websites of the book running lead managers Motilal Oswal Investment Advisors Limited and DAM Capital Advisors Limited at www.motilaloswalgroup.com and www.damcapital.in respectively, and the websites of the stock exchange(s) at www.nseindia.com and www.bseindia.com, respectively. Any potential investor should note that investment in equity shares involves a high degree of risk and for details relating to such risk, see "Risk Factors" of the RHP, when available. Potential investors should not rely on the DRHP filed with SEBI for making any investment decision.

The Equity Shares have not been and will not be registered under the U.S. Securities Act of 1933, as amended ("U.S. Securities Act") or any other applicable law of the United States and, unless so registered, may not be offered or sold within the United States except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares are being offered and sold outside the United States in "offshore transactions" as defined in and in compliance with Regulation S under the U.S. Securities Act and the applicable laws of the jurisdiction where those offers and sales occur.

Bennett & Coleman
THE TIMES OF INDIA
www.vijaykarnataka.com
ಶುಕ್ರವಾರ,8 ಮೇ 2026 | ಪುಟಗಳು: 10+10 | ಬೆಲೆ: ₹ 5.00
ಸಂಪುಟ: 27 | ಸಂಚಿಕೆ: 127
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಟಿಕೆಟ್ ಬೇಡಿಕೆಯೇ ಐಪಿಎಲ್ ಫೈನಲ್ ಸ್ಥಳ ಬದಲಾವಣೆಗೆ ಕಾರಣ: ಬಿಸಿಸಿಐ ಸ್ಪಷ್ಟನೆ

ಬೆಂಗಳೂರು ದರ

₹14,025 ↑ 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	₹15,300 ↑ 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	₹2,70,000 ↑ 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಸರ್ಸೆ ಸೆರಗಾ ವಿವಾದ: ಮಹಿಳಾ ಆಯೋಗದ ಮುಂದೆ ಕ್ಷಮೆ ಕೋರಿದ ನೋರಾ ಫತೇಹಿ

ವಿಕ ಹೊಂಗಿರಣ

ನಮಗೆ ಅಗತ್ಯ ಇಲ್ಲದ್ದನ್ನು ಬೇಡವೆನ್ನುವ ತಾಕತ್ತೇ ನಿಜವಾದ ಸಂಪತ್ತು.

- ಮಹಾತ್ಮ ಗಾಂಧಿ

SBI
The banker to every Indian
ತ್ವರಿತ ಬ್ಯಾಂಕಿಂಗ್ ಪರಿಹಾರಗಳಿಗಾಗಿ ವಾಟ್ಸ್‌ಪ್‌ನಲ್ಲಿ Hi ಎಂದು ಹೇಳಿ
ಸೇವೆಗಳು
● ನಿಮ್ಮ ಬ್ಯಾಲೆನ್ಸ್, ಮಿನಿ ಸ್ಟೇಟ್‌ಮೆಂಟ್‌ಗಳನ್ನು ಪರಿಶೀಲಿಸಿ
● ಖಾತೆ ಸ್ಟೇಟ್‌ಮೆಂಟ್, ಪಿಂಚಣಿ ಸ್ಲಿಪ್ ಇತ್ಯಾದಿಗಳನ್ನು ಡೌನ್‌ಲೋಡ್ ಮಾಡಿ.
● ನಿಮ್ಮ ಕೆವೈಸಿ ಅನ್ನು ಪರಿಷ್ಕರಿಸಿ
● ಉತ್ಪನ್ನ ಮಾಹಿತಿಯನ್ನು ಮತ್ತು ಇನ್ನೂ ಹೆಚ್ಚಿನದನ್ನು ಪಡೆಯಿರಿ
*ಷರತ್ತುಗಳು ಅನ್ವಯವಾಗುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹125/- ಕೋಲಾರ 123/- ತುಮಕೂರು 123/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹165/-
ಕೋಲಾರ 163/- ತುಮಕೂರು 163/-
ವಿಥ್ ಸ್ಕಿನ್ ₹233/- ಕೋಲಾರ 230/- ತುಮಕೂರು 230/-
ವಿಥೌಟ್ ಸ್ಕಿನ್ ₹266/- ಕೋಲಾರ 262/- ತುಮಕೂರು 262/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಟಿವಿಕೆಗೆ ಸಿಗದ ಬಹುಮತ, ಸಂಖ್ಯಾಬಲಕ್ಕೆ ಗವರ್ನರ್ ಹಠ | ತಮಿಳುನಾಡು ಸರಕಾರ ರಚನೆ ಅತಂತ್ರ | ಕಗ್ಗಂಟಾದ 6 ಶಾಸಕರ ಕೊರತೆ | ರಾಜ್ಯಪಾಲರ ನಡೆಗೆ ಖಂಡನೆ

ಸಿಎಂ ಪಟ್ಟಕ್ಕೆ ಆರೇ ಹೆಜ್ಜೆ

ಚೆನ್ನೈ: ತಮಿಳುನಾಡಿನಲ್ಲಿ ಟಿವಿಕೆ ಹೊಸ ಸರಕಾರ ರಚನೆ ಬಿಕ್ಕಟ್ಟು ಮತ್ತಷ್ಟು ಬಿಗಡಾಯಿಸಿದೆ. ಕಾಂಗ್ರೆಸ್ ಬೆಂಬಲದ



ನಡುವೆಯೂ ಬಹುಮತಕ್ಕೆ 6 ಶಾಸಕರ ಸಂಖ್ಯಾಬಲ ಕೊರತೆ ಎದುರಿಸುತ್ತಿರುವ ಟಿವಿಕೆ, ಇತರೆ ಪಕ್ಷಗಳ ಬೆಂಬಲಕ್ಕೆ ತೀವ್ರ ಕಸರತ್ತು ಮುಂದುವರಿಸಿದೆ. ಟಿವಿಕೆ ಜತೆ ಕೈಜೋಡಿಸಲು ಇತರೆ ಪಕ್ಷಗಳು ಸತತ ಮೂರನೇ ದಿನವೂ ಕಾದು ನೋಡುವ ತಂತ್ರ ಅನುಸರಿಸಿವೆ.

ಈ ನಡುವೆ, 118 ಶಾಸಕರ ಸಹಿಯುಳ್ಳ ಬೆಂಬಲ ಪತ್ರವನ್ನು ಒದಗಿಸಲೇಬೇಕೆಂಬ ರಾಜ್ಯಪಾಲರ ಖಡಕ್ ಷರತ್ತಿನಿಂದಾಗಿ ಮುಖ್ಯಮಂತ್ರಿಯಾಗಿ ವಿಜಯ್ ಪ್ರಮಾಣವಚನ ಸ್ವೀಕಾರವೂ ಅನಿಶ್ಚಿತವಾಗಿದೆ.

24 ಗಂಟೆಗಳ ಅವಧಿಯಲ್ಲಿ ಎರಡನೇ ಬಾರಿ ಗುರುವಾರ ಲೋಕಭವನಕ್ಕೆ ಭೇಟಿ ನೀಡಿದ ವಿಜಯ್ ಅವರು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಆರ್ಲೇಕರ್ ಜತೆ ಸರಕಾರ ರಚನೆ ಸಂಬಂಧ 45 ನಿಮಿಷ ಮಾತುಕತೆ ನಡಸಿದರೂ ಪ್ರಯೋಜನವಾಗಲಿಲ್ಲ.

''ಕಾಂಗ್ರೆಸ್ ಸೇರಿದಂತೆ ಕೆಲವು ಪಕ್ಷಗಳು ಸರಕಾರ ರಚನೆಗೆ ಬೆಂಬಲ ನೀಡಲು ಮುಂದೆ ಬಂದಿವೆ. ನಮ್ಮ ಪಕ್ಷಕ್ಕೆ ಸರಕಾರ ರಚನೆಗೆ ಅವಕಾಶ ಮಾಡಿಕೊಡಿ. ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸುವೆ,'' ಎಂದು ರಾಜ್ಯಪಾಲರಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದರು. ಆದರೆ, ಇದಕ್ಕೆ ರಾಜ್ಯಪಾಲರು, ''ಅಗತ್ಯ ಸಂಖ್ಯಾಬಲ ತೋರಿಸಿದರೆ ಮರು ನಿಮಿಷವೇ ಸರಕಾರ ರಚನೆಗೆ ಆಹ್ವಾನ ನೀಡುವೆ. ನಿಮ್ಮ ಪಕ್ಷ ಬಿಟ್ಟು ಬೇರೆ ಯಾವುದೇ ಮೈತ್ರಿಕೂಟವನ್ನು ಸರಕಾರ ರಚನೆಗೆ ಆಹ್ವಾನಿಸುವುದಿಲ್ಲ,'' ಎಂದು ಭರವಸೆ ನೀಡಿದರು.

ಗವರ್ನರ್ ವಿರುದ್ಧ ಗರಂ: ಚುನಾವಣೆಯಲ್ಲಿ 108 ಸ್ಥಾನಗಳನ್ನು ಗೆಲ್ಲುವ ಮೂಲಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ಮತ್ತು ಬಹುಮತ ಸಾಬೀತು ಪಡಿಸುವ ಆಶ್ವಾಸನೆ ನೀಡಿದರೂ ಸರಕಾರ ರಚನೆಗೆ ಅವಕಾಶ ಮಾಡಿಕೊಡದ ರಾಜ್ಯಪಾಲ ಆರ್ಲೇಕರ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತವಾಗಿದೆ. »04

ತಮಿಳುನಾಡಿನಲ್ಲಿ ಹೊಸ ಸರಕಾರ ರಚನೆ ಅನಿಶ್ಚಿತತೆಯಲ್ಲಿ ಪುದುಚೆರಿಯಲ್ಲಿರುವ ರೆಸಾರ್ಟ್‌ಗೆ ಶಿಫ್ಟ್ ಆಗಿರುವ ಎಐಎಡಿಎಂಕೆ ಶಾಸಕರು.

ದೀದಿ ಸರಕಾರ ವಜಾ

ಕೋಲ್ಕೊತಾ: ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಹಠಕ್ಕೆ ಬಿದ್ದಿರುವ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿಗೆ ರಾಜ್ಯಪಾಲ ಆರ್.ಎನ್. ರವಿ ಅವರು ಶಾಕ್ ನೀಡಿದ್ದಾರೆ. ಒಂದು ದಿನ ಮೊದಲೇ ಪಶ್ಚಿಮ ಬಂಗಾಳ ವಿಧಾನಸಭೆಯನ್ನು ಗುರುವಾರ ವಿಸರ್ಜಿಸಿದ್ದಾರೆ. ಇದರೊಂದಿಗೆ ಟಿಎಂಸಿ ಸರಕಾರದ ಅವಧಿ ಪೂರ್ಣಗೊಂಡಿದ್ದು, ಸಿಎಂ ಸ್ಥಾನ ಕಾನೂನು ಮಾನ್ಯತೆ ಕಳೆದುಕೊಂಡಿದೆ.

ವಿಭಜನೆಯತ್ತ ಎಐಎಡಿಎಂಕೆ

- ಸಿಪಿಐ, ಸಿಪಿಐ(ಎಂ) ನಾಯಕರ ಜತೆ ಟಿವಿಕೆ ಮುಖಂಡರ ಚರ್ಚೆ, ನಾಳೆ ನಿರ್ಧಾರ
- ಇಬ್ಬರು ಶಾಸಕರ ಬಲ ಹೊಂದಿರುವ 'ವಿಸಿಕೆ' ಸಹ ಶುಕ್ರವಾರ ಅಂತಿಮ ನಿರ್ಧಾರ
- ದಿನಕರನ್ ನೇತೃತ್ವದ 'ಎಂಎಂಕೆ' ಪಕ್ಷದ ಏಕೈಕ ಶಾಸಕನ ಬೆಂಬಲಕ್ಕೂ ಟಿವಿಕೆ ಮೊರೆ
- ಕುದುರೆ ವ್ಯಾಪಾರದ ಭೀತಿ, ಪುದುಚೆರಿ ರೆಸಾರ್ಟ್‌ಗೆ ಎಐಎಡಿಎಂಕೆ ಶಾಸಕರು ಶಿಫ್ಟ್
- ಟಿವಿಕೆ ಬೆಂಬಲಕ್ಕೆ ಸುಮಾರು 20 ಎಐಎಡಿಎಂಕೆ ಶಾಸಕರ ಒತ್ತಾಯ, ಪಳನಿಸ್ವಾಮಿ ವಿರೋಧ
- ಡಿಎಂಕೆ-ಎಡಿಎಂಕೆ ಮೈತ್ರಿ ಅಸಾಧ್ಯವೆಂದ ಉಭಯ ಪಕ್ಷಗಳ ಮುಖಂಡರು
- ವಿಜಯ್‌ಗೆ ಹೆಚ್ಚುವರಿ ಭದ್ರತೆ ವಾಪಸ್ ಪಡೆಯಲು ರಾಜ್ಯಪಾಲರ ಸೂಚನೆ

ಬಂಗಾಳದಲ್ಲಿ ನಿಲ್ಲದ ಹಿಂಸಾಚಾರ

ಕೋಲ್ಕೊತಾ: ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರ ಮುಂದುವರಿದಿದೆ. ಹೌರಾದಲ್ಲಿ ಅವಳಿ ಕಚ್ಚಾ ಬಾಂಬ್ ಸ್ಫೋಟದಿಂದ ಉದ್ವಿಗ್ನತೆ ಮತ್ತಷ್ಟು ಹೆಚ್ಚಿದೆ. ಸ್ಥಳಕ್ಕೆ ದೌಡಾಯಿಸಿದ ರ್‍ಯಾಪಿಡ್ ಆ್ಯಕ್ಷನ್ ಫೋರ್ಸ್ ಪಡೆಗಳು ಪರಿಸ್ಥಿತಿ ನಿಯಂತ್ರಿಸಿವೆ.

ಪ್ರಾಥಮಿಕ ತನಿಖೆ ಪ್ರಕಾರ ಬಿಜೆಪಿ ಅಲ್ಪಸಂಖ್ಯಾತ ಘಟಕದ ಮುಖಂಡ ಮನೋಜ್ ಖಾನ್ ಗುರಿಯಾಗಿಸಿಕೊಂಡು ಕಚ್ಚಾ ಬಾಂಬ್ ದಾಳಿ ನಡೆಸಲಾಗಿದೆ. ಅದೃಷ್ಟವಶಾತ್ ಖಾನ್ ಅಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದು ಬಂದಿದೆ. ಬಾಂಬ್ ದಾಳಿ ನಡೆಸಿದ ದುಷ್ಕರ್ಮಿಗಳು ಅಂಗಡಿ ಮುಂಗಟ್ಟುಗಳನ್ನು ಧ್ವಂಸಗೊಳಿಸಿದ್ದಾರೆ. ಘಟನೆಯಲ್ಲಿ ಹಲವು ನಾಗರಿಕರು ಗಾಯಗೊಂಡಿದ್ದಾರೆ. ದುಷ್ಕರ್ಮಿಗಳು ಬಾಂಬ್ ಸ್ಫೋಟಿಸುವ ಜತೆಗೆ ಜನರ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

''ಚುನಾವಣೆಯಲ್ಲಿ ಸೋಲು ಅನುಭವಿಸಿರುವ ತೃಣಮೂಲ ಕಾಂಗ್ರೆಸ್ ರಾಜ್ಯದಲ್ಲಿ ಹಿಂಸಾಚಾರ ಸೃಷ್ಟಿಸಿದೆ. ಟಿಎಂಸಿ ಗೂಂಡಾಗಳು ರಾಜ್ಯದಲ್ಲಿ ಅರಾಜಕತೆ ಉಂಟು ಮಾಡಲು ಯತ್ನಿಸಿದ್ದಾರೆ,'' ಎಂದು ಬಿಜೆಪಿ ದೂರಿದೆ.

ಕೇರಳದಲ್ಲೂ ಸಿಎಂ ಆಯ್ಕೆ ಕಗ್ಗಂಟು

ತ್ರಿವಳಿ ಪೈಪೋಟಿ ವರಿಷ್ಠರ ಹೆಗಲಿಗೆ ನಿರ್ಧಾರ

ತಿರುವನಂತಪುರ: ಕೇರಳದಲ್ಲಿ ಹತ್ತು ವರ್ಷಗಳ ಬಳಿಕ ಅಧಿಕಾರ ಹಿಡಿದಿರುವ ಕಾಂಗ್ರೆಸ್‌ಗೆ ಮುಖ್ಯಮಂತ್ರಿ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದೆ. ಮೂವರು ನಾಯಕರ ನಡುವಿನ ತೀವ್ರ ಪೈಪೋಟಿಯಿಂದ ಹೈಕಮಾಂಡ್ ಪೇಚಿಗೆ ಸಿಲುಕಿದೆ.

ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಗುರುವಾರ ನಡೆದ ಸಿಎಲ್‌ಪಿ ಸಭೆಯಲ್ಲೂ ಒಮ್ಮತದ ನಿರ್ಧಾರಕ್ಕೆ ಬರುವಲ್ಲಿ ವಿಫಲವಾದ ವೀಕ್ಷಕರು, ಮುಖ್ಯಮಂತ್ರಿ ಆಯ್ಕೆ ವಿಷಯವನ್ನು ಪಕ್ಷದ ವರಿಷ್ಠರ ಹೆಗಲಿಗೆ ವಹಿಸಿದ್ದಾರೆ.

ಕಳೆದ 10 ವರ್ಷ ಪ್ರತಿಪಕ್ಷ ನಾಯಕರಾಗಿದ್ದ ವಿ.ಡಿ.ಸತೀಶನ್, ಹಿರಿಯ ನಾಯಕ ರಮೇಶ್ ಚೆನ್ನಿತ್ತಲ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ನಡುವೆ ಸಿಎಂ ಹುದ್ದೆಗೆ ಪೈಪೋಟಿ ಏರ್ಪಟ್ಟಿದೆ.

ಶಾಸಕಾಂಗ ಸಭೆಗೆ ವೀಕ್ಷಕರಾಗಿ ಆಗಮಿಸಿದ್ದ ಹಿರಿಯ ನಾಯಕ ಮುಕುಲ್ ವಾಸ್ನಿಕ್ ಹಾಗೂ ಅಜಯ್ ಮಾಕೆನ್ ಅವರು ನೂತನ ಶಾಸಕಾಂಗ ನಾಯಕ ಆಯ್ಕೆ ಸಂಬಂಧ ಚುನಾಯಿತ ಶಾಸಕರ ಜತೆ ಸಮಾಲೋಚಿಸಿದರು. ಮೂವರು ಆಕಾಂಕ್ಷಿಗಳ ಹೆಸರು ಪ್ರಸ್ತಾಪಿಸಿ ಅಭಿಪ್ರಾಯ ಆಲಿಸಿದರು.

ಶ್ರೀಗಂಧ ಕಳ್ಳತನ ತಡೆಗೆ ಉಪಕ್ರಮ

ಬೆಂಗಳೂರು: ರಾಜ್ಯದ ಹೆಮ್ಮೆಯ ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ ಶ್ರೀಗಂಧವು ಪ್ರಮುಖ ಕಚ್ಚಾ ವಸ್ತುವಾಗಿದ್ದು, ಅದರ ಬೆಳೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ (ಕೆಎಸ್‌ಡಿಎಲ್) ಮಹತ್ವದ ಉಪಕ್ರಮ ರೂಪಿಸಿದೆ.

ಶ್ರೀಗಂಧದ ಮರ/ಗಿಡಗಳ ಕಳ್ಳತನ ತಡೆಯುವುದು ದೊಡ್ಡ ಸವಾಲಾಗಿದೆ. ಈ ನಿಟ್ಟಿನಲ್ಲಿ ಯಾರೇ ತಂತ್ರಜ್ಞಾನದ ನೆರವು ನೀಡಿದರೂ ಅದನ್ನು ಸ್ವೀಕರಿಸಲು ಸಂಸ್ಥೆ ಸಿದ್ಧ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

■ ಕೆಎಸ್‌ಡಿಎಲ್‌ಗೆ ತಂತ್ರಜ್ಞಾನ ಪೂರೈಸುವಂತೆ ಆಹ್ವಾನ

''ಇದರ ಭಾಗವಾಗಿ ಶ್ರೀಗಂಧ ಕಳ್ಳತನ ತಡೆಗೆ ಸಂಬಂಧಿಸಿದ ಸುಧಾರಿತ ಉಪಕರಣಗಳು ಅಥವಾ ಆಧುನಿಕ ತಂತ್ರಜ್ಞಾನಗಳ ಮಾಹಿತಿ ಹೊಂದಿರುವ ರೈತರು, ವಿಜ್ಞಾನಿಗಳು ಹಾಗೂ ಸಂಸ್ಥೆಗಳಿಗೆ ಕೆಎಸ್‌ಡಿಎಲ್ ಅನ್ನು ಸಂಪರ್ಕಿಸಿ ಮಾಹಿತಿ ಹಂಚಿಕೊಳ್ಳುವಂತೆ ಕೋರಲಾಗಿದೆ. ಸಂಸ್ಥೆಯ ಮುಂದೆ ಇಂತಹ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ನೀಡಲು ಅವಕಾಶ ಕಲ್ಪಿಸಲಾಗುವುದು. ಪ್ರಸ್ತಾಪಿತ ಪರಿಹಾರಗಳು ಸೂಕ್ತ ಹಾಗೂ ಪರಿಣಾಮಕಾರಿ ಎಂದು ಕಂಡುಬಂದರೆ ಅವುಗಳನ್ನು ಪರಿಗಣಿಸಿ ಅನುಷ್ಠಾನಗೊಳಿಸಲಾಗುವುದು. ಆಯ್ಕೆಯಾಗುವ ಯಾವುದೇ ತಂತ್ರಜ್ಞಾನದ ಬಳಕೆಗೆ ಬೇಕಾಗುವ ವೆಚ್ಚವನ್ನು ಕೆಎಸ್‌ಡಿಎಲ್ ಭರಿಸಲಿದೆ,'' ಎಂದು ಸಚಿವರು ಭರವಸೆ ನೀಡಿದ್ದಾರೆ.

ಉತ್ತೇಜನಕ್ಕೂ ಕ್ರಮ: ಶ್ರೀಗಂಧ ಬೆಳೆ ಉತ್ತೇಜಿಸಲು ಕೆಎಸ್‌ಡಿಎಲ್‌ಗೆ ಅತಿ ಹೆಚ್ಚು ಪ್ರಮಾಣದಲ್ಲಿ ಶ್ರೀಗಂಧ ಪೂರೈಸಿದ ನಾಲ್ವರು ರೈತರನ್ನು ಜೂನ್ 4ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು. ಜತೆಗೆ ಶ್ರೀಗಂಧ ಚೋರರನ್ನು ಬಂಧಿಸುವಲ್ಲಿ ಹಾಗೂ ಪ್ರಕರಣ ದಾಖಲಿಸುವಲ್ಲಿ ಗಮನಾರ್ಹ ಸಾಧನೆ ಮಾಡಿರುವ ಪೊಲೀಸ್ ಸಿಬ್ಬಂದಿ, ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಈ ಸಂಬಂಧ ಮಹತ್ವದ ಮಾಹಿತಿ ನೀಡಿದ ಸಾರ್ವಜನಿಕರನ್ನು ಪುರಸ್ಕರಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

''ತಮ್ಮ ಜಮೀನುಗಳಲ್ಲಿ ಶ್ರೀಗಂಧ ಬೆಳೆಸುತ್ತಿರುವ ರೈತರು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿ ಕಳ್ಳತನದ ಭೀತಿ ಎದುರಿಸುತ್ತಿದ್ದಾರೆ. ಶ್ರೀಗಂಧ ಮರಗಳ ಅಕ್ರಮ ಕಟಾವು ದಶಕಗಳಿಂದ ಮುಂದುವರಿದಿದ್ದು, ಇಂಥ ಕೃತ್ಯ ತಡೆಯಲು ಕಠಿಣ ಕಾನೂನುಗಳಿದ್ದರೂ ಶಿಕ್ಷೆಯಲ್ಲಿ ಕೊನೆಯಾಗುತ್ತಿರುವ ಪ್ರಕರಣಗಳ ಸಂಖ್ಯೆ ತುಂಬಾ ಕಡಿಮೆಯಿದೆ. ಈ ಹಿನ್ನೆಲೆಯಲ್ಲಿ ರೈತರಿಗೆ ಕಾನೂನು ಮತ್ತು ತಾಂತ್ರಿಕ ನೆರವು ನೀಡುವ ಜತೆಗೆ ಹೆಚ್ಚಿನ ಪ್ರಮಾಣದಲ್ಲಿ ಶ್ರೀಗಂಧ ಬೆಳೆ ಬೆಳೆಯಲು ಉತ್ತೇಜಿಸುವುದು ಸಂಸ್ಥೆಯ ಹೊಣೆಗಾರಿಕೆಯಾಗಿದೆ,'' ಎಂದು ಹೇಳಿದ್ದಾರೆ.

ಐಎನ್‌ಡಿಐಎ ಒಕ್ಕೂಟಕ್ಕೆ ನೈತಿಕತೆ ಇಲ್ಲ: ಬೊಮ್ಮಾಯಿ

ಹಾವೇರಿ: ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಹೀನಾಯವಾಗಿ ಸೋತರೂ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡದೇ ಭಂಡತನ ತೋರಿಸಿದ ಮಮತಾ ಬ್ಯಾನರ್ಜಿಗೆ ಬೆಂಬಲ ಕೊಡುತ್ತಿರುವ ಐಎನ್‌ಡಿಐಎ ಒಕ್ಕೂಟಕ್ಕೆ ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಪ್ರತಿಯೊಂದರಲ್ಲೂ ಸಂವಿಧಾನ ವಿರೋಧಿಯಾಗಿ ನಡೆದುಕೊಂಡಿದೆ. ಅದು ಸಂವಿಧಾನದ ಪ್ರಕಾರ ಮಹಿಳೆಯರು, ಬಡವರು, ಸಾಮಾನ್ಯ ಜನರನ್ನು ರಕ್ಷಣೆ ಮಾಡಿಲ್ಲ, ಚುನಾವಣೆಯಲ್ಲಿ ಹೀನಾಯ ಸೋಲು ಕಂಡರೂ ಮಮತಾ ಬ್ಯಾನರ್ಜಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲು ಭಂಡತನ ತೋರುತ್ತಿದ್ದು, ಅವರು ಪ್ರಜಾಪ್ರಭುತ್ವದ ಬದಲು ಸರ್ವಾಧಿಕಾರದಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ. ಅದು ಈಗ ಬಹಿರಂಗಗೊಂಡಿದೆ,'' ಎಂದು ಹೇಳಿದರು.

10 ಲಕ್ಷ ಜನ ಸೇರುವ ನಿರೀಕ್ಷೆ | ಪಾರ್ಕಿಂಗ್ ಮಾಹಿತಿಗೆ ಕ್ಯೂಆರ್ | ಸಿದ್ಧತೆ ಪರಿಶೀಲಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಕ್ಷಣಗಣನೆ

■ **ವಿಕ ಸುದ್ದಿಲೋಕ** ಚಿತ್ರದುರ್ಗ

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ 50ನೇ ವರ್ಷದ ಸಾರ್ಥಕ ಜನಸೇವೆ ಹಿನ್ನೆಲೆಯಲ್ಲಿ ಕೋಟೆನಾಡು ಚಿತ್ರದುರ್ಗದಲ್ಲಿ ಮೇ 9ರಂದು ಆಯೋಜಿಸಿರುವ ಅಭಿಮಾನೋತ್ಸವದ ಎಲ್ಲ ಸಿದ್ಧತೆಗಳು ಬಹುತೇಕ ಮುಕ್ತಾಯ ಹಂತದಲ್ಲಿದ್ದು, ಸಮಾವೇಶಕ್ಕೆ ಕ್ಷಣಗಣನೆ ಆರಂಭವಾಗಿದೆ.

ಸಮಾವೇಶದ ಸಿದ್ಧತೆಗಳು ಸಮರೋಪಾದಿಯಲ್ಲಿ ನಡೆದಿದ್ದು, ಹತ್ತು ಲಕ್ಷ ಜನರು ಸೇರುವ ನಿರೀಕ್ಷೆ ಇದೆ. ಸಮಾವೇಶಕ್ಕೆ ಆಗಮಿಸುವವರಿಗೆ ಊಟ, ಕುಡಿಯುವ ನೀರು, ಮಜ್ಜಿಗೆ, ವಾಹನ ಪಾರ್ಕಿಂಗ್, ಕುಳಿತುಕೊಳ್ಳಲು ಆಸನ ವ್ಯವಸ್ಥೆ ಹೀಗೆ ಪ್ರತಿಯೊಂದರ ಸಿದ್ಧತೆ ನಡೆದಿದೆ.

ಕಳೆದ ಒಂದು ವಾರದಿಂದ ಅಭಿಮಾನೋತ್ಸವದ ಸಂಘಟನಾ ಉಸ್ತುವಾರಿಗಳಾದ ತಮ್ಮೇಶ್‌ಗೌಡ, ಪ್ರೀತಂ ಗೌಡ, ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ಮತ್ತಿತರ ಗಣ್ಯರ ನೇತೃತ್ವದಲ್ಲಿ ಹಲವು ಸುತ್ತಿನ ಸಭೆಗಳು ನಡೆದಿವೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಿದ್ಧತೆ ಪರಿಶೀಲಿಸಿದ್ದಾರೆ.

400 ಎಕರೆಯಲ್ಲಿ ಪಾರ್ಕಿಂಗ್: ಸುಮಾರು 80 ಸಾವಿರ ವಾಹನಗಳಿಗೆ 400 ಎಕರೆ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ನಾಲ್ಕು ಜಾಗಗಳನ್ನು ಗುರುತಿಸಿದ್ದು, ವೇದಿಕೆ ಎದುರು ಎಲ್ಲ ಕಾರುಗಳಿಗೆ ನಿಲುಗಡೆ ವ್ಯವಸ್ಥೆ ಮಾಡಲಾಗಿದೆ. ವೇದಿಕೆ ಬಲಭಾಗದಲ್ಲಿ 40 ಸಾವಿರ ಕಾರುಗಳಿಗೆ, ವೇದಿಕೆ ಹಿಂಭಾಗದ ಶಾಲೆಯ ಮುಂಭಾಗ ಸೇರಿ ಇತರೆ ಕಡೆಗಳಲ್ಲಿ ಒಟ್ಟು ಹತ್ತು ಸಾವಿರ ಬಸ್‌ಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ವೇದಿಕೆಯ ಎಡಭಾಗದಲ್ಲಿ ಒಂದು ಸಾವಿರ ವಿಐಪಿಗಳ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಬೇರೆ ಬೇರೆ ಜಿಲ್ಲೆಗಳಿಂದ ವಾಹನಗಳಲ್ಲಿ ಬರುವವರಿಗೆ ಪಾರ್ಕಿಂಗ್ ಸಮಸ್ಯೆ, ಗೊಂದಲ ಆಗದಿರಲಿ ಎಂದು ಜಿಲ್ಲಾವಾರು ಪಾರ್ಕಿಂಗ್‌ಗೆ ಕ್ಯೂಆರ್ ಕೋಡ್ ಕಳುಹಿಸಲಾಗಿದೆ. ಯಾವ ಭಾಗದಲ್ಲಿ ಏನಿದೆ ಎಂದು ಸೂಚಿಸುವ ಸೈನ್ ಬೋರ್ಡ್ ಅಳವಡಿಸಲಾಗುತ್ತಿದೆ.



ಮೇ 8ರಂದು ನಡೆಯಲಿರುವ ಮಾಜಿ ಸಿಎಂ ಯಡಿಯೂರಪ್ಪರ ಪುರ ಪ್ರವೇಶದ ಅದ್ದೂರಿ ಮೆರವಣಿಗೆಗೆ ಸಜ್ಜಾಗಿರುವ ಸ್ತಬ್ಧಚಿತ್ರಗಳು.

ಊಟಕ್ಕಾಗಿ ಸಾವಿರ ಕೌಂಟರ್: ಬೆಂಗಳೂರಿನ ಎಲ್ಲ ಶಾಸಕರ ನೇತೃತ್ವದಲ್ಲಿ ಹತ್ತು ಲಕ್ಷ ಜನಕ್ಕೂ ಊಟದ ವ್ಯವಸ್ಥೆ ಮಾಡಲು ಸಾವಿರ ಕೌಂಟರ್ ಸಜ್ಜುಗೊಳಿಸಲಾಗುತ್ತಿದೆ. ಅಡುಗೆ ತಯಾರಿಗೆ ಆರು ಪಾಕಶಾಲೆಗಳಿವೆ. ಹತ್ತು ಲಕ್ಷ ವಾಟರ್ ಪ್ಯಾಕೆಟ್ ಅಲ್ಲದೆ ಟ್ಯಾಂಕರ್‌ಗಳಲ್ಲಿ ನೀರಿನ ವ್ಯವಸ್ಥೆ, ಬನ್, ಬಾಳೆಹಣ್ಣು ಮಜ್ಜಿಗೆ ನೀಡಲಾಗುವುದು. ಹಾಲ್‌ನಲ್ಲಿ ಈಗಾಗಲೇ ನೂರು ಬ್ಲಾಕ್‌ಗಳಲ್ಲಿ ಜನರನ್ನು ಕೂರಿಸಲು ಬ್ಲಾಕ್ ಸಿಸ್ಟಂ ಮಾಡಿದ್ದೇವೆ. ಬಿಸಿಲ ಧಗೆಯ ತೀವ್ರತೆ ತಟ್ಟದಿರುವಂತೆ ಹೈದರಾಬಾದ್‌ನಿಂದ ಮಿಸ್ಟ್ ಫ್ಯಾನ್ ತರಿಸಲಾಗಿದೆ.

ಸ್ಕ್ಯಾನ್ ಮಾಡುವ ಮೂಲಕ ವಾಹನ ನಿಲುಗಡೆಯ ಮಾಹಿತಿ ಪಡೆಯಬಹುದು.

ಶಾಸಕರು, ಮಾಜಿ ಶಾಸಕರು, ಸಂಸದರು, ಮಾಜಿ ಸಂಸದರು, ವಿಧಾನ ಪರಿಷತ್ ಸದಸ್ಯರು, ರಾಜ್ಯದ ಎಲ್ಲ ಮುಖಂಡರಿಗೂ ಪ್ರತ್ಯೇಕ ವೇದಿಕೆ ಸಿದ್ಧಪಡಿಸಲಾಗಿದೆ. ಇಡೀ ರಾಜ್ಯಾದ್ಯಂತ ಎಲ್ಲ ಭಾಗದ ಸ್ವಾಮೀಜಿಗಳು ಭಾಗಿಯಾಗಲಿದ್ದಾರೆ ಎಂದು ಸಂಘಟಕರು ಮಾಹಿತಿ ನೀಡಿದ್ದಾರೆ. ಮುರುಘಾಮಠ, ಮಾದಾರ ಚನ್ನಯ್ಯ ಗುರುಪೀಠ, ಭೋವಿ ಗುರುಪೀಠದ ಸೇರಿದಂತೆ ಎಲ್ಲ ಮಠಗಳಲ್ಲೂ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ.

120 ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದ್ದು, ಬಿಎಸ್‌ವೈ ಅವರು ರಾಜಕೀಯ ಸಂಘಟನೆಗಾಗಿ ಹಿಂದೆ ಬಳಸುತ್ತಿದ್ದ ಅಂಬಾಸಡರ್ ಕಾರನ್ನು ಪ್ರದರ್ಶಿಸಲಾಗುತ್ತಿದೆ. ಅವರ 50 ವರ್ಷಗಳ ಜನಸೇವೆ ದಾಖಲಿಸುವ ಅಭಿನಂದನಾ ಗ್ರಂಥ ಲೋಕಾರ್ಪಣೆ ಆಗಲಿದೆ. ಬಿ.ಎಸ್.ಯಡಿಯೂರಪ್ಪ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಇಬ್ಬರಿಗೂ ಅಭಿನಂದನೆ ನಡೆಯಲಿದೆ.

400 ಎಕರೆ ಪ್ರದೇಶದಲ್ಲಿ ಪಾರ್ಕಿಂಗ್	80,000 ವಾಹನ ನಿಲುಗಡೆಗೆ ವ್ಯವಸ್ಥೆ	120 ಎಲ್‌ಇಡಿ ಪರದೆ ಅಳವಡಿಕೆ	1,000 ಊಟದ ಕೌಂಟರ್	6 ಬೃಹತ್ ಅಡುಗೆ ಮನೆಗಳಲ್ಲಿ ವ್ಯವಸ್ಥೆ

ಐತಿಹಾಸಿಕ ಬಿಎಸ್‌ವೈ ಅಭಿಮಾನೋತ್ಸವವನ್ನು ಯಶಸ್ವಿಗೊಳಿಸಲು ವಿವಿಧ ಹಂತದ ಸಂಘಟನಾ ಕೆಲಸಗಳಲ್ಲಿ ಸುಮಾರು ಐದು ಸಾವಿರ ಜನ ಸ್ವಯಂ ಸೇವಕರಾಗಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಸಭಾಂಗಣದಲ್ಲಿ ಸುಮಾರು ಎರಡು ಸಾವಿರ ವ್ಯವಸ್ಥಾಪಕರು ಕೆಲಸ ಮಾಡುತ್ತಿದ್ದಾರೆ. ಅಡುಗೆ ಮನೆಯಲ್ಲಿ ಒಂದು ಸಾವಿರ ವ್ಯವಸ್ಥಾಪಕರು ಇದ್ದಾರೆ.

-**ತಮ್ಮೇಶ್‌ಗೌಡ** ಬಿಜೆಪಿ ರಾಜ್ಯ ಕಾರ್ಯದರ್ಶಿ

ಇಂದು ಬಿಎಸ್‌ವೈ ಪುರಪ್ರವೇಶ

ಬಿ.ಎಸ್. ಯಡಿಯೂರಪ್ಪರನ್ನು ಸ್ವಾಗತಿಸಲು ವಿಶೇಷವಾದ ವ್ಯವಸ್ಥೆ ಮಾಡಿದ್ದೇವೆ. ರಾಜ್ಯದ ನೂರಾರು ಹೆಸರಾಂತ ಕಲಾತಂಡಗಳು ಭಾಗವಹಿಸುತ್ತಿವೆ. ಆಯಾ ಜಿಲ್ಲೆಯ ಸಾಂಸ್ಕೃತಿಕ ಉಡುಗೆ ತೊಡುಗೆಗಳ ಸಹಿತ ಅನನ್ಯತೆ ಸಾರುವ ಕಲಾತಂಡಗಳು ಭಾಗವಹಿಸಲಿವೆ ಎಂದು ಸಂಘಟಕರು ತಿಳಿಸಿದ್ದಾರೆ.

ಯಡಿಯೂರಪ್ಪನವರು ತಮ್ಮ ಆಡಳಿತಾವಧಿಯಲ್ಲಿ ಜಾರಿಗೆ ತಂದಿದ್ದ ಎಲ್ಲ ಜನಪರ ಯೋಜನೆಗಳ ಟ್ಯಾಬ್ಲೋಗಳ ಪ್ರದರ್ಶನ ಇರುತ್ತದೆ. ಜತೆಗೆ ಸಾವಿರಾರು ರೈತರು ಹಸಿರು ಪೇಟ ಧರಿಸಿ, ಮೆರವಣಿಗೆಯಲ್ಲಿ ಸ್ವಾಗತಿಸಲಿದ್ದಾರೆ. ಚಿತ್ರದುರ್ಗದ ಎಲ್ಲ ಸಂಘ, ಸಂಸ್ಥೆಗಳು, ಬ್ರಾಹ್ಮಣ ಸಮಾಜ, ದಲಿತ ಸಮಾಜದ ಮುಖಂಡರು, ಕನ್ನಡ ಸಂಘಟನೆಗಳ ಹೋರಾಟಗಾರರು ಯಡಿಯೂರಪ್ಪನವರನ್ನು ಅಭಿನಂದಿಸಲಿದ್ದಾರೆ. 1,800 ಮಹಿಳೆಯರು ಪೂರ್ಣಕುಂಭ ಸ್ವಾಗತ ಕೋರಲಿದ್ದಾರೆ. 300 ಮಹಿಳೆಯರು ಒನಕೆ ಓಬವ್ವನ ವೇಷ ತೊಟ್ಟು ಭಾಗವಹಿಸಲಿದ್ದಾರೆ. ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಜನ ಶೋಭಾಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ.

ನೇಮಕದಲ್ಲಿ ಕ್ರೀಡಾ ಸಾಧಕರಿಗೆ 2% ಮೀಸಲು

■ **ವಿಕ ಸುದ್ದಿಲೋಕ** ಬೆಂಗಳೂರು

ಕ್ರೀಡೆಗಳಲ್ಲಿ ಸಾಧನೆ ಮಾಡಿದವರಿಗೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳ ನೇಮಕದಲ್ಲಿ ಶೇ.2ರಷ್ಟು ಮೀಸಲು ಕಲ್ಪಿಸುವ ಮಹತ್ವದ ತೀರ್ಮಾನವನ್ನು ಸಚಿವ ಸಂಪುಟ ಸಭೆ ಕೈಗೊಂಡಿದೆ.

ಸಂಪುಟ ಸಭೆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಚಿವ ಎಚ್.ಕೆ.ಪಾಟೀಲ್, ''ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಂಪುಟ ಸಭೆಯಲ್ಲಿ 'ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ) (ನೇಮಕಾತಿ) (ತಿದ್ದುಪಡಿ) ನಿಯಮ 2026'ಕ್ಕೆ ಅನುಮೋದನೆ ನೀಡಲಾಗಿದೆ. ಆ ಮೂಲಕ ಕ್ರೀಡೆಗಳಲ್ಲಿ ಸಾಧನೆ ಮಾಡಿದವರಿಗೆ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳ ನೇಮಕದಲ್ಲಿ ಶೇ.2ರಷ್ಟು ಮೀಸಲು ಅವಕಾಶ ಕಲ್ಪಿಸಿದಂತಾಗಲಿದೆ,'' ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕದಲ್ಲಿ 3 ಕೈಗಾರಿಕಾ ವಸಾಹತು: ''ಕಲಬುರಗಿ ಮತ್ತು ಯಾದಗಿರಿ ಭಾಗದಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನ ಮತ್ತು ಸ್ಟೇಟ್ ಸೆಕ್ಟರ್ ಯೋಜನೆಯಡಿ ಹೊಸ ಮೂರು ಕೈಗಾರಿಕಾ ವಸಾಹತುಗಳನ್ನು 200 ಕೋಟಿ ರೂ. ಮೊತ್ತದಲ್ಲಿ ಸ್ಥಾಪಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ,'' ಎಂದು ವಿವರಿಸಿದರು.

ಐಎಎಸ್ ಶ್ರೇಣಿಗೆ ಮುಂಬಡ್ತಿಗೆ ಸಮ್ಮತಿ

ಕೆಎಎಸ್ ಅಧಿಕಾರಿ ಕೆ.ಎ.ಹಿದಾಯತುಲ್ಲಾ ಅವರಿಗೆ ಐಎಎಸ್ ವೃಂದಕ್ಕೆ ಮುಂಬಡ್ತಿ ನೀಡಲು ಸಂಪುಟ ಸಭೆ ತೀರ್ಮಾನಿಸಿದೆ.

ಸುಪ್ರೀಂಕೋರ್ಟ್ ಕಳೆದ ಏ.15ರಂದು ನೀಡಿರುವ ಆದೇಶದಂತೆ ಹಿದಾಯತುಲ್ಲಾ ಅವರಿಗೆ ಐಎಎಸ್ ವೃಂದಕ್ಕೆ ಮುಂಬಡ್ತಿ ನೀಡಲು ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಪ್ರಮುಖ ನಿರ್ಣಯಗಳು



- ರಾಯಚೂರಿನ ಹಟ್ಟಿ ಚಿನ್ನದ ಗಣಿ ಟೌನ್‌ಶಿಪ್‌ಗೆ ಬಸವ ಸಾಗರ ಅಣೆಕಟ್ಟಿನಿಂದ ಕುಡಿಯುವ ನೀರು ಪೂರೈಸುವ 132.50 ಕೋಟಿ ರೂ. ಮೊತ್ತದ ಹೊಸ ಯೋಜನೆಗೆ ಆಡಳಿತಾತ್ಮಕ ಅನುಮೋದನೆ
- ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆವರಣದಲ್ಲಿ 22 ಕೋಟಿ ರೂ. ಮೊತ್ತದಲ್ಲಿ ಡಿಜಿಟಲ್ ತಾರಾಲಯ ಸ್ಥಾಪಿಸುವ ಸಂಬಂಧ 3ಡಿ–8ಕೆ ರೆಸಲ್ಯೂಷನ್ ಬದಲಿಗೆ 2ಡಿ–4ಕೆ ರೆಸಲ್ಯೂಷನ್‌ಗೆ ಪರಿಷ್ಕರಿಸಲು 2017ರ ಫೆ.16ರಂದು ಹೊರಡಿಸಿದ್ದ ಸರಕಾರಿ ಆದೇಶಕ್ಕೆ ತಿದ್ದುಪಡಿಗೆ ಅಸ್ತು
- ಕೋಲಾರದ ಬಂಗಾರಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಜ್ಯ ಹೆದ್ದಾರಿ– 5 ಹಾಗೂ ರಾಜ್ಯ ಹೆದ್ದಾರಿ– 95ರಲ್ಲಿ ಒಟ್ಟು 20.74 ಕಿ.ಮೀ. ಉದ್ದದ ಚತುಷ್ಪಥ ರಸ್ತೆ ನಿರ್ಮಿಸುವ ಸಂಬಂಧ 2 ಕಾಮಗಾರಿಗಳನ್ನು 66 ಕೋಟಿ ರೂ. ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆ
- ಮೈಸೂರಿನ ಚಾಮರಾಜೇಂದ್ರ ಮೃಗಾಲಯ ಮತ್ತು ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 'ಇಮರ್ಸಿವ್ ರೂಮ್ ಮತ್ತು ಡಿಜಿಟಲ್ ಮೃಗಾಲಯ ಮಾರ್ಗದರ್ಶಿ' ಯೋಜನೆಯನ್ನು ಪಿಪಿಪಿ ಮಾದರಿಯಲ್ಲಿ ಕ್ರಮವಾಗಿ 44.62 ಕೋಟಿ ರೂ. ಹಾಗೂ 35.22 ಕೋಟಿ ರೂ. ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಒಪ್ಪಿಗೆ
- ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 'ಸಾರ್ವಜನಿಕ ಮತ್ಸ್ಯಾಗಾರ ಅಭಿವೃದ್ಧಿ ಯೋಜನೆ'ಯನ್ನು ಪಿಪಿಪಿ ಮಾದರಿಯಲ್ಲಿ 30 ವರ್ಷ ಅವಧಿಗೆ 144.40 ಕೋಟಿ ರೂ. ಅಂದಾಜು ಮೊತ್ತದಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಬಿಎಫ್‌ಒಟಿ) ಆಧಾರದಲ್ಲಿ ಕಾರ್ಯಗತಗೊಳಿಸಲು ಅನುಮೋದನೆ
- ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯನ್ನು 400ರಿಂದ 600 ಹಾಸಿಗೆ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸಲು 180 ಕೋಟಿ ರೂ. ಮೊತ್ತದ ಕಾಮಗಾರಿಗಳಿಗೆ ಅನುಮೋದನೆ
- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನಲ್ಲಿನ ಘಾಟಿ ಸುಬ್ರಹ್ಮಣ್ಯ ದೇವಾಲಯದ ಸಮಗ್ರ ಅಭಿವೃದ್ಧಿ ಕಾಮಗಾರಿಯನ್ನು 23.76 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲು ಒಪ್ಪಿಗೆ
- ದ.ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಮಾಸ್ಟರ್ ಪ್ಲಾನ್ ಯೋಜನೆಯ 3ನೇ ಹಂತದ ಕಾಮಗಾರಿಗಳನ್ನು 604.65 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲು ಒಪ್ಪಿಗೆ

ಕಾಂಗ್ರೆಸ್ ಭವನಕ್ಕೆ 2 ಕಡೆ ಜಮೀನು

- ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಚಾಂತಾರು ಗ್ರಾಮದಲ್ಲಿ 20 ಸೆಂಟ್ ಜಮೀನನ್ನು ಬ್ರಹ್ಮಾವರ ಬ್ಲಾಕ್ ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣಕ್ಕಾಗಿ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಮಂಜೂರು ಮಾಡಲು ಒಪ್ಪಿಗೆ
- ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕಾಗಿ ಧಾರವಾಡ ತಾಲೂಕಿನ ಮಾಳಾಪೂರ ಗ್ರಾಮದ ಬ್ಲಾಕ್ ನಂ.30ರಲ್ಲಿನ 5 ಗುಂಟೆ ಜಮೀನನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಮಂಜೂರು ಮಾಡಲು ಒಪ್ಪಿಗೆ

ರಾಜ್ಯ ಶಿಕ್ಷಣ ನೀತಿ ಜಾರಿ ಸದ್ಯಕ್ಕಿಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಬದಲಿಗೆ ರಾಜ್ಯ ಶಿಕ್ಷಣ ನೀತಿ ಜಾರಿ ಮಾಡುವ ಸಂಬಂಧ ಪ್ರೊ. ಸುಖದೇವ್ ಥೋರಟ್ ಆಯೋಗದ ಅಂತಿಮ ವರದಿ ಆಧರಿಸಿ ಸೂಕ್ತ ತೀರ್ಮಾನಕ್ಕಾಗಿ ಶಿಫಾರಸು ಮಾಡಲು ಸಂಪುಟ ಉಪಸಮಿತಿ ರಚಿಸಲು ಸಿಎಂ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆ ನಿರ್ಧರಿಸಿತು.

''ಪ್ರೊ.ಥೋರಟ್ ಆಯೋಗದ ವರದಿ ಶಿಫಾರಸುಗಳನ್ನು ಸಮಗ್ರವಾಗಿ ಚರ್ಚಿಸಿ ಅನುಷ್ಠಾನದ ಬಗ್ಗೆ ಉಪಸಮಿತಿ ತೀರ್ಮಾನಿಸಲಿದ್ದು, ಈ ಸಮಿತಿ ರಚಿಸುವ ಅಧಿಕಾರವನ್ನು ಸಿಎಂ ಅವರಿಗೆ ಕ್ಯಾಬಿನೆಟ್ ನೀಡಿತು,'' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

''ಕಳೆದ ವಾರದ ಕ್ಯಾಬಿನೆಟ್‌ನಲ್ಲೂ ರಾಜ್ಯ ಶಿಕ್ಷಣ ನೀತಿ ಜಾರಿ ಕುರಿತು ಚರ್ಚೆ ನಡೆದಿತ್ತು. ಗುರುವಾರ ಇನ್ನಷ್ಟು ಸುದೀರ್ಘ ಚರ್ಚೆ ನಡೆಯಿತು. ಯುಜಿಸಿ ಮಾಜಿ ಮುಖ್ಯಸ್ಥರೂ ಆದ ಪ್ರೊ. ಥೋರಟ್ ಅವರನ್ನು ಸಂಪುಟ ಸಭೆಗೆ ಕರೆಸಿಕೊಂಡು ಪ್ರಾತ್ಯಕ್ಷಿಕೆ ಸಹಿತ ವಿವರ ಪಡೆಯಲಾಗಿದೆ,'' ಎಂದರು.

ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಜಾರಿಗೊಳಿಸಿದ್ದ ಎನ್‌ಇಪಿ ವಿರೋಧಿಸಿದ್ದ ಕಾಂಗ್ರೆಸ್ ತನ್ನ 2023ರ ಚುನಾವಣಾ ಪ್ರಣಾಳಿಕೆಯಲ್ಲಿ ರಾಜ್ಯ ಶಿಕ್ಷಣ ನೀತಿ ಜಾರಿ ಮಾಡುವುದಾಗಿ ಘೋಷಿಸಿತ್ತು.

ಕುಸಿದು ಬಿದ್ದ ಥೋರಟ್

ರಾಜ್ಯ ಶಿಕ್ಷಣ ನೀತಿ ರೂಪಿಸಿದ್ದ ಆಯೋಗದ ಅಧ್ಯಕ್ಷ ಪ್ರೊ. ಸುಖದೇವ್ ಥೋರಟ್ ತಮ್ಮ ವರದಿ ಸಂಬಂಧ ಪ್ರಾತ್ಯಕ್ಷಿಕೆ ನೀಡಲು ಸಂಪುಟ ಸಭೆಗೆ ಆಗಮಿಸಿದ್ದರು. ಈ ವೇಳೆ ಅವರು ಆಯಾಸಗೊಂಡು ಕುಸಿದು ಬಿದ್ದರು. ತಕ್ಷಣವೇ ವೈದ್ಯರೂ ಆಗಿರುವ ಐಎಎಸ್ ಅಧಿಕಾರಿ ಡಾ.ವಿಶಾಲ್ ತಪಾಸಣೆ ಮಾಡಿದರು. ಜತೆಗೆ ಅವರಿಗೆ ಹಣ್ಣಿನ ರಸ ನೀಡಲಾಯಿತು. ಬಳಿಕ ವೈದ್ಯರನ್ನು ಕರೆಸಿ ತುರ್ತು ಚಿಕಿತ್ಸೆ ಕೊಡಿಸಲಾಯಿತು. ನಂತರ ಚೇತರಿಸಿಕೊಂಡ ಅವರು ಮತ್ತೆ ಪ್ರಾತ್ಯಕ್ಷಿಕೆ ನೀಡಿದರು.

ಒಳಮೀಸಲು ಆಧರಿಸಿ ನೇಮಕ ಪರಿಶೀಲನೆ: ಪರಿಶಿಷ್ಟ ಒಳಮೀಸಲು ನಿಗದಿಯಾದ ಬಳಿಕ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಆಗಿರುವ ಪ್ರಗತಿ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ನಡೆಯಿತು. ಯಾವ್ಯಾವ ನೇಮಕಾತಿ ಪ್ರಾಧಿಕಾರಗಳು, ಎಷ್ಟೆಷ್ಟು ಹುದ್ದೆಗಳಿಗೆ ನೇಮಕ ಅಧಿಸೂಚನೆ ಹೊರಡಿಸಿವೆ ಎಂಬ ಬಗ್ಗೆ ಸಭೆ ಮಾಹಿತಿ ಪಡೆದುಕೊಂಡಿತು. ಹಣಕಾಸು ಇಲಾಖೆ ಅನುಮೋದನೆ ಪಡೆದಿರುವ ಎಲ್ಲ 56,432 ಹುದ್ದೆಗಳ ನೇಮಕ ಪ್ರಕ್ರಿಯೆ ವಿಳಂಬವಿಲ್ಲದೆ ಅತ್ಯಂತ ಪಾರದರ್ಶಕವಾಗಿ ನಡೆಯಬೇಕು ಎಂದು ಸಿಎಂ ಸೂಚಿಸಿದರು.

ಕಾಂಗ್ರೆಸ್‌ಗೆ ಸಚಿವ ಸ್ಥಾನಕ್ಕೆ ಭಿಕ್ಷೆ ಬೇಡುವ ಸ್ಥಿತಿ

■ **ವಿಕ ಸುದ್ದಿಲೋಕ** ಬೆಂಗಳೂರು

ತಮಿಳುನಾಡಿನಲ್ಲಿ ಡಿಎಂಕೆ ಜತೆಗಿದ್ದ ಕಾಂಗ್ರೆಸ್ ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷ ಹೆಚ್ಚಿನ ಸ್ಥಾನ ಪಡೆಯುತ್ತಿದ್ದಂತೆ ರಾತ್ರೋರಾತ್ರಿ ಆ ಪಕ್ಷದ ಮುಂದೆ ಹೋಗಿ ಸಚಿವ ಸ್ಥಾನಕ್ಕೆ ಭಿಕ್ಷೆ ಬೇಡುತ್ತಿದೆ. ಡಿಎಂಕೆ ಸಖ್ಯ ಬಿಟ್ಟ ಕಾಂಗ್ರೆಸ್ ಸ್ಥಿತಿ ಭಿಕ್ಷುಕರ ರೀತಿ ಆಗಿದೆ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದ್ದಾರೆ.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಗುರುವಾರ ಮಾತನಾಡಿದ ಅವರು, ''ತಮಿಳುನಾಡಿನಲ್ಲಿ ಕಾಂಗ್ರೆಸ್ ನಡೆ ಗಮನಿಸಿದರೆ ರಾಷ್ಟ್ರೀಯ ಪಕ್ಷ ಕಾಂಗ್ರೆಸ್‌ಗೆ ಎಂತಹ ಹೀನಾಯ ಸ್ಥಿತಿ ಬಂದಿದೆ ಎಂಬುದು ಗೊತ್ತಾಗುತ್ತದೆ,'' ಎಂದರು.

''ಪಂಚರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಗೆ ಅಭೂತಪೂರ್ವ ಜಯ ಸಿಕ್ಕಿದೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಆಡಳಿತದಲ್ಲಿ ಜನ ನರಕಯಾತನೆ ಅನುಭವಿಸುತ್ತಿದ್ದರು. ಆ ನರಕದಿಂದ ಜನರನ್ನು ಪ್ರಧಾನಿ ಮೋದಿಯವರು ಹೊರತಂದಿದ್ದಾರೆ. ಗೆದ್ದ ಶಾಸಕರು ಯಾವುದಾದರೂ ರಸ್ತೆಗೆ ಈಗ ಬಂದರೆ ಹೆಣ್ಣುಮಕ್ಕಳು ಕೈ ಮುಗಿದು ತಮ್ಮನ್ನು ರಕ್ಷಿಸುವಂತೆ ಮನವಿ ಮಾಡುತ್ತಿದ್ದಾರೆ ಎಂದರೆ ಅಲ್ಲಿ ಯಾವ ಸ್ಥಿತಿ ಇತ್ತು ಎಂದು ಯೋಚಿಸಬಹುದು,'' ಎಂದು ಹೇಳಿದರು.

ಬಿಜೆಪಿ ಜತೆಗೆ ಪರಿಶಿಷ್ಟ ಜಾತಿ- ವರ್ಗ: ''ಪಂಚರಾಜ್ಯ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ, ವರ್ಗದ ಜನ ಹೆಚ್ಚಿನ ಪ್ರಮಾಣದಲ್ಲಿ ಬಿಜೆಪಿ ಬೆಂಬಲಿಸಿದ್ದಾರೆ. ಆದರೆ ಕಾಂಗ್ರೆಸ್‌ಗೆ ಮುಸ್ಲಿಮರು ಸಾಕಷ್ಟು ಬೆಂಬಲ ಕೊಟ್ಟಿದ್ದಾರೆ. ಅಸ್ಸಾಂನಲ್ಲಿ ಕಾಂಗ್ರೆಸ್‌ನ 19 ಶಾಸಕರಲ್ಲಿ ಪರಿಶಿಷ್ಟ ಜಾತಿಯ ಒಬ್ಬರನ್ನು ಹೊರತುಪಡಿಸಿ ಉಳಿದವರೆಲ್ಲಾ ಮುಸ್ಲಿಮರು. ಕರ್ನಾಟಕದಲ್ಲಿ ಮುಂದೆ ನಡೆಯುವ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ, ವರ್ಗಗಳು ಬಿಜೆಪಿ ಜತೆಗೆ ನಿಲ್ಲಲಿದ್ದಾರೆ. ಇಲ್ಲಿಯೂ ಕಾಂಗ್ರೆಸ್‌ಗೆ ಪಾಠ ಕಲಿಸಬೇಕೆಂದು ಮುಸ್ಲಿಂ ಸಮುದಾಯಗಳು ನಿರ್ಧರಿಸಿವೆ,'' ಎಂದು ಹೇಳಿದರು.

''ಮಾತೆತ್ತಿದರೆ ತಾವು ಅಹಿಂದ ಪರ ಎನ್ನುವವರು ಅಹಿಂದ ವರ್ಗಗಳಿಗೆ ಚುನಾವಣೆಯಲ್ಲಿ ಅವಕಾಶವನ್ನೇ ನೀಡಿಲ್ಲ. ಹಿಂದುಳಿದ ವರ್ಗಕ್ಕೆ ಸೇರಿದಂತೆ ಪ್ರಧಾನಿ ಮೋದಿಯವರೂ ಅಹಿಂದ ವರ್ಗದವರು. ಹಾಗಾಗಿ ಮೋದಿಯವರ ನಾಯಕತ್ವಕ್ಕೆ ದೇಶಾದ್ಯಂತ ಅಹಿಂದ ವರ್ಗದವರು ಬೆಂಬಲ ನೀಡುತ್ತಿದ್ದಾರೆ. ಇದನ್ನು ಇಲ್ಲಿನ ನಾಯಕರು ಅರ್ಥ ಮಾಡಿಕೊಳ್ಳಬೇಕು,'' ಎಂದು ತಿಳಿಸಿದರು.

ಜಿಬಿಎ ಚುನಾವಣೆಗೆ ಹಣವಿಲ್ಲವೆಂದರೆ ಹೇಗೆ?

ಬೆಂಗಳೂರು: ಜಿಬಿಎ ವ್ಯಾಪ್ತಿಯ ಪಂಚ ಪಾಲಿಕೆಗಳಿಗೆ ಚುನಾವಣೆ ಸಮೀಪಿಸುತ್ತಿದ್ದು, ಚುನಾವಣೆ ನಡೆಸಲು ಹಣವಿಲ್ಲ ಎಂದು ರಾಜ್ಯ ಸರಕಾರ ಹೇಳುತ್ತಿದೆ. ಚುನಾವಣೆಗೂ ಹಣವಿಲ್ಲದವರು ಸರಕಾರವನ್ನು ಹೇಗೆ ನಡೆಸುತ್ತಾರೆ? ಗುಂಡಿ ಮುಚ್ಚಲು ಸಾವಿರಾರು ಕೋಟಿ ರೂ. ವ್ಯಯಿಸುವುದು ಹೇಗೆ ಎಂದು ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಗುರುವಾರ ಮಾತನಾಡಿದ ಅವರು, ''ಚುನಾವಣೆ ನಡೆಸಲು ಹಣವಿಲ್ಲ ಎನ್ನುವ ಸರಕಾರ 2025–26ನೇ ಸಾಲಿನಲ್ಲಿ ನಗರದಲ್ಲಿ ಡಾಂಬರೀಕರಣ, ರಸ್ತೆ ಗುಂಡಿ ಮುಚ್ಚಲು 1,040 ಕೋಟಿ ರೂ. ವೆಚ್ಚ ಮಾಡಿದೆ. ಯಾವುದಕ್ಕೂ ಲೆಕ್ಕವೇ ಇಲ್ಲ. ಸರಿಯಾಗಿ ರಸ್ತೆ ಗುಂಡಿ ಮುಚ್ಚಲು ಆಗದವರು ಬೆಂಗಳೂರನ್ನು ಯಾವ ರೀತಿ ನಿಭಾಯಿಸುತ್ತಾರೆ. ಈಗಲೂ ಒಂದೊಂದು ರಸ್ತೆಯಲ್ಲಿ ಹತ್ತಾರು ಗುಂಡಿಗಳಿವೆ. ಹಾಗಾದರೆ ಗುಂಡಿ ಮುಚ್ಚಿರುವುದಾದರೂ ಎಲ್ಲಿ? ಚಾಮರಾಜಪೇಟೆಯಲ್ಲಿ ಒಂದು ಗುಂಡಿ ಮುಚ್ಚಲು ಒಂದು ಲಕ್ಷ ರೂ. ವ್ಯಯಿಸಿರುವ ಲೆಕ್ಕ ನೀಡಿದ್ದು, ಇದರಲ್ಲೂ ಸರಕಾರ ಲೂಟಿ ಮಾಡಿದೆ,'' ಎಂದು ಆರೋಪಿಸಿದರು.

ಸಚಿವ ಸಂಪುಟ ಪುನಾರಚನೆಯೋ, ನಾಯಕತ್ವ ಬದಲಾವಣೆಯೋ?

ಹೈಕಮಾಂಡ್ ಸ್ಪಷ್ಟ ತೀರ್ಮಾನಕ್ಕೆ ಬರಲಿ

■ **ವಿಕ ಸುದ್ದಿಲೋಕ** ಮೈಸೂರು

ಸಚಿವ ಸಂಪುಟ ಪುನರ್ ರಚನೆ ಮಾಡಬೇಕಾ ಅಥವಾ ನಾಯಕತ್ವ ಬದಲಾವಣೆ ಮಾಡಬೇಕಾ ಎಂಬುದರ ಬಗ್ಗೆ ಹೈಕಮಾಂಡ್ ಕೈಗೊಳ್ಳುವ ತೀರ್ಮಾನಕ್ಕೆ ನಾವೆಲ್ಲರೂ ಬದ್ಧ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ಪಕ್ಷ, ಸರಕಾರದ ಮೇಲೆ ದುಷ್ಪರಿಣಾಮ ಬೀರುವ ಮುನ್ನ ಗೊಂದಲ ಇತ್ಯರ್ಥಪಡಿಸಬೇಕು,'' ಎಂದರು.

''ರಾಜ್ಯದಲ್ಲಿ ಏನು ಬೆಳವಣಿಗೆ ನಡೆಯುತ್ತಿದೆ ಎಂಬುದು ನಮಗಿಂತ ಚೆನ್ನಾಗಿ ಮಾಧ್ಯಮದವರಿಗೆ ಗೊತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಎಲ್ಲವನ್ನೂ ಹೇಳಿದ್ದಾರೆ. ಹೈಕಮಾಂಡ್ ಬಯಸಿದರೆ ಐದು ವರ್ಷಗಳ ಕಾಲ ಮುಂದುವರಿಯುವ ಮಾತನ್ನಾಡಿದ್ದಾರೆ. ಅದೇ ರೀತಿ ಹೈಕಮಾಂಡ್ ಕೈಗೊಳ್ಳುವ ತೀರ್ಮಾನಕ್ಕೂ ಬದ್ಧ ಎಂದಿದ್ದಾರೆ,'' ಎಂದರು.

''ಈ ವಿಚಾರದಲ್ಲಿ ಗೊಂದಲ ಮುಂದುವರಿದರೆ ಸರಕಾರ ಮತ್ತು ಪಕ್ಷದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಹಾಗಾಗಿ, ಕಾಂಗ್ರೆಸ್ ಹೈಕಮಾಂಡ್ ಸ್ಪಷ್ಟ ತೀರ್ಮಾನಕ್ಕೆ ಬರಬೇಕು. ವರಿಷ್ಠರನ್ನು ಭೇಟಿ ಮಾಡಿದಾಗ ಇದೇ ವಿಚಾರ ಹೇಳಿದ್ದೇನೆ. ಮತ್ತೊಮ್ಮೆ ಅದನ್ನೇ ಒತ್ತಾಯಿಸುವೆ,'' ಎಂದರು.

ಮೈಸೂರಿನ ಶಾರದಾದೇವಿನಗರದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸದಲ್ಲಿ ಸಿಎಂ ಜತೆ ಮಾತುಕತೆ ನಡೆಸಿ ಹೊರಬಂದ ಮಾಜಿ ಸಚಿವ ಕೆ.ಎನ್.ರಾಜಣ್ಣ.

ಮೇ 15ರೊಳಗೆ ಡಿ.ಕೆ.ಶಿವಕುಮಾರ್ ಅವರಿಗೆ ಶುಭ ಸುದ್ದಿ ಸಿಗುತ್ತದೆ ಎನ್ನುವ ಬಗ್ಗೆ ಪ್ರತಿಕ್ರಿಯಿಸಿ, ''ರಾಜಕಾರಣದಲ್ಲಿ ಆಶಾವಾದಿಗಳಾಗಿರಬೇಕು. ಮುಖ್ಯಮಂತ್ರಿ ಸ್ಥಾನಕ್ಕೆ ಒಂದು ಡಜನ್ ಆಕಾಂಕ್ಷಿಗಳಿದ್ದಾರೆ. ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ್, ಎಂ.ಬಿ.ಪಾಟೀಲ್ ಸೇರಿದಂತೆ ಅನೇಕರು ಇದ್ದಾರೆ. ಆಸೆ ಪಡುವುದು ತಪ್ಪಲ್ಲ. ಅಂತಿಮವಾಗಿ ಹೈಕಮಾಂಡ್ ತೀರ್ಮಾನಿಸುತ್ತದೆ,'' ಎಂದರು.

''ನಾಯಕತ್ವ ಬದಲಾವಣೆ ಬಗ್ಗೆ ನಾನೇನೂ ಹೇಳಲಾರೆ. ಆಗಬಹುದು ಅಥವಾ ಆಗದಿರಬಹುದು. ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ, ನಾನು ನಿತ್ಯ ಸಚಿವನಾಗಿದ್ದೇನೆ,'' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕುತೂಹಲ ಮೂಡಿಸಿದ ಸಿಎಂ ಭೇಟಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಮಧುಗಿರಿ ಶಾಸಕ ಕೆ.ಎನ್. ರಾಜಣ್ಣ ಗುರುವಾರ ಭೇಟಿ ನೀಡಿ ಚರ್ಚಿಸಿದರು. ನಾಯಕತ್ವ ಬದಲಾವಣೆ ಚರ್ಚೆಯ ಹೊತ್ತಿನಲ್ಲಿ ಈ ಭೇಟಿ ಕುತೂಹಲ ಮೂಡಿಸಿದೆ. ಬೆಳಗ್ಗೆ 9.30ರ ಸುಮಾರಿಗೆ ಭೇಟಿ ನೀಡಿದ ಅವರು ಅರ್ಧ ಗಂಟೆಗೂ ಹೆಚ್ಚು ಕಾಲ ಸಿಎಂ ಅವರೊಂದಿಗೆ ಗೌಪ್ಯವಾಗಿ ಚರ್ಚಿಸಿದರು. ಖಾಸಗಿ ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಬಂದಿರುವೆ ಎಂದಷ್ಟೇ ಮಾಧ್ಯಮದವರಿಗೆ ರಾಜಣ್ಣ ತಿಳಿಸಿದರು.

ಮರು ಮತ ಎಣಿಕೆಗೆ ಪರಾಮರ್ಶೆ

ಚಿಕ್ಕಮಗಳೂರು: ಮೂಡಿಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಕಡಿಮೆ ಮತಗಳ ಅಂತರದಿಂದ ತಾವು ಸೋಲನ್ನು ಕಂಡಿದ್ದು, ಕಾನೂನು ತಜ್ಞರ ಅಭಿಪ್ರಾಯ ಪಡೆದು ಮರುಮತ ಎಣಿಕೆ ಬಗ್ಗೆ ಪ್ರಸ್ತಾಪಿಸಲು ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದು ಪರಾಜಿತ ಅಭ್ಯರ್ಥಿ ದೀಪಕ್ ದೊಡ್ಡಯ್ಯ ಹೇಳಿದರು.

ಮೂಡಿಗೆರೆ ಕ್ಷೇತ್ರ

''2023ರ ಚುನಾವಣೆಯಲ್ಲಿ ನಾನು ಕೂಡ 720 ಮತಗಳ ಅಂತರದಲ್ಲಿ ಸೋಲು ಕಂಡಿದ್ದೇನೆ. ಶೃಂಗೇರಿ ಅಂಚೆ ಮತಗಳ ಮೂಲಕ ಬಿಜೆಪಿ ಅಭ್ಯರ್ಥಿಗೆ ಅನ್ಯಾಯ ಆಗಿತ್ತು. ಅದೇ ರೀತಿ ಮೂಡಿಗೆರೆ ಕ್ಷೇತ್ರದಲ್ಲಿ ಏಕೆ ಆಗಿರಬಾರದು ಎಂಬ ಸಂಶಯವನ್ನು ಸಾರ್ವಜನಿಕರು ವ್ಯಕ್ತಪಡಿಸುತ್ತಿದ್ದಾರೆ. ಹೀಗಾಗಿ ಕಾನೂನು ತಜ್ಞರ ಅಭಿಪ್ರಾಯ ಪಡೆದು ಮುಂದುವರಿಯುತ್ತೇನೆ,'' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೆರಿಯಲ್ಲಿ ಬಿಜೆಪಿ ಜಯಭೇರಿ

ಪ್ರಧಾನಿಗೆ ಅದ್ದೂರಿ ಅಭಿನಂದನೆಗೆ ಸಿದ್ಧತೆ

■ **ವಿಕ ಸುದ್ದಿಲೋಕ** ಬೆಂಗಳೂರು

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೆರಿಯಲ್ಲಿ ಬಿಜೆಪಿ ಜಯಭೇರಿ ಬಳಿಕ ಮೊದಲ ಬಾರಿ ರಾಜ್ಯಕ್ಕೆ ಇದೇ 10ರಂದು ಭೇಟಿ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅದ್ದೂರಿ ಸ್ವಾಗತ ನೀಡಿ ಅಭಿನಂದನೆ ಸಲ್ಲಿಸಲು ಬಿಜೆಪಿಯು ಸಮರೋಪಾದಿಯಲ್ಲಿ ಸಿದ್ಧತೆ ನಡೆಸಿದೆ.

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರು ಗುರುವಾರವೂ ಬೆಂಗಳೂರಿನ ಪ್ರಮುಖರೊಂದಿಗೆ ಸಭೆ ನಡೆಸಿ ಸಿದ್ಧತಾ ಕಾರ್ಯಗಳ ಬಗ್ಗೆ ಚರ್ಚಿಸಿದರು. ವೇದಿಕೆ ಕಾರ್ಯಕ್ರಮ ನಡೆಯಲಿರುವ ಎಚ್‌ಎಎಲ್ ವಿಮಾನ ನಿಲ್ದಾಣದ ಪಾರ್ಕಿಂಗ್ ಸ್ಥಳದಲ್ಲಿ ಸ್ವಚ್ಛತಾ ಕಾರ್ಯ, ವೇದಿಕೆ ನಿರ್ಮಾಣ ಸೇರಿದಂತೆ ಇತರೆ ವ್ಯವಸ್ಥೆಗಳ ಬಗ್ಗೆ ಸಮಾಲೋಚಿಸಿದರು. 15,000ಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದ್ದು, ಸಾರ್ವಜನಿಕರಿಗೂ ಮುಕ್ತ ಅವಕಾಶ ಕಲ್ಪಿಸಲಾಗಿದೆ.

ಈ ಬಗ್ಗೆ ಮಾಹಿತಿ ನೀಡಿದ ಅಶೋಕ್, ''ಪಂಚ ರಾಜ್ಯ ಚುನಾವಣೆ ಬಳಿಕ ಮೇ 10ರಂದು ಮೊದಲ ಬಾರಿಗೆ ಬೆಂಗಳೂರಿಗೆ ಆಗಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬೆಂಗಳೂರು ಜನತೆ ಪರವಾಗಿ ಅಭಿನಂದನೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಬಿಜೆಪಿಯ ಸಾಧನೆ ಇಡೀ ಜಗತ್ತಿಗೆ ಗೊತ್ತಾಗಿದ್ದು, ಅಮೆರಿಕದ ಅಧ್ಯಕ್ಷರು ಕೂಡ ಪ್ರಧಾನಿಗೆ ಅಭಿನಂದನೆ ಹೇಳಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಮೊದಲ ಬಾರಿಗೆ ಬಿಜೆಪಿ ಸರಕಾರ ರಚಿಸುತ್ತಿರುವುದು ಪಕ್ಷಕ್ಕೆ ಕೀರ್ತಿ ತರುವ ಸಂಗತಿ,'' ಎಂದು ಹೇಳಿದರು.

ನಾಗರಿಕರಿಗೆ ಮುಕ್ತ ಆಹ್ವಾನ: ''ಭಾನುವಾರ ಬೆಳಗ್ಗೆ 9 ಗಂಟೆಗೆ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸುವ ಪ್ರಧಾನಿಯವರಿಗೆ ಗೌರವ ಸಲ್ಲಿಸಲಾಗುವುದು. ಬಳಿಕ ಅವರು ಬೆಂಗಳೂರಿನ ಜನರನ್ನುದ್ದೇಶಿಸಿ ಮಾತನಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ನಾಗರಿಕರಿಗೂ ಮುಕ್ತ ಆಹ್ವಾನವಿದೆ. ಇದಕ್ಕೆ ಸಂಬಂಧಿಸಿದಂತೆ ಸಭೆ ನಡೆಸಿ ಸಿದ್ಧತೆಗಳ ಬಗ್ಗೆ ಚರ್ಚಿಸಲಾಗಿದೆ. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗುವುದು. ಎಲ್ಲರೂ ಸೇರಿ ಯಶಸ್ವಿಗೊಳಿಸೋಣ,'' ಎಂದು ಮನವಿ ಮಾಡಿದರು.

''ಚಿತ್ರದುರ್ಗದಲ್ಲಿ ಇದೇ 9ರಂದು ಆಯೋಜಿಸಿರುವ ಬಿ.ಎಸ್.ಯಡಿಯೂರಪ್ಪ ಅವರಿಗೆ ಅಭಿನಂದನೆ ಸಲ್ಲಿಸುವ ಅಭಿಮಾನೋತ್ಸವಕ್ಕೂ ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು, ಬೆಂಬಲಿಗರು ಪಾಲ್ಗೊಳ್ಳಲಿದ್ದಾರೆ. ತುಮಕೂರು ರಸ್ತೆಗೆ ಸಮೀಪವಿರುವ ವಿಧಾನಸಭಾ ಕ್ಷೇತ್ರಗಳ ಕಾರ್ಯಕರ್ತರು ಚಿತ್ರದುರ್ಗದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಮೇ 10ರಂದು ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನಗರ ಜಿಲ್ಲೆಯ ಹತ್ತು ವಿಧಾನಸಭಾ ಕ್ಷೇತ್ರಗಳ ಕಾರ್ಯಕರ್ತರು ಹೆಚ್ಚಾಗಿ ಭಾಗವಹಿಸುತ್ತಾರೆ. ಯಾವುದೇ ಸಮಸ್ಯೆಯಾಗದಂತೆ ಸಿದ್ಧತೆ ಮಾಡುತ್ತಿದ್ದೇವೆ,'' ಎಂದು ತಿಳಿಸಿದರು.

ಆಡಳಿತಾರೂಢ ಪಕ್ಷದ್ದೇ ಗೆಲುವು: ''ಎಲ್ಲಾ ಉಪ ಚುನಾವಣೆಗಳಲ್ಲಿ ಆಡಳಿತ ಪಕ್ಷವೇ ಗೆಲುವು ಸಾಧಿಸಿದೆ. ಹಿಂದೆ ಬಿಜೆಪಿ ಸರಕಾರವಿದ್ದಾಗ ಬಿಜೆಪಿ ಅಭ್ಯರ್ಥಿಗಳೇ ಗೆಲುವು ಸಾಧಿಸಿದ್ದರು. ಕಾಂಗ್ರೆಸ್ ಗೆದ್ದಿರುವುದು ದೊಡ್ಡ ವಿಚಾರವಲ್ಲ, ಇದಕ್ಕಿಂತ ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ದೊಡ್ಡದು. ರಾಜ್ಯದಲ್ಲಿ ಒಂದಲ್ಲ ಒಂದು ಉಪ ಚುನಾವಣೆಗಳು ನಡೆಯುತ್ತಲೇ ಇರುತ್ತವೆ. ಈ ಗೆಲುವುಗಳು ಯಾವುದಕ್ಕೂ ಮಾನದಂಡ ಅಲ್ಲ, ಒಮ್ಮೆ ಬಿಜೆಪಿ ಆಡಳಿತವಿದ್ದಾಗ 16ಕ್ಕೆ 15ರಲ್ಲಿ ಬಿಜೆಪಿ ಗೆದ್ದಿತ್ತು. ಆದರೆ ನಂತರ ಬಿಜೆಪಿ ಅಧಿಕಾರ ಕಳೆದುಕೊಂಡಿತು. ಜನರ ತೀರ್ಮಾನಕ್ಕೆ ಬದ್ಧರಾಗಬೇಕು,'' ಎಂದು ಅಶೋಕ್ ಹೇಳಿದರು.

ಮಮತಾ ಕೋರ್ಟ್ ಮೊರೆ ಹೋಗಲಿ: ಅಶೋಕ್

ಬೆಂಗಳೂರು: ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎನ್ನುವ ಮೂಲಕ ಸಂವಿಧಾನಕ್ಕೆ ಅಗೌರವ ತೋರಿದ್ದಾರೆ. ಅವರಿಗೆ ಸಮಸ್ಯೆ ಇದ್ದರೆ ನ್ಯಾಯಾಲಯದ ಮೊರೆ ಹೋಗಬೇಕೇ ಹೊರತು ಕೊಲೆ ಮಾಡಿಸಬಾರದು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಗುರುವಾರ ಮಾತನಾಡಿದ ಅವರು, ''ಮಮತಾ ಬ್ಯಾನರ್ಜಿ ಸಂವಿಧಾನಕ್ಕೆ ಅಗೌರವ ತೋರಿದ್ದಾರೆ. ತಮ್ಮನ್ನು ವಜಾ ಮಾಡಿ ಕಳುಹಿಸಲಿ. ಅದರಿಂದ ಹೊಸ ನಾಟಕ ನಡೆಯಲಿ ಎಂದು ಅವರು ಬಯಸುತ್ತಿದ್ದಾರೆ,'' ಎಂದು ದೂರಿದರು.

''ಅವರಿಗೆ ಕಾನೂನು, ಸಂವಿಧಾನ ಎಂಬುದು ಗೊತ್ತಿಲ್ಲ, ಮುಖ್ಯಮಂತ್ರಿ ಕುರ್ಚಿಗೆ ಅಂಟಿಕೊಂಡು ಕೂತಿದ್ದಾರೆ. ಮಾನ ಮರ್ಯಾದೆ ಇರುವ ಯಾವುದೇ ಮುಖ್ಯಮಂತ್ರಿ ರಾಜೀನಾಮೆ ಕೊಟ್ಟು ನಿರ್ಗಮಿಸುತ್ತಾರೆ. ಅವರಿಗೆ ಗಲಭೆ ನಡೆಯಬೇಕೆಂಬ ಉದ್ದೇಶವಿದೆ. ಅದಕ್ಕಾಗಿ ಚಂದ್ರನಾಥ ರಥ್ ಅವರನ್ನು ಟಿಎಂಸಿ ಮುಖಂಡರು ಕೊಲೆ ಮಾಡಿದ್ದಾರೆ. ತಾವೊಬ್ಬರೇ ರಾಜ್ಯವನ್ನು ನಿಯಂತ್ರಿಸಬೇಕೆಂಬ ಮನಸ್ಥಿತಿ ಅವರಲ್ಲಿದೆ,'' ಎಂದು ಕಿಡಿಕಾರಿದರು. ''ಅವರು ರಾಜೀನಾಮೆ ಸಲ್ಲಿಸದಿದ್ದರೂ ಹಳೆ ವಿಧಾನಸಭೆ ವಿಸರ್ಜನೆಯಾದ ನಂತರ ಸಹಜವಾಗಿಯೇ ಅಧಿಕಾರ ಹೊರಟುಹೋಗಲಿದೆ. ತಾವೇ ಸಿಎಂ ಆಗಿ ಮುಂದುವರಿಯಬೇಕೆಂಬ ಅಧಿಕಾರದ ಮದದಿಂದ ಅವರು ವರ್ತಿಸುತ್ತಾರೆ. ಇಷ್ಟು ದೀರ್ಘ ಕಾಲ ಸಿಎಂ ಆಗಿರುವ ಅವರಿಗೆ ಸಾಮಾನ್ಯ ಪ್ರಜ್ಞೆ ಇಲ್ಲ ಎಂಬುದು ಜನರಿಗೆ ಗೊತ್ತಾಗಿದೆ. 30 ವರ್ಷ ಅಧಿಕಾರ ನಡೆಸಿದ ಹಿಂದಿನ ನಾಯಕರು ಕೂಡ ಇದೇ ರೀತಿ ವರ್ತಿಸಿದ್ದರೆ ಮಮತಾ ಬ್ಯಾನರ್ಜಿ ಏನು ಮಾಡುತ್ತಿದ್ದರು,'' ಎಂದರು.

ಇನ್ಮುಂದೆ ಚುನಾವಣೆಗೆ ನಿಲ್ಲಲ್ಲ

ಖರ್ಚು ಮಾಡಿ ಎಲೆಕ್ಷನ್ ಎದುರಿಸುವಷ್ಟು ಶಕ್ತಿ ಇಲ್ಲವೆಂದ ವಿಶ್ವನಾಥ್

■ **ವಿಕ ಸುದ್ದಿಲೋಕ** ಮೈಸೂರು

50 ಕೋಟಿ ರೂ. ಖರ್ಚು ಮಾಡಿ ಚುನಾವಣೆ ಎದುರಿಸುವಷ್ಟು ಶಕ್ತಿ ನನ್ನಲ್ಲಿ ಇಲ್ಲ, ಹೀಗಾಗಿ ಚುನಾವಣಾ ರಾಜಕಾರಣಕ್ಕೆ ವಿದಾಯ ಹೇಳುತ್ತಿದ್ದೇನೆ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಘೋಷಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಈ ಹಿಂದೆ ನಾನು ಹಲವು ಚುನಾವಣೆಗಳನ್ನು ಎದುರಿಸಿದಾಗ ಜನರೇ ಹಣ ನೀಡಿ ಆಶೀರ್ವಾದ ಮಾಡುತ್ತಿದ್ದರು. ಆದರೆ, ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಚುನಾವಣೆ ಎದುರಿಸುವುದು ಸಾಮಾನ್ಯ ವ್ಯಕ್ತಿಗೆ ಅಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮುಂದಿನ ಯಾವುದೇ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದಿಲ್ಲ. ಆದರೆ ರಾಜಕೀಯದಲ್ಲಿ ಇರುತ್ತೇನೆ,'' ಎಂದರು.



ನನ್ನ ಮಕ್ಕಳೂ ಸ್ಪರ್ಧಿಸುವುದಿಲ್ಲ: ''ರಿಯಲ್ ಎಸ್ಟೇಟ್ ಉದ್ಯಮ ನಡೆಸುವವರು ತಮ್ಮ ನಿವೇಶನಗಳನ್ನು ಮಾರಾಟ ಮಾಡಿ ಚುನಾವಣೆ ಎದುರಿಸುತ್ತಾರೆ. ಆದರೆ, ನನಗೆ ಒಂದು ಮನೆ ಮತ್ತು ಒಂದು ನಿವೇಶನ ಮಾತ್ರ ಇದೆ. ಅಷ್ಟು ದೊಡ್ಡ ಮೊತ್ತ ಖರ್ಚು ಮಾಡುವ ಶಕ್ತಿ ನನ್ನಲ್ಲಿಲ್ಲ, ಅಲ್ಲದೇ ನನ್ನ ಮಕ್ಕಳು ಸಹ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಅವರು ತಮ್ಮ ಶಕ್ತಿಯಾನುಸಾರ ರಾಜಕೀಯದಲ್ಲಿ ಮುಂದುವರಿಯುತ್ತಾರೆ,'' ಎಂದು ಹೇಳಿದರು.

''ಕಾಂಗ್ರೆಸ್ ಸರಕಾರದಲ್ಲಿ ನ್ಯಾಯಕ್ಕೆ ಬೆಲೆ ಇಲ್ಲದಂತಾಗಿದ್ದು, ಗೃಹ ಇಲಾಖೆಯನ್ನು ಪರಮೇಶ್ವರ ನಡೆಸುತ್ತಿದ್ದಾರೋ ಅಥವಾ ಸಿಎಂ ಸಿದ್ದರಾಮಯ್ಯ ಪುತ್ರ ಯತೀಂದ್ರ ನಡೆಸುತ್ತಿದ್ದಾರೋ ಎಂಬ ಅನುಮಾನವಿದೆ. ಹಿರಿಯ ಪೊಲೀಸ್ ಅಧಿಕಾರಿ ರಾಮಚಂದ್ರ ರಾವ್ ಅವರ ಅಮಾನತು ಆದೇಶ ಹಿಂಪಡೆಯಲು ದೊಡ್ಡಮಟ್ಟದ ಕಿಕ್‌ಬ್ಯಾಕ್ ಪಡೆದಿರಬಹುದು,'' ಎಂದು ಆರೋಪಿಸಿದರು.

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಟೀಕೆ: ಮೇ 9ರಂದು ಚಿತ್ರದುರ್ಗದಲ್ಲಿ ಆಯೋಜಿಸಿರುವ ಬಿಎಸ್‌ವೈ ಅಭಿಮಾನೋತ್ಸವ ಕುರಿತು ಪ್ರತಿಕ್ರಿಯಿಸಿದ ವಿಶ್ವನಾಥ್, ''ಪೋಕ್ಸೊ ಪ್ರಕರಣಕ್ಕೆ ಯಡಿಯೂರಪ್ಪ ಗುರಿಯಾಗಿದ್ದು, ಇದು ಗಂಭೀರ ಪ್ರಕರಣವಾಗಿದೆ. ಆದರೂ ಯಡಿಯೂರಪ್ಪ ಅಭಿಮಾನೋತ್ಸವಕ್ಕೆ ಮುಂದಾಗಿರುವುದು ಸರಿಯಲ್ಲ,'' ಎಂದರು.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

ಎಐ ಬರೆದ ಕೋಡನ್ನು ಪರಿಶೀಲಿಸುವ ಎಐ

ಚೆಗ್ಗೆಂಟ್ ಕೋಡ್, ಸ್ವೀಡ್, ವಿಂಡ್ಸರ್, ಕಿರೋ, ಆ್ಯಕ್ಸೆನ್, ಮೊದಲಾದವೆಲ್ಲ ಅತ್ಯಾಧುನಿಕ ಜೆನ್-ಎಐ ಸಾಫ್ಟ್‌ವೇರ್ ಟೂಲ್‌ಗಳು. ಇವುಗಳ ಕೆಲಸವೇನು ಗೊತ್ತೆ? ಬಳಕೆದಾರರ ಕೃತಕ ಬುದ್ಧಿಮತ್ತೆ ಬರೆದಿರುವ ಕೋಡ್‌ಗಳನ್ನು ಪರಿಶೀಲಿಸುವುದು. ಮನುಷ್ಯರ ಹಾಗೆ ಕೋಡ್ ಬರೆಯುವುದೇ ಒಂದು ಅದ್ಭುತ ತಂತ್ರಜ್ಞಾನ ಎನಿಸಿರುವಾಗ ಇನ್ನೂ ಆ ಎಲ್ಲ ಕೋಡ್‌ಗಳ ಸಮೂಹವನ್ನು ಒಟ್ಟುಗೂಡಿಸಿ, ಪರೀಕ್ಷಿಸಿ, ತಪ್ಪನ್ನು ತಿದ್ದುಪಡಿ ಮಾಡಿ ಅದು ನಿರ್ಧಾರಿತ ಕೆಲಸವನ್ನು ಮಾಡುವುದನ್ನು ಖಚಿತ ಮಾಡಲು ಎಐ ತಂತ್ರಜ್ಞಾನ ಹೆಣಗುತ್ತಿದೆ. ಇದೀಗ ಕೋಡಿಂಗ್ ಮಾಡಲು 'ಸಾಫ್ಟ್‌ವೇರ್ ಇಂಜಿನಿಯರ್‌ಗಳೇ ಬೇಡ' ಎಂದುಕೊಂಡು ಈಗಾಗಲೇ ಸಾಫ್ಟ್‌ವೇರ್ ಕಂಪನಿಗಳ ಷೇರುಗಳ ಬೆಲೆ ಕುಸಿತ ಕಂಡಿದೆ. ಇನ್ನು ಸಂಪೂರ್ಣ ಸಾಫ್ಟ್‌ವೇರ್ ಸ್ಟಾಕ್ ತಯಾರಿಸಬಲ್ಲ ತಂತ್ರಜ್ಞಾನವು ಜನರ ಕೈಗೆ ಸಿಕ್ಕರೆ? 'ಚಟ್‌ಬೋಟ್' ಬಳಕೆದಾರರಿಗೆ ಅಂತ ತಯಾರು ಮಾಡಿದ 'ಸ್ವೀಡ್ ಎಐ'ಯ ಮನುಷ್ಯರಿಗಿಂತ ಹತ್ತು ಪಟ್ಟು ವೇಗದಲ್ಲಿ ಕೋಡಿಂಗ್ ಮಾಡಬಲ್ಲ ಸಾಮರ್ಥ್ಯವನ್ನೂ ಹೊಂದಿದೆ. ಅದರಲ್ಲಿನ 'ಕಸ್ಟಮ್ ಟ್ಯಾಬ್ ಮಾಡೆಲ್' ಕೋಡ್‌ನಲ್ಲಿ ಆಗಬೇಕಾದ ಬದಲಾವಣೆಗಳನ್ನು ಮೊದಲೇ ಊಹಿಸಿ ಹೇಳುವಂತೆ ರೂಪಿತವಾಗಿದೆ. ಇದು ಜನಸಾಮಾನ್ಯರಿಗಿಂತ ಸಾಫ್ಟ್‌ವೇರ್ ವೃತ್ತಿಪರರಿಗೆ ಹೆಚ್ಚು ಅನುಕೂಲವಾದ ಪರಿಕರಗಳಲ್ಲೊಂದು!

ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

■ ವಿಶ್ವಂ ಜೋಶಿ
ಎಐ ವಿಶ್ಲೇಷಕರು

ಎಸ್‌ಐಟಿ ವಿಚಾರಣೆಗೆ ಗಿರೀಶ್ ಹಾಜರು

ಬೆಳ್ತಂಗಡಿ (ದ.ಕ.): ಧರ್ಮಸ್ಥಳದ ತಲೆ ಬುರುಡೆ ಪ್ರಕರಣದ ಸಂಬಂಧದ ವಿಚಾರಣೆಗಾಗಿ ಗಿರೀಶ್ ಮಟ್ಟಣ್ಣನವರ್ ಬೆಳ್ತಂಗಡಿ ಎಸ್‌ಐಟಿ ಕಚೇರಿಗೆ ಗುರುವಾರ ಬಂದಿದ್ದರು. ಈ ವೇಳೆ ಅವರ ಹಳೆಯ ಮೊಬೈಲ್ ಫೋನನ್ನು ಎಸ್‌ಐಟಿ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಹಳೆಯ ಆಂಡ್ರಾಯ್ಡ್ ಮೊಬೈಲ್ ಫೋನ್ ಉಪಯೋಗಿಸಿದ್ದನ್ನು ಪತ್ತೆಹಚ್ಚಿ ವಶಕ್ಕೆ ನೀಡಲು ನೋಟಿಸ್ ನೀಡಿತ್ತು.

ಖ್ಯಾತ ಜ್ಯೋತಿಷಿ ರಾಜಗುರು ದ್ವಾರಕನಾಥ್ ಎಚ್ಚರಿಕೆ | ಹ್ಯಾಕರ್‌ಗಳ ಮಟ್ಟ ಹಾಕಲು ಸೂಕ್ತ ತಂತ್ರಜ್ಞಾನಕ್ಕೆ ಸಲಹೆ

ಸೈಬರ್ ಅಪರಾಧಗಳಿಂದ ಜಾಗತಿಕ ವಿಪ್ಲವ

■ **ವಿಕ ಸುದ್ದಿಲೋಕ** ಬೆಂಗಳೂರು

''ಈ ವರ್ಷ ದೊಡ್ಡ ಪ್ರಮಾಣದಲ್ಲಿ ಸೈಬರ್ ಅಪರಾಧಗಳು ನಡೆಯುವ ಸಾಧ್ಯತೆಯಿದ್ದು, ಭಾರತ ಸೇರಿದಂತೆ ಇಡೀ ಪ್ರಪಂಚವೇ ಹ್ಯಾಕರ್‌ಗಳ ಕಪಿಮುಷ್ಟಿಗೆ ಸಿಲುಕುತ್ತದೆ,'' ಎಂದು ಖ್ಯಾತ ಜ್ಯೋತಿಷಿ ರಾಜಗುರು ದ್ವಾರಕನಾಥ್ ಭವಿಷ್ಯ ನುಡಿದಿದ್ದಾರೆ.

'ವಿಜಯ ಕರ್ನಾಟಕ' ಕಚೇರಿಯಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು, ''ಅಮೆರಿಕ, ಬ್ರಿಟನ್, ರಷ್ಯಾ ಸೇರಿದಂತೆ ದೊಡ್ಡದೊಡ್ಡ ರಾಷ್ಟ್ರಗಳೂ ಹ್ಯಾಕಿಂಗ್‌ಗೆ ಒಳಗಾಗಲಿವೆ. ಇದರಿಂದ ವಿಶ್ವ ಆರ್ಥಿಕ ವಿಪತ್ತನ್ನು ಎದುರಿಸುವ ಕಾಲ ಸನಿಹದಲ್ಲಿಯೇ ಇದೆ,'' ಎಂದು ಎಚ್ಚರಿಸಿದರು.

''ಜಾಗತಿಕವಾಗಿ ಸೈಬರ್ ಅಪರಾಧ ತಡೆಯಲು ಹ್ಯಾಕರ್‌ಗಳನ್ನು ಮಟ್ಟಹಾಕುವ ತಂತ್ರಜ್ಞಾನವನ್ನು ಕಂಡುಕೊಳ್ಳಬೇಕು. ಕೇಂದ್ರ ಸರಕಾರ ಕೂಡ ಈ ನಿಟ್ಟಿನಲ್ಲಿ ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ದೇಶವೂ ಹ್ಯಾಕರ್‌ಗಳ ಹಿಡಿತಕ್ಕೆ ಸಿಲುಕಿ ಆರ್ಥಿಕ ಸಂಕಷ್ಟವನ್ನು ಎದುರಿಸುವ ಅಪಾಯವಿದೆ. ಇದರ ಬಿಸಿ ಜನಸಾಮಾನ್ಯರಿಗೂ ತಟ್ಟಲಿದೆ,'' ಎಂದು ಹೇಳಿದರು.

ಬಿಸಿಲಿನ ತಾಪ: ಪ್ರಾಕೃತಿಕ ವಿಕೋಪದ ಕುರಿತು ಮಾಹಿತಿ ಹಂಚಿಕೊಂಡ ಅವರು, ''ಬಿಸಿಲ ತಾಪ ಕರ್ನಾಟಕದಲ್ಲಿ 44 ಡಿಗ್ರಿ ಸೆಲ್ಸಿಯಸ್ ತಲುಪಿದರೆ ಉತ್ತರ ಭಾರತ ಮತ್ತಿತರ ಕಡೆಗಳಲ್ಲಿ 51 ಡಿಗ್ರಿ ಸೆಲ್ಸಿಯಸ್ ತಲುಪುತ್ತದೆ. ಇದರಿಂದ ಜನರ ಆರೋಗ್ಯ ಹದಗೆಡುತ್ತದೆ. ಉಸಿರಾಟದ ಸಮಸ್ಯೆಗಳು ಹೆಚ್ಚಾಗುತ್ತವೆ. ಇದು ಮನುಷ್ಯನಿಗೆ ಎಚ್ಚರಿಕೆಯ ಗಂಟೆಯಾಗಿದೆ,'' ಹೇಳಿದರು.

ಈಗ ಜಲಸಂಕಟದ ಬಾಧೆ ವಿಶ್ವದಲ್ಲಿ ಆರಂಭವಾಗಿದೆ. ಇದು ಮತ್ತಷ್ಟು ಹೆಚ್ಚಾಗುತ್ತದೆ. ಹಿಮಾಲಯ ಪರ್ವತದ ಗಾತ್ರ ಕ್ಷೀಣಿಸುತ್ತಾ ವಾಲಿಕೊಂಡಿದೆ. ಇದರಿಂದ ಉತ್ತರ ಭಾರತ, ಈಶಾನ್ಯ ಭಾರತದಲ್ಲಿ ಸಾವು-ನೋವು ಹೆಚ್ಚಾಗುವ ಸಾಧ್ಯತೆಯಿದೆ ಎಂದು ಕಳವಳ ವ್ಯಕ್ತಪಡಿಸಿದರು.

''ಧರ್ಮಕ್ಕೆ ಹಾನಿಯಾದರೆ ಚಂಡ ಮಾರುತ ಬೀಸುತ್ತದೆ, ಸಮುದ್ರ ಉಕ್ಕುತ್ತದೆ, ಜಲ ಪ್ರಳಯ ಉಂಟಾಗುತ್ತದೆ. ಗಾಳಿ ಮಲಿನಗೊಳ್ಳುತ್ತದೆ. ವಿಮಾನಗಳು ಬೀಳುತ್ತವೆ. ಪ್ರಕೃತಿ ವಿಕೋಪ ಹೀಗೆ ನಾನಾ ಅವಘಡಗಳು ಸಂಭವಿಸುತ್ತವೆ. ಹೀಗಾಗಿ, ಆದಿ ಶಂಕರಾಚಾರ್ಯರು ಹಾಕಿಕೊಟ್ಟಿರುವ ಸನಾತನ ಧರ್ಮದ ಮಾರ್ಗದಲ್ಲಿ ದೇಶ ಸಾಗಬೇಕಿದೆ,'' ಎಂದು ತಿಳಿಸಿದರು.

''ಗುರು ಗ್ರಹವು ಮಿಥುನ ರಾಶಿಯ ಕಡೆಯ ಭಾಗದಲ್ಲಿ ಒಂದು ತಿಂಗಳಲ್ಲಿ ಕರ್ಕಾಟಕ ರಾಶಿಯನ್ನು ಸೇರುತ್ತಾನೆ. ಈ ಮಧ್ಯಂತರದಲ್ಲಿ ಶನಿಯು ಉತ್ತರಾಭಾದ್ರ ನಕ್ಷತ್ರದಿಂದ ರೇವತಿ ನಕ್ಷತ್ರಕ್ಕೂ, ಅಲ್ಲಿಂದ ಅಶ್ವಿನಿ ನಕ್ಷತ್ರಕ್ಕೆ ಬಂದು ಕೂರುವುದರಿಂದ ಅದರ ಸನ್ನಿವೇಶಗಳನ್ನು ಎದುರಿಸಬೇಕು. ಭಾರತ ಸಿದ್ಧವಾಗಿರಬೇಕು. ರಾಹು-ಕೇತುಗಳು ಸಿಂಹ ಮತ್ತು ಕುಂಭ ರಾಶಿಯಲ್ಲಿ ಕುಳಿತು ಕಾರ್ಯಾಚರಣೆ ಮಾಡುತ್ತಾ ಯುದ್ಧ ನಿಲ್ಲದಂತಹ ಸನ್ನಿವೇಶ ಮಾಡಿಸುತ್ತಾರೆ. ಎರಡೂ ಪಾಪ ಗ್ರಹಗಳಾಗಿರುವುದರಿಂದ ಇಡೀ ಭೂಮಂಡಲವು ನಡುಗುವಂತಹ ಸನ್ನಿವೇಶಗಳು ಮುಂದಿನ ದಿನಗಳಲ್ಲಿ ಉಂಟಾಗುವ ಸಾಧ್ಯತೆಯಿದೆ,'' ಎಂದು ಎಚ್ಚರಿಕೆ ನೀಡಿದ್ದಾರೆ.

ಸಿದ್ದರಾಮಯ್ಯಗೆ ಇಲ್ಲ ಗುರುಬಲ, ಡಿಕೆಶಿಗೆ ರಾಜಯೋಗ

ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೃಶ್ಚಿಕ ರಾಶಿ ಹೊಂದಿದ್ದು, ಪಂಚಮದಲ್ಲಿ ಶನಿ, ಅಷ್ಟಮದಲ್ಲಿ ಗುರು ಇರುವುದರಿಂದ ಮುಂದೆ ಕಂಟಕ ಇದೆ. ಹೀಗಾಗಿ, ಶತ್ರುಬಾಧೆ ಹೆಚ್ಚು. ವೃಶ್ಚಿಕ ರಾಶಿಗೆ ಶನಿ ಅಷ್ಟಮದಲ್ಲಿದ್ದು ಗುರು ಬಲ ಇಲ್ಲ. ಹೀಗಾಗಿ, ಯಾವುದೇ ಕೆಲಸ ಪೂರ್ಣ ಮಾಡದೆ ಕೈ ಹಾಕಿದ ವಿಚಾರಗಳಲ್ಲಿ ಯಶಸ್ಸನ್ನು ಕಾಣುವುದು ಕಷ್ಟ ಎಂದು ದೇಶ ಮತ್ತು ರಾಜ್ಯದ ಚುಕ್ಕಾಣಿ ಹಿಡಿದವರ ಭವಿಷ್ಯ ನುಡಿದರು. ವೃಷಭ ರಾಶಿ ಹೊಂದಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ 2025ರಿಂದಲೂ ಒಳ್ಳೆಯ ಯೋಗವಿದ್ದು, ಅದು 2027ರವರೆಗೂ ಮುಂದುವರಿಯಲಿದೆ ಎಂದು ಹೇಳುವ ಮೂಲಕ ಡಿಕೆಶಿಗೆ ಸಿಎಂ ಹುದ್ದೆ ಅಲಂಕರಿಸುವ ರಾಜಯೋಗವಿದೆ ಎಂದು ನುಡಿದರು.

ದ್ವಾರಕನಾಥ್ ಹೇಳಿದ್ದೇನು?

- **'ಗ್ಯಾರಂಟಿ'ಗಳು ನಿಲ್ಲಬೇಕು:** ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಹೀಗಾಗಿ, ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸಿ, ಅಭಿವೃದ್ಧಿ ಕೆಲಸಗಳತ್ತ ಸಿದ್ದರಾಮಯ್ಯನವರ ಸರಕಾರ ಗಮನ ಹರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪಕ್ಷಕ್ಕೆ ದೊಡ್ಡ ಹೊಡೆತ ಬೀಳುತ್ತದೆ.
- **ಎರಡೇ ಬಾರಿ ಸ್ಪರ್ಧೆ:** ಒಬ್ಬ ವ್ಯಕ್ತಿ ಶಾಸಕ, ಸಂಸದ ಸ್ಥಾನಗಳಿಗೆ ಎರಡು ಬಾರಿ ಮಾತ್ರ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಕಲ್ಪಿಸುವಂತೆ ವಿಧೇಯಕ ಜಾರಿಗೆ ತರಬೇಕು.
- **70ರ ವಯೋಮಿತಿ:** ಮುಖ್ಯಮಂತ್ರಿ, ಪ್ರಧಾನಿ ಹುದ್ದೆಗೂ 70 ವಯೋಮಿತಿಯ ವಿಧೇಯಕ ಜಾರಿಗೆ ತಂದು ಅನುಷ್ಠಾನಗೊಳಿಸಬೇಕು. ಇಲ್ಲದಿದ್ದರೆ ಕೆಲವರು ಮಾತ್ರವೇ ಅಧಿಕಾರ ಅನುಭವಿಸುವಂತಾಗುತ್ತದೆ.

ಕ್ಷೇತ್ರ ಪುನರ್‌ವಿಂಗಡಣೆ: ಸದ್ಯ ಸುಮ್ಮನಿದ್ದರೆ ವಾಸಿ

''2029ರ ಸಂಸತ್ ಚುನಾವಣೆಗೆ ಮೊದಲು ಮಹಿಳಾ ಮೀಸಲು (ಶೇ.33) ಕಾನೂನನ್ನು ಜಾರಿಗೊಳಿಸುವ ಉದ್ದೇಶದಿಂದ ಲೋಕಸಭೆಯ ಈಗಿರುವ 543 ಸ್ಥಾನಗಳನ್ನು ಗರಿಷ್ಠ 850ಕ್ಕೆ ಹೆಚ್ಚಿಸಲು ಯೋಜಿಸಲಾಗಿದೆ. ಇದರಲ್ಲಿ ರಾಜ್ಯಗಳ ಪ್ರಾತಿನಿಧ್ಯ 815, ಕೇಂದ್ರಾಡಳಿತ ಪ್ರದೇಶಗಳಿಗೆ 35 ಸ್ಥಾನಗಳು ಸೇರಿವೆ. 2027ರ ಜನಗಣತಿ ಆಧಾರದ ಮೇಲೆ ಕ್ಷೇತ್ರ ಪುನರ್‌ವಿಂಗಡಣೆ ನಡೆಸಲೂ ಕೇಂದ್ರ ಸರಕಾರ ಯೋಜಿಸಿದೆ. ಲೋಕಸಭೆ ಸ್ಥಾನಗಳ ಏರಿಕೆಗಾಗಿ ಸರಕಾರ ಜನಗಣತಿ ಆಧಾರದ ಮೇಲೆ ಕ್ಷೇತ್ರ ಪುನರ್ ವಿಂಗಡಣೆ ಮಾಡುವುದು ಸರಿಯಲ್ಲ. ನಾರಿ ಮುನಿದರೆ ರಾಷ್ಟ್ರವೇ ಕುಸಿಯುತ್ತದೆ ಎಂಬ ವಚನಕ್ಕೆ ರಾಮಾಯಣದ ಸೀತಾ ಮಾತೆ ಉದಾಹರಣೆಯಾಗಿರುತ್ತಾಳೆ. ಹೀಗಾಗಿ, 2029ರ ಚುನಾವಣೆವರೆಗೆ ಕೇಂದ್ರ ಸರಕಾರ ಈ ವಿಚಾರದಲ್ಲಿ ಸುಮ್ಮನಿರಬೇಕು. ಏಕೆಂದರೆ, ಸದ್ಯವೇ ಗುರು ಉಚ್ಚ ಸ್ಥಾನ ಸೇರುತ್ತಾನೆ ಹಾಗೂ ಶನಿಯು 2027ರಲ್ಲಿ ಮೇಷ ರಾಶಿಯಲ್ಲಿ ಅಂಗಾರಕನ ಮನೆಯಲ್ಲಿ ಬಂದು ಸೇರುತ್ತಾನೆ. ಈ ಸಂದರ್ಭದಲ್ಲಿ ದೇಶಕ್ಕೆ ಅನುಕೂಲ ಮತ್ತು ಅನಾನುಕೂಲ ಎರಡೂ ಎದುರಾಗುವ ಸಾಧ್ಯತೆಗಳಿವೆ. ಹೀಗಾಗಿ, ಸಂವಿಧಾನವನ್ನು ಬದಲಾಯಿಸುವ ಅಥವಾ ಲೋಕಸಭಾ ಸ್ಥಾನಮಾನಗಳನ್ನು ಹೆಚ್ಚಿಸಿ ಉತ್ತರ ಭಾರತದವರೇ ರಾಷ್ಟ್ರವನ್ನು ಆಳ್ವಿಕೆ ಮಾಡುವ ಹುನ್ನಾರ ಮಾಡಕೂಡದು,'' ಎಂದು ದ್ವಾರಕನಾಥ್ ಗುರೂಜಿ ಸಲಹೆ ನೀಡಿದರು.

ಕೈಗಾ ಅಣುಸ್ಥಾವರಕ್ಕೆ ಯಂತ್ರ ಸಾಗಿಸುತ್ತಿದ್ದ ಲಾರಿ ಪಲ್ಟಿ

ಕಾರವಾರದ ಹರ್ಟುಗಾ ಬಳಿ ಪಲ್ಟಿಯಾದ ಯಂತ್ರ ಸಾಗಣೆ ಲಾರಿ.

ಕಾರವಾರ: ಕೈಗಾ ಅಣುವಿದ್ಯುತ್ ಸ್ಥಾವರದ 5, 6ನೇ ಘಟಕಕ್ಕಾಗಿ ವಿಕಿರಣ ಸೋರಿಕೆ ತಡೆಯುವ ಬೃಹತ್ ಯಂತ್ರವನ್ನು ಸುಮಾರು 900 ಕಿ.ಮೀ. ದೂರದಿಂದ ಹೊತ್ತು ತರುತ್ತಿದ್ದ ಮಲ್ಟಿ ಎಕ್ಸೆಲ್ ಲಾರಿಯು ಕೈಗಾಕ್ಕೆ ಒಂಬತ್ತು ಕಿ.ಮೀ. ದೂರ ಇರುವಾಗ ಪಲ್ಟಿಯಾಗಿದೆ.

ಹರ್ಟುಗಾ ಗ್ರಾಮದ ತಿರುವಿನಲ್ಲಿ ಲಾರಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಅಧಿಕಾರಿಗಳು, ತಂತ್ರಜ್ಞರ ತಂಡ ಸ್ಥಳ ಪರಿಶೀಲನೆ ನಡೆಸಿದ್ದಾರೆ. ಘಟನೆಯಲ್ಲಿ ಯಾರಿಗೂ ಪೆಟ್ಟಾಗಿಲ್ಲ. ಕಿರಿದಾದ ರಸ್ತೆಯಲ್ಲಿ ಲಾರಿ ಮತ್ತು ಯಂತ್ರವನ್ನು ಸುರಕ್ಷಿತವಾಗಿ ಎತ್ತಲು ಸಿದ್ಧತೆ ನಡೆದಿದೆ.

ವಿಕಿರಣ ರಕ್ಷಾ ಕವಚ: ಲಾರಿಯಲ್ಲಿ ಸಾಗಿಸುತ್ತಿದ್ದ ಯಂತ್ರ 30 ಅಡಿ ಎತ್ತರ, 120 ಟನ್‌ಗೂ ಅಧಿಕ ತೂಕ ಇದೆ. ಇದನ್ನು ಲಾರ್ಸನ್ ಆ್ಯಂಡ್ ಟುಬ್ರೊ ಲಿಮಿಟೆಡ್ ಕಂಪನಿ ತಯಾರಿಸಿದೆ. ನ್ಯಾಬ್ರೋಸ್ ಟ್ರಾನ್ಸ್‌ಪೋರ್ಟ್ ಕಂಪನಿ ಸಾಗಣೆ ಜವಾಬ್ದಾರಿ ಹೊತ್ತಿತ್ತು. ಭಾರಿ ಗಾತ್ರದ ಯಂತ್ರ ಹೊತ್ತ ಲಾರಿಯು ಫೆ.9ರಂದು ಗುಜರಾತ್‌ನ ಸೂರತ್‌ನಿಂದ ಹೊರಟಿತ್ತು. ಏ.15ರಂದು ಕಾರವಾರ ತಲುಪಿತ್ತು. ಕಾರವಾರ ನಗರದಲ್ಲಿ ಯಂತ್ರ ಹೊತ್ತ ಲಾರಿ ಸಾಗಲು ವಿದ್ಯುತ್ ತಂತಿಗಳನ್ನೇ ತೆಗೆಯಬೇಕಾಗಿತ್ತು. ಕಾರವಾರದಿಂದ ಕೈಗಾ ರಸ್ತೆ ಕಿರಿದಾಗಿದೆ. ಹೀಗಾಗಿ ಮೂರು ಕಿ.ಮೀ. ಕ್ರಮಿಸಲು ಎಂಟು ತಾಸು ತೆಗೆದುಕೊಂಡಿತ್ತು. ಅಷ್ಟು ಎಚ್ಚರಿಕೆಯಿಂದ ವಾಹನ ಸಾಗಿಸಿದರೂ ಗಮ್ಯ ತಲುಪುವ ಸನಿಹದಲ್ಲಿ ಅಪಘಾತಕ್ಕೆ ಈಡಾಗಿದೆ.

ಬಾಲಕರು ನೀರು ಪಾಲು

ಧಾರವಾಡ: ನೀರಿನ ಹೊಂಡದಲ್ಲಿ ಇಬ್ಬರು ಬಾಲಕರು ಬಿದ್ದು ಸಾವನ್ನಪ್ಪಿದ ಘಟನೆ ತಾಲೂಕಿನ ಮನಸೂರು ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ. ಕುಮಾರ ಮುದಕಣ್ಣವರ (7) ಹಾಗೂ ಪ್ರಥಮ್ ಉಳ್ಳಾಗಡ್ಡಿ (13) ಮೃತ ಬಾಲಕರು.

ಇವರಿಬ್ಬರು ಆಟವಾಡಲು ಹೊರಗಡೆ ಹೋಗಿದ್ದಾಗ ನಿರ್ಮಾಣ ಹಂತದಲ್ಲಿರುವ ಕಟ್ಟಡ ಹತ್ತಿರದ ಹೊಂಡದಲ್ಲಿ ಆಕಸ್ಮಿಕವಾಗಿ ಕಾಲು ಜಾರಿ ಮುಳುಗಿ ಮೃತಪಟ್ಟಿದ್ದಾರೆ.

ಬೆಂಗಳೂರು-ಬೀದರ್, ಬೆಂಗಳೂರು-ಕಲಬುರಗಿ ಯಾನಕ್ಕೆ ₹28.47 ಕೋಟಿ ಅನುದಾನ

ವಿಮಾನಯಾನಕ್ಕೆ ಅನುಮೋದನೆ

■ **ವಿಕ ಸುದ್ದಿಲೋಕ** ಬೀದರ್ / ಕಲಬುರಗಿ

ಬೆಂಗಳೂರು-ಬೀದರ್ ಮತ್ತು ಬೆಂಗಳೂರು-ಕಲಬುರಗಿ ಮಾರ್ಗಗಳಲ್ಲಿ ವಿಮಾನಯಾನಕ್ಕೆ ರಾಜ್ಯ ಸರಕಾರ ಅನುಮೋದನೆ ನೀಡಿದೆ. ಮುಂದಿನ ಒಂದು ವರ್ಷದ ವಿಮಾನ ಸೇವೆಗಳ ನಿರ್ವಹಣೆಗೆ ವಾರ್ಷಿಕ ಕಾರ್ಯಸಾಧ್ಯತೆ ಅಂತರ ನಿಧಿ (ವಿಜಿಎಫ್) 28.47 ಕೋಟಿ ರೂ. ಮೊತ್ತದ ಅನುದಾನಕ್ಕೆ ಒಪ್ಪಿಗೆ ನೀಡಿದೆ.

ಈ ಕುರಿತು ಮೂಲ ಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಆದೇಶ ಹೊರಡಿಸಿದ್ದು, ವಿಜಿಎಫ್ ಅವಧಿಯಲ್ಲಿ ವಿಮಾನ ಹಾರಾಟ ಕಾರ್ಯಾಚರಣೆಯ ಸ್ಥಿರತೆಯನ್ನು ಸಾಧಿಸಲು ಪ್ರಯಾಣಿಕರ ಲೋಡ್ ಫ್ಯಾಕ್ಟರ್‌ಗೆ ಅನ್ವಯ ಪಡದಂತೆ ವಿಜಿಎಫ್ ಅನ್ನು ನೀಡಲು ಅನುಮೋದನೆ ನೀಡಲಾಗಿದೆ. ನಗದು ಹೊರತಾದ ರಿಯಾಯಿತಿಯಿಂದ ಈ ವಿಮಾನಯಾನ ಮಾರ್ಗಗಳ ನಿರಂತರತೆ ಕಾರ್ಯಾಚರಣೆ ಸಾಧ್ಯವಾಗದ ಕಾರಣ, ಸ್ಥಿರ ಮತ್ತು ಖಚಿತ ಆರ್ಥಿಕ ಬೆಂಬಲ ವ್ಯವಸ್ಥೆಯಾಗಿ ಘೋಡಾವತ್ ಕಂಪೆನಿಗೆ (ಸ್ಟಾರ್ ಏರ್‌ಲೈನ್ಸ್) ವಿಜಿಎಫ್ ರೂಪದಲ್ಲಿ ನಗದು ರಿಯಾಯಿತಿ ನೀಡಲು ಈ ಅನುಮೋದನೆ ದೊರೆತಿದೆ.

ಈ ಅನುದಾನವನ್ನು ಶೇ.80:20ರ ಅನುಪಾತದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಡಿ ಒದಗಿಸಲಾಗುತ್ತದೆ. ಬೆಂಗಳೂರು- ಬೀದರ್-ಬೆಂಗಳೂರು ಹಾಗೂ ಬೆಂಗಳೂರು-ಕಲಬುರಗಿ-ಬೆಂಗಳೂರು ಮಾರ್ಗಗಳಲ್ಲಿ ವಿಮಾನಯಾನ ಕಾರ್ಯಾಚರಣೆಯನ್ನು ಕೈಗೊಳ್ಳಲು ಆರ್ಥಿಕ ಇಲಾಖೆಯಿಂದ ಕೆಟಿಪಿಪಿ ಕಾಯಿದೆಯಡಿ ವಿನಾಯಿತಿ ಪಡೆದ ಬಳಿಕ, ಕೆಎಸ್‌ಐಐಡಿಸಿ ನಿಗಮವು ಘೋಡಾವತ್ (ಸ್ಟಾರ್ ಏರ್‌ಲೈನ್ಸ್) ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದೆ.

ಬೀದರ್-ಬೆಂಗಳೂರು ವಿಮಾನ ಮತ್ತೆ ಆರಂಭ?

ಸರಕಾರ ನೀಡಿರುವ ಈ ಅನುಮೋದನೆಯಿಂದ ಈಚೆಗಷ್ಟೇ ಸ್ಥಗಿತವಾಗಿದ್ದ ಬೀದರ್-ಬೆಂಗಳೂರು ವಿಮಾನಯಾನ ಶೀಘ್ರವೇ ಆರಂಭವಾಗುವ ಸಾಧ್ಯತೆಯಿದೆ. ರಾಜ್ಯ ಸರಕಾರ ಬೀದರ್-ಬೆಂಗಳೂರು ಮಾರ್ಗದ ಯುಡಿಎಫ್ (ಒನ್ ವೇ ಫ್ಲೈಟ್ ಟ್ರಿಪ್‌ಗೆ 32,450 ರೂ.ನಂತೆ) ವಾರ್ಷಿಕ 1.18 ಕೋಟಿ ರೂ. ಮತ್ತು ಎಟಿಎಫ್, ಎಕ್ಸೈಸ್ ಡ್ಯೂಟಿ, ವ್ಯಾಟ್ ರಿಯಾಯಿತಿಗಳನ್ನು ಭರಿಸಲೂ ಸಹ ಅನುಮೋದನೆ ನೀಡಿದೆ. ಇದಕ್ಕಾಗಿ ಕೆಕೆಆರ್‌ಡಿಬಿಯಿಂದ ಶೇ.70ರಷ್ಟು ಸಹಾಯಧನ ಪಡೆಯುವ ಷರತ್ತಿಗೆ ಒಳಪಟ್ಟು ಒಂದು ವರ್ಷದ ಅವಧಿಗೆ ನೀಡಲು ಹಾಗೂ ಉಳಿದ ಶೇ.30ರಷ್ಟು ಅನುದಾನ ಮೂಲಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳಾಡು ಜಲಸಾರಿಗೆ ಇಲಾಖೆಯಿಂದ ನೀಡಲು ಸರಕಾರ ಹಸಿರು ನಿಶಾನೆ ತೋರಿದೆ.

11ರವರೆಗೆ ರಾಜ್ಯದ ಹಲವೆಡೆ ಮಳೆ ಮುನ್ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಮುಂಗಾರು ಪ್ರವೇಶಕ್ಕೂ ಮೊದಲೇ ವಿವಿಧ ಜಿಲ್ಲೆಗಳಲ್ಲಿ ಮಳೆಯಾಗುತ್ತಿದೆ.

ಅರಬ್ಬಿ ಸಮುದ್ರದಲ್ಲಿ ಉಂಟಾಗಿರುವ ಸುಳಿಗಾಳಿ ಹಾಗೂ ವಾಯುಭಾರ ಕುಸಿತದ ಹಿನ್ನೆಲೆಯಲ್ಲಿ ಕರಾವಳಿ, ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಮೇ 11ರವರೆಗೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಆಗ್ನೇಯ ಅರಬ್ಬಿ ಸಮುದ್ರ ಮತ್ತು ಲಕ್ಷದ್ವೀಪದ ಸಮೀಪ ಕೇರಳ ಕರಾವಳಿಯ ಭಾಗದಲ್ಲಿ ಮೇಲ್ಮೈ ಸುಳಿಗಾಳಿ ಉಂಟಾಗಿದ್ದು, ಇದು ಸಮುದ್ರ ಮಟ್ಟದಿಂದ 1.5 ಕಿ.ಮೀ ಎತ್ತರದವರೆಗೆ ಹರಡಿದೆ. ಇದರ ಪ್ರಭಾವದಿಂದಾಗಿ ಒಳನಾಡು ಕರ್ನಾಟಕದ ಮೂಲಕ ಹಾದುಹೋಗುವ ಮಾರುತಗಳಲ್ಲಿ ಏರುಪೇರಾಗಿದ್ದು, ಮಳೆಯ ಪ್ರಮಾಣ ಹೆಚ್ಚಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ. ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲೂ ಮಳೆಯಾಗುವ ಸೂಚನೆಯಿದೆ.

ಮೇ 8ರಂದು ಮಲೆನಾಡು ವ್ಯಾಪ್ತಿಯ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಮಳೆ ಜತೆಗೆ ಗಾಳಿಯ ವೇಗ ಕೂಡ ಹೆಚ್ಚಾಗಿರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಮೇ 11ರವರೆಗೆ ಗಂಟೆಗೆ 40-50 ಕಿ.ಮೀ ವೇಗದಲ್ಲಿ ಬಿರುಗಾಳಿ, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ಮಳೆ ಗಾಳಿಗೆ ಹರಿಹರ ತಾಲೂಕಿನ ಮಲೆಬೆನ್ನೂರು, ಕುಂಬಳೂರು ಗದ್ದೆಗಳಲ್ಲಿ ಭತ್ತದ ಬೆಳೆ ನೆಲ ಕಚ್ಚಿದೆ.

ದಕ್ಷಿಣ ಒಳನಾಡಿನ ಹಾವೇರಿ, ಕೊಪ್ಪಳ, ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ ಮಳೆಯಾಗಲಿದೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೇ 8ರವರೆಗೆ ಬಿರುಗಾಳಿ ಸಹಿತ ಮಳೆಯಾಗಲಿದ್ದು, ನಂತರದ ದಿನಗಳಲ್ಲಿ ಸಾಧಾರಣ ಮಳೆಯಾಗಲಿದೆ.

ಬೆಂಗಳೂರಿನಲ್ಲಿ ಮುಂದಿನ 24 ಗಂಟೆಗಳ ಕಾಲ ಮೋಡ ಕವಿದ ವಾತಾವರಣವಿರಲಿದ್ದು, ಸಂಜೆ ಅಥವಾ ರಾತ್ರಿ ವೇಳೆ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ನಗರದಲ್ಲಿ ಗರಿಷ್ಠ ತಾಪಮಾನ 33 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 23 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುವ ನಿರೀಕ್ಷೆಯಿದೆ.

ಅಕಾಲಿಕ ಮಳೆ: ನೆಲ ಕಚ್ಚಿದ ಭತ್ತದ ಬೆಳೆ

ಬೆಳ್ಳೂಡಿ (ದಾವಣಗೆರೆ): ಹರಿಹರ ತಾಲೂಕಿನಲ್ಲಿ ಬುಧವಾರ ರಾತ್ರಿ ಗಾಳಿ, ಮಳೆ ಆರ್ಭಟಕ್ಕೆ ಬೆಳ್ಳೂಡಿ, ಕುಣೆಬೆಳಕೇರಿ, ಮಲೆಬೆನ್ನೂರು, ಕುಂಬಳೂರು ಸುತ್ತಲ ಗ್ರಾಮಗಳಲ್ಲಿ ಕಟಾವಿಗೆ ಬಂದ 30 ಎಕರೆಯ ಭತ್ತದ ತೆನೆ ನೆಲಕಚ್ಚಿದೆ. ಸುಮಾರು 5 ಲಕ್ಷ ರೂ. ನಷ್ಟವಾಗಿದೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.

ಕರಾವಳಿ ಹಲವೆಡೆ ಮಳೆ

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಗುರುವಾರ ಕೆಲವು ಭಾಗದಲ್ಲಿ ಸಾಧಾರಣ ಮಳೆ ದಾಖಲಾಗಿದೆ. ಮಂಗಳೂರಿನ ಸುರತ್ಕಲ್, ಮೂಲ್ಕಿ ಭಾಗದಲ್ಲಿ ಅರ್ಧತಾಸಿನ ಮಳೆಯಾದರೆ ಇನ್ನು ಕೆಲವು ಭಾಗದಲ್ಲಿ ತುಂತುರು ಮಳೆಯಾಗಿದೆ. ಸುಳ್ಯ, ಸುಬ್ರಹ್ಮಣ್ಯ, ಬೆಳ್ತಂಗಡಿ, ಬಂಟ್ವಾಳ ಕಡೆಯಲ್ಲಿ ಸಾಧಾರಣ ಮಳೆಯಾಗಿದೆ. ಉಡುಪಿ ಜಿಲ್ಲೆಯ ಅನೇಕ ಭಾಗಗಳಲ್ಲಿ ಗುರುವಾರ ಬೆಳಗ್ಗೆ ಸಾಧಾರಣದಿಂದ ಬಿರುಸಿನ ಮಳೆಯಾಗಿದೆ. ರಸ್ತೆಯಲ್ಲಿ ಮರ ಉರುಳಿ ಬಿದ್ದಿದೆ.

ಆಸ್ತಿ ಕಲಹ: ಕೊಲೆಗೆ ಯತ್ನ

■ **ವಿಕ ಸುದ್ದಿಲೋಕ** ಕಡಬ (ದ.ಕ.)

ಆಸ್ತಿಗೆ ಸಂಬಂಧಿಸಿದ ಮನಸ್ತಾಪ ವಿಕೋಪಕ್ಕೆ ತಿರುಗಿ, ಮಹಿಳೆ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲು ಯತ್ನಿಸಿದ ಘಟನೆ ಕಡಬ ಪೊಲೀಸ್ ಠಾಣೆ ವ್ಯಾಪ್ತಿಯ ಐತ್ತೂರು ಗ್ರಾಮದಲ್ಲಿ ಬುಧವಾರ ನಡೆದಿದೆ.

ಐತ್ತೂರು ಗ್ರಾಮದ ಕೆರ್ಮಾಯಿ ಪಾದೆ ಮಜಲು ನಿವಾಸಿ ಬೇಬಿ ಹಾಗೂ ಅವರ ಮೈದುನ ಕುಸುಮಾಧರ ಎಂಬವರಿಗೆ ಆಸ್ತಿ ವಿಚಾರದಲ್ಲಿ ಗಲಾಟೆ ನಡೆದು, ಕುಸುಮಾಧರ ತನ್ನ ಅತ್ತಿಗೆ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲು ಯತ್ನಿಸಿದ ಎಂದು ಆರೋಪಿಸಲಾಗಿದೆ. ಕುಸುಮಾಧರನನ್ನು ಬಂಧಿಸಲಾಗಿದೆ.

ಬೇಬಿ ಅವರ ಪತಿ ನೋಣಯ್ಯ ಹಾಗೂ ಅವರ ಸಹೋದರ ಕುಸುಮಾಧರ ಅವರು ಅಕ್ಕಪಕ್ಕದ ಮನೆಯಲ್ಲಿ ವಾಸವಾಗಿದ್ದಾರೆ. ನೋಣಯ್ಯ ಅವರು ಹೊಸ ಮನೆ ನಿರ್ಮಿಸಲು ತಳಪಾಯ ಹಾಕಿ, ಕೊಳವೆ ಬಾವಿ ಕೂಡ ಕೊರೆಸಿದ್ದು, ಉತ್ತಮ ನೀರು ಸಿಕ್ಕಿದೆ. ಆದರೆ ಕುಸುಮಾಧರ ಕೊರೆಸಿದ ಕೊಳವೆ ಬಾವಿಯಲ್ಲಿ ನೀರು ಸಿಗದ ಹಿನ್ನೆಲೆಯಲ್ಲಿ ಅಸೂಯೆಯಿಂದ ಈ ಕೃತ್ಯ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ.

ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಬಂಧನ

ಕಲಬುರಗಿ: ರೈಲ್ವೆ ಕಾಮಗಾರಿಗಾಗಿ ಮಣ್ಣು ತೆಗೆದಿದ್ದ ಹೊಂಡಕ್ಕೆ ಬಿದ್ದು ವಿದ್ಯಾರ್ಥಿ ಮೃತಪಟ್ಟ ಪ್ರಕರಣ ಸಂಬಂಧ ಪ್ರತಿಭಟನೆ ನಡೆಸುತ್ತಿದ್ದ ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಅವರನ್ನು ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಬಂಧಿಸಿದ್ದಾರೆ.

ಜಿಲ್ಲೆಯ ಚಿತ್ತಾಪುರ ತಾಲೂಕಿನ ಲಾಡ್ಲಾಪುರ ಗ್ರಾ.ಪಂ ವ್ಯಾಪ್ತಿಯ ಕೊಂಚೂರು ಡಿಗ್ಗಿ ತಾಂಡಾ ಬಳಿ ತೊಡಲಾಗಿದ್ದ ಹೊಂಡಕ್ಕೆ ಕೊಂಚೂರು ಡಿಗ್ಗಿ ತಾಂಡಾದ 6ನೇ ತರಗತಿ ವಿದ್ಯಾರ್ಥಿ ರಿತೇಶ ತಂ. ನಾರಾಯಣ (13) ಬಿದ್ದು ಮೃತಪಟ್ಟ. ಮೃತ ಬಾಲಕ ರಿತೇಶ್ ಕುಟುಂಬಕ್ಕೆ ಪರಿಹಾರ ಸಿಗುವರೆಗೂ ಶವಸಂಸ್ಕಾರ ಮಾಡಲು ಅವಕಾಶ ನೀಡುವುದಿಲ್ಲ ಎಂದು ಸ್ಥಳೀಯರು ಪ್ರತಿಭಟನೆ ನಡೆಸುತ್ತಿದ್ದರು. ಇದಕ್ಕೆ ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಬೆಂಬಲ ನೀಡಿದರು. ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ಹಾಗೂ ನಿಯಮಬಾಹಿರ ಹೊಂಡ ತೆಗೆದ ಗುತ್ತಿಗೆದಾರರ ವಿರುದ್ಧ ಕ್ರಮ ಜಾರಿಯಾಗಬೇಕು ಎಂದು ಆಗ್ರಹಿಸಿದರು. ಪೊಲೀಸರು ಪ್ರತಿಭಟನೆ ಕೈ ಬಿಡಲು ಮನವೊಲಿಸಲು ಪ್ರಯತ್ನಿಸಿದರು ಯಶಸ್ವಿಯಾಗಲಿಲ್ಲ. ಪರಿಸ್ಥಿತಿ ತಿಳಿಗೊಳ್ಳದ ಕಾರಣ ಮಣಿಕಂಠ ರಾಠೋಡ ಅವರನ್ನು ಬುಧವಾರ ರಾತ್ರಿ 12.30ಕ್ಕೆ ಶಾಂತಿ ಸುವ್ಯವಸ್ಥೆ ದೃಷ್ಟಿಯಿಂದ ಪೊಲೀಸರು ತಮ್ಮ ವಾಹನದಲ್ಲಿ ಬಲವಂತವಾಗಿ ಕರೆದೊಯ್ದರು. ನಂತರ ಕಲಬುರಗಿಗೆ ಕರೆದೊಯ್ದು 7 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಪೋಕ್ಸೊ: ಆರೋಪಿ ಸೆರೆ

ಹೊಸಪೇಟೆ (ವಿಜಯನಗರ): ನಗರದ ಸರಕಾರಿ ಆಸ್ಪತ್ರೆಗೆ ತಾಯಿಯನ್ನು ಚಿಕಿತ್ಸೆಗೆ ಕರೆತಂದ 16 ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ದೂರು ಆಧರಿಸಿ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಆಸ್ಪತ್ರೆಯಲ್ಲಿ ಗ್ರೂಪ್ ಡಿ ಸಿಬ್ಬಂದಿ ಅಜಯ್ ಬಂಧಿತ ಆರೋಪಿ. ಈತ ಮೇ 5ರಂದು ರಾತ್ರಿ ಬಾಲಕಿಯನ್ನು ಆರೋಪಿ ಪುಸಲಾಯಿಸಿ ಆಸ್ಪತ್ರೆಯ ಆವರಣದ ತನ್ನ ವಸತಿ ಗೃಹಕ್ಕೆ ಕರೆದೊಯ್ದು ಮತ್ತು ಬರುವ ಪಾನೀಯ ಕುಡಿಸಿ ಪ್ರಜ್ಞೆ ತಪ್ಪಿದ ನಂತರ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.



ಆಗಸ್ಟ್‌ನಲ್ಲಿ ವಿಶೇಷಚೇತನರಿಗೆ ಉದ್ಯೋಗ ಮೇಳ

ಬೆಂಗಳೂರು: ಮುಂಬರುವ ಆಗಸ್ಟ್‌ನಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ವಿಶೇಷಚೇತನರಿಗೆ ವಿಶೇಷ ಉದ್ಯೋಗ ಮೇಳ ಆಯೋಜಿಸುವುದಾಗಿ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದರು. ವಿಕಾಸಸೌಧದಲ್ಲಿ ಗುರುವಾರ ಅಸಿಸ್ಟೆಕ್ ಫೌಂಡೇಶನ್ (ಎಟಿಎಫ್) ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ವಿಶೇಷಚೇತನರಿಗೆ ಉದ್ಯೋಗ ಅವಕಾಶ ಮತ್ತು ಕೌಶಲಾಭಿವೃದ್ಧಿ ಆದ್ಯತೆಗೆ ರೂಪಿಸಲಾದ 'ಆದಿದ್ವಾರ' ಅಪ್ಲಿಕೇಶನ್ ಹಾಗೂ ಉದ್ಯೋಗ ಮೇಳದ ಅಧಿಕೃತ ಲೋಗೊ ಬಿಡುಗಡೆ ಮಾಡಿ ಅವರು ಮಾತನಾಡಿದರು.

"ಉದ್ಯೋಗ ಮೇಳದಲ್ಲಿ ತರಬೇತಿ ಪಾಲುದಾರರು ಮತ್ತು ಸಹಾಯಕ ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳೊಂದಿಗೆ ಸಂಪರ್ಕಿಸಲು ದೊಡ್ಡ ವೇದಿಕೆ ಸಿಗಲಿದೆ. ವೃತ್ತಿ ಮಾರ್ಗದರ್ಶನ ಅವಧಿ, ಕೌಶಲ ಮಾರ್ಗ ಜಾಗೃತಿ ಕಾರ್ಯಕ್ರಮ ಮತ್ತು ತಂತ್ರಜ್ಞಾನ ಪ್ರದರ್ಶನ ಇರಲಿದ್ದು, ಮೂರು ಸಾವಿರಕ್ಕೂ ಹೆಚ್ಚು ವಿಶೇಷಚೇತನ ಉದ್ಯೋಗಾಕಾಂಕ್ಷಿಗಳು ಭಾಗವಹಿಸುವ ನಿರೀಕ್ಷೆಯಿದೆ," ಎಂದು ತಿಳಿಸಿದರು.

"ವಿಶೇಷಚೇತನರಲ್ಲಿ ವಿಶೇಷ ಪ್ರತಿಭೆ ಇರುತ್ತದೆ. ಕಾರ್ಪೊರೇಟ್ ಸಂಸ್ಥೆಗಳು ನೇಮಕಾತಿ ಸಮಯದಲ್ಲಿ ಅವರಿಗೆ ಸಮಾನ ಅವಕಾಶ ಮತ್ತು ಕೌಶಲ ನೀಡಬೇಕು," ಎಂದು ಹೇಳಿದರು.

"ಆದಿದ್ವಾರ ವೇದಿಕೆಯು ಉದ್ಯೋಗಾವಕಾಶ, ಇಂಟರ್ನ್‌ಶಿಪ್, ಕೌಶಲ ಮತ್ತು ಕೌಶಲಾಭಿವೃದ್ಧಿ ಕಾರ್ಯಕ್ರಮಗಳಿಗೆ ವೇದಿಕೆ ಕಲ್ಪಿಸುತ್ತದೆ. ಉದ್ಯೋಗದಾತರು ಸಮಗ್ರ ಉದ್ಯೋಗಾವಕಾಶಗಳ ಬಗ್ಗೆ ಪೋಸ್ಟ್ ಮಾಡಲು ನೆರವಾಗಲಿದೆ. ಎಐ ಆಧಾರಿತ ಉದ್ಯೋಗ ಕೌಶಲ, ಆಸಕ್ತಿಗಳು ಮತ್ತು ಅವಶ್ಯಕತೆಗಳನ್ನು ಸೂಕ್ತವಾಗಿ ಕಲ್ಪಿಸಲಿದೆ," ಎಂದರು.

ವಿಧಾನ ಪರಿಷತ್ ಸದಸ್ಯ ಸುಧಾಮ್ ದಾಸ್ ಮತ್ತು ಎಟಿಎಫ್ ಸಿಇಒ ಪ್ರತೀಕ್ ಮಾಧವ್ ಉಪಸ್ಥಿತರಿದ್ದರು.

ಈ ತಿಂಗಳಿಂದ ಅಕ್ಕಿ ಜತೆ 2 ಕೆ.ಜಿ. ರಾಗಿ ವಿತರಣೆ

■ **ಎಚ್.ಪಿ. ಪುಣ್ಯವತಿ** ಬೆಂಗಳೂರು
punyavathi.hp@timesofindia.com

ಬಿಪಿಎಲ್ ಪಡಿತರ ಕಾರ್ಡ್‌ದಾರರಿಗೆ ಅನ್ನ ಭಾಗ್ಯ ಯೋಜನೆಯಡಿ ಈ ತಿಂಗಳಿಂದ ಅಕ್ಕಿ ಜತೆಗೆ ರಾಗಿಯೂ ಸಿಗಲಿದೆ. ಸದ್ಯ ಪ್ರತಿ ವ್ಯಕ್ತಿಗೆ ರಾಜ್ಯ ಹಾಗೂ ಕೇಂದ್ರದ್ದು ಸೇರಿ ಒಟ್ಟು 10 ಕೆ.ಜಿ. ಅಕ್ಕಿ ವಿತರಿಸಲಾಗುತ್ತಿದೆ. ಈ ತಿಂಗಳಿಂದ ಗ್ರಾಹಕರಿಗೆ 2 ಕೆ.ಜಿ. ರಾಗಿ ನೀಡಲು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ನಿರ್ಧರಿಸಿದೆ.

ರಾಜ್ಯದಲ್ಲಿ ಈಗ 1.14 ಕೋಟಿಗೂ ಹೆಚ್ಚು ಬಿಪಿಎಲ್ ಕಾರ್ಡ್‌ಗಳಿದ್ದು, 4.01 ಕೋಟಿಗೂ ಹೆಚ್ಚು ಸದಸ್ಯರಿದ್ದಾರೆ. ಅವರಿಗೆ ಪ್ರತಿ ತಿಂಗಳು 57 ಸಾವಿರ ಮೆಟ್ರಿಕ್ ಟನ್ ರಾಗಿ ಅಗತ್ಯವಿದ್ದು, 10 ತಿಂಗಳಿಗೆ ನೀಡಲು ಅಗತ್ಯವಿರುವಷ್ಟು ಸಂಗ್ರಹಿಸಲಾಗಿದೆ. ಇದರ ಜತೆಗೆ, ಉಳಿದ ಸುಮಾರು 20-30 ಸಾವಿರ ಮೆಟ್ರಿಕ್ ಟನ್‌ನಷ್ಟು ರಾಗಿಯನ್ನು ಅನ್ಯ ರಾಜ್ಯಗಳಿಗೆ ನೀಡಲು ನಿಗಮ ನಿರ್ಧರಿಸಿದೆ.

ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮವು 5.2 ಲಕ್ಷ ಮೆಟ್ರಿಕ್ ಟನ್ ರಾಗಿಯನ್ನು ಬೆಂಬಲ ಬೆಲೆಯಡಿ ರೈತರಿಂದ ಖರೀದಿಸಿ ದಾಸ್ತಾನು ಮಾಡಿದೆ.

ರಾಗಿ ಮಾರಾಟ ಮಾಡಲು ಮೇ 15ರವರೆಗೆ ನೋಂದಾಯಿತ ರೈತರಿಗೆ ಅವಕಾಶ ನೀಡಲಾಗಿದೆ. 6 ಲಕ್ಷ ಮೆಟ್ರಿಕ್ ಟನ್‌ಗೂ ಅಧಿಕ ರಾಗಿ ಸಂಗ್ರಹ ಗುರಿ ಹೊಂದಿದ್ದು, ಮೇ ತಿಂಗಳವರೆಗೆ ಖರೀದಿ ನಡೆಯುತ್ತದೆ. ಹತ್ತು ತಿಂಗಳಿಗೆ ವಿತರಣೆ ಮಾಡುವಷ್ಟು ರಾಗಿ-ಜೋಳ ಖರೀದಿಸಿ ಸಂಗ್ರಹಿಸಿಡಲಾಗುವುದು. ಈ ಸಂಬಂಧ ಕೇಂದ್ರ ಸರಕಾರದಿಂದ ಅನುಮೋದನೆ ಪಡೆದು ವಿತರಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ ಸುಮಾರು 8-10 ಜಿಲ್ಲೆಗಳನ್ನು ಹೊರತುಪಡಿಸಿದರೆ ಮಾಸಿಕ 57 ಸಾವಿರ ಮೆಟ್ರಿಕ್ ಟನ್ ರಾಗಿ ಬೇಕಾಗುತ್ತದೆ. 8-9 ಸಾವಿರ ಮೆಟ್ರಿಕ್ ಟನ್ ಜೋಳ ಬೇಕಾಗುತ್ತದೆ ಎಂದು ಇಲಾಖೆ ಅಂದಾಜಿಸಿದೆ.

ಹಳೇ ಮೈಸೂರು ಭಾಗದವರಿಗೆ 2 ಕೆಜಿ ರಾಗಿ ಹಾಗೂ ಹೈದರಾಬಾದ್ ಕರ್ನಾಟಕ ಹಾಗೂ ಮುಂಬಯಿ ಕರ್ನಾಟಕ ಭಾಗದ ಪಡಿತರದಾರರಿಗೆ 2 ಕೆಜಿ ಜೋಳ ನೀಡಲು ನಿಗಮ ನಿರ್ಧರಿಸಿದೆ.

ಜುಲೈ ನಂತರ ಜೋಳ ವಿತರಣೆ

ಕಾಂಗ್ರೆಸ್ ಸರಕಾರದ 'ಅನ್ನಭಾಗ್ಯ' ಯೋಜನೆಯಡಿ ಫಲಾನುಭವಿಗಳಿಗೆ ನೀಡುತ್ತಿರುವ ಒಟ್ಟು ಪ್ರಮಾಣದಲ್ಲಿ ಪದಾರ್ಥಗಳನ್ನು ಬದಲಾವಣೆ ಮಾಡಲಾಗುವುದು. ಕೆಲವು ಭಾಗಗಳಲ್ಲಿ ರಾಗಿ ಬಳಸಿದರೆ, ಇನ್ನೂ ಕೆಲವು ಭಾಗಗಳಲ್ಲಿ ಜೋಳ ಬಳಸುತ್ತಾರೆ. ಹೀಗಾಗಿ, ಈ ಪದಾರ್ಥಗಳನ್ನೇ ನೀಡಲಾಗುವುದು. ಜನ ಏನನ್ನು ತಿನ್ನಲು ಇಚ್ಛಿಸುತ್ತಾರೋ ಅದನ್ನೇ ನೀಡಲಾಗುವುದು. ಹೀಗಾಗಿ, ಕಳೆದ ಕೆಲವು ವರ್ಷಗಳಿಂದ ಅಕ್ಕಿಯ ಜತೆಗೆ ಪ್ರತಿ ವ್ಯಕ್ತಿಗೆ 2 ಕೆ.ಜಿ. ರಾಗಿ / ಜೋಳವನ್ನು ವಿತರಿಸಲಾಗುತ್ತಿದೆ.

> ರಾಜ್ಯದ ಬಿಪಿಎಲ್ ಪಡಿತರ ಕಾರ್ಡ್‌ದಾರರಿಗೆ ವಿತರಿಸಲು ತಿಂಗಳಿಗೆ 57 ಸಾವಿರ ಮೆಟ್ರಿಕ್ ಟನ್ ರಾಗಿ ಅಗತ್ಯವಿದೆ. 10 ತಿಂಗಳಿಗೆ ಬೇಕಾಗುವಷ್ಟು ರಾಗಿಯನ್ನು ಈಗಾಗಲೇ ಸಂಗ್ರಹಿಸಲಾಗಿದೆ. ಮೇ 15ರವರೆಗೆ ರಾಗಿ ಖರೀದಿ ಪ್ರಕ್ರಿಯೆ ನಡೆಯಲಿದ್ದು, ಹೆಚ್ಚುವರಿ ರಾಗಿಯಲ್ಲಿ 20-30 ಸಾವಿರ ಮೆಟ್ರಿಕ್ ಟನ್‌ನಷ್ಟನ್ನು ಅನ್ಯ ರಾಜ್ಯಗಳಿಗೆ ಕೊಟ್ಟು ನಮ್ಮ ರಾಗಿಯ ಮಹತ್ವ ತಿಳಿಸಲಾಗುವುದು.
>
> **-ಎಂ.ಕೆ.ಜಗದೀಶ್** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-530/25-26/495/2026-27 ದಿನಾಂಕ: 06.05.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015 ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎನ್. ಜಯರಾಮ್ ರೆಡ್ಡಿ ಮತ್ತು ಇತರರು	ಬೆಂಗಳೂರು ಪೂರ್ವ	ವರ್ತೂರು	ವಾಲೇಪುರ	30/6	0-14.50	ವ್ಯವಸಾಯ	ವಸತಿ
2					30/8ರ ಪೈಕಿ	0-03.25		
3					41/2	1-15		
4					41/3ರ ಪೈಕಿ	0-02.75		

ಷರಾ: ಪ್ರಶ್ನಿತ ಜಮೀನುಗಳಲ್ಲಿ ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ವಸತಿ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಸತಿ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅರ್ಜಿದಾರರು ತಿಳಿಸುತ್ತಾ, 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ. ಸಹಾಯವಾಣಿ/ವಾಟ್ಸ್‌ಪ್: 9483166622 (24X7). @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ.2, 2/1 & 2/3, ಕಾಳಿದಾಸ ಮಾರ್ಗ, 1ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು - 560009. ದೂರವಾಣಿ ಸಂ. 080-22265383 website: www.kiadb.in

ಸಂಖ್ಯೆ:ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-12/1102/2026-27 ದಿನಾಂಕ:05.05.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿಲಕೋಟೆ ಪದ್ಧತಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಹೆಸರು: (1) ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಜರಬಂಡನಹಳ್ಳಿ ಗ್ರಾಮದಲ್ಲಿನ ಗೌರಿಬಿದನೂರು 4ನೇ ಹಂತದ ಸೆಕ್ಟರ್-1ರಲ್ಲಿ ಡಾಂಬರೀಕರಣ, ಆರ್‌ಸಿಸಿ ಬದಿ ಚರಂಡಿಗಳ ನಿರ್ಮಾಣ, ಪರಿವೀಕ್ಷಣಾ ಚೇಂಬರ್‌ಗಳು, ಸ್ಲಾಬ್ ಕಲ್ವರ್ಟ್‌ಗಳು, ವಾಲ್ವ್ ಸಿಸ್ಟರ್ನ್, ಮಳೆ ನೀರು ಕೊಯ್ಲು ಹಾಗೂ ನೀರು ಸರಬರಾಜು ಕಾಮಗಾರಿಗಳನ್ನು ಒಳಗೊಂಡಂತೆ ರಸ್ತೆ ನಿರ್ಮಾಣ ಕಾಮಗಾರಿ. (2) ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಜರಬಂಡನಹಳ್ಳಿ ಗ್ರಾಮದಲ್ಲಿನ ಗೌರಿಬಿದನೂರು 4ನೇ ಹಂತದ ಸೆಕ್ಟರ್-2ರಲ್ಲಿ ಡಾಂಬರೀಕರಣ, ಆರ್‌ಸಿಸಿ ಬದಿ ಚರಂಡಿಗಳ ನಿರ್ಮಾಣ, ಪರಿವೀಕ್ಷಣಾ ಚೇಂಬರ್‌ಗಳು, ಸ್ಲಾಬ್ ಕಲ್ವರ್ಟ್‌ಗಳು, ವಾಲ್ವ್ ಸಿಸ್ಟರ್ನ್, ಮಳೆ ನೀರು ಕೊಯ್ಲು ಹಾಗೂ ನೀರು ಸರಬರಾಜು ಕಾಮಗಾರಿಗಳನ್ನು ಒಳಗೊಂಡಂತೆ ರಸ್ತೆ ನಿರ್ಮಾಣ ಕಾಮಗಾರಿ. (3) ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು, KWIN ಸಿಟಿ 1ನೇ ಹಂತದಲ್ಲಿ 10 ಎಂಎಲ್‌ಡಿ ತ್ಯಾಜ್ಯ ಸಂಸ್ಕರಣ ಘಟಕ, 5 ಎಂಎಲ್‌ಡಿ ತೃತೀಯ ಸಂಸ್ಕರಣ ಘಟಕದೊಂದಿಗೆ ಪ್ರತಿ 1.50 ಎಂಎಲ್‌ಡಿಯ ಎರಡು ಮಾಡ್ಯೂಲ್‌ನ ಸಾಮಾನ್ಯ ಎಫ್ಲುವೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್ (CETP) ಹಾಗೂ 1.5 ಎಂಎಲ್‌ಡಿ ಸಾಮರ್ಥ್ಯದ ಆರ್.ಓ ಸಿಸ್ಟಮ್ ಹಾಗೂ ಜೆಡ್‌ಎಲ್‌ಡಿ ಸೌಲಭ್ಯದೊಂದಿಗೆ ಟರ್ನ್‌ಕೀ ಆಧಾರದಲ್ಲಿ ಸ್ಥಾಪನೆ, ಕಾರ್ಯಾಚರಣೆ ಮತ್ತು 10 ವರ್ಷಗಳ ಕಾಲ ನಿರ್ವಹಣೆ ಮಾಡುವ ಕಾಮಗಾರಿ.

- ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 25.05.2026ರ ಸಂಜೆ 4:00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-1,
ಕೆ.ಐ.ಎ.ಡಿ.ಬಿ, ಬೆಂಗಳೂರು

ಡಿಐಪಿಆರ್/ಸಿಪಿ/536/ಸಿಸಿಎಲ್/2026-27

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು - 560 009. ದೂ.ಸಂಖ್ಯೆ : 080-22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ/13/420/2026-27 ದಿನಾಂಕ : 07.05.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಸಿಇಐನಿಂದ ಪಡೆದ ಸೂಪರ್ ಗ್ರೇಡ್ ವಿದ್ಯುತ್ ಪರವಾನಗಿ ಹಾಗೂ ಕೆಪಿಡಬ್ಲ್ಯೂಡಿ ದರ್ಜೆ-1 (ಸಿವಿಲ್) ಪರವಾನಗಿ ಹೊಂದಿರುವ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು : ಭಾಗ-ಎ : ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು 3ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ 2x20 ಎಂ.ವಿ.ಎ, ಸಾಮರ್ಥ್ಯದ 66/11 ಕೆ.ವಿ ವಿದ್ಯುತ್ ಉಪ ಕೇಂದ್ರ ನಿರ್ಮಾಣ ಕಾಮಗಾರಿ. ಭಾಗ-ಬಿ : (i) ಕುಡುಮಲಕುಂಟೆ 66/11 ಕೆವಿ ಉಪ ಕೇಂದ್ರದಿಂದ ಕಾಮನ್ ಟವರ್‌ವರೆಗೆ 0.958 ಕಿಮೀ ಉದ್ದಕ್ಕೆ ಡಿಸಿ ಟವರ್‌ಗಳ ಮೇಲೆ 66 ಕೆವಿ ಎಸ್‌ಸಿ ಲೈನ್ ನಿರ್ಮಾಣ ಮಾಡುವುದು. (ii) ವಿಧುರಾಶ್ವತ 66/11 ಕೆವಿ ಉಪ ಕೇಂದ್ರದಿಂದ ಕಾಮನ್ ಟವರ್‌ವರೆಗೆ ಡಿಸಿ ಟವರ್‌ಗಳ ಮೇಲೆ 3.355 ಕಿಮೀ ಉದ್ದಕ್ಕೆ 66 ಕೆವಿ ಎಸ್‌ಸಿ ಲೈನ್ ನಿರ್ಮಾಣ ಮಾಡುವುದು. (iii) ಕಾಮನ್ ಟವರ್‌ನಿಂದ ಪ್ರಸ್ತಾವಿತ 66/11 ಕೆವಿ ಗೌರಿಬಿದನೂರು 3ನೇ ಹಂತ ಕೈಗಾರಿಕಾ ಪ್ರದೇಶದ ಉಪ ಕೇಂದ್ರದವರೆಗೆ ಡಿಸಿ ಟವರ್‌ಗಳ ಮೇಲೆ 1.971 ಕಿ.ಮೀ. ಉದ್ದಕ್ಕೆ 66 ಕೆವಿ ಡಿಸಿ ಲೈನ್ ನಿರ್ಮಾಣ ಮಾಡುವ ಕಾಮಗಾರಿ. ಭಾಗ-ಸಿ : (i) ಚಿಕ್ಕಬಳ್ಳಾಪುರ ಜಿಲ್ಲೆ, ಕುಡುಮಲಕುಂಟೆ ಕೈಗಾರಿಕಾ ಪ್ರದೇಶದ ಹಾಲಿ 66/11ಕೆವಿ ಉಪ ಕೇಂದ್ರದಲ್ಲಿ 1 ಸಂಖ್ಯೆ ಲೈನ್ ಟಿಬಿ ನಿರ್ಮಾಣ ಕಾಮಗಾರಿ. (ii) ಚಿಕ್ಕಬಳ್ಳಾಪುರ ಜಿಲ್ಲೆ, ವಿದುರಾಶ್ವಥ ಹಾಲಿ 66/11 ಕೆವಿ. ಉಪ ಕೇಂದ್ರದಲ್ಲಿ 1 ಸಂಖ್ಯೆ ಟಿಬಿ ನಿರ್ಮಾಣ ಕಾಮಗಾರಿ. (2ನೇ ಕರೆ).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 25.05.2026 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-1,
ಕೆಐಎಡಿಬಿ, ಬೆಂಗಳೂರು

DIPR/CP/566/Zen/2026-27

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು-2 ರವರ ಕಚೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು - 560052.

ಸಂಖ್ಯೆ: ಉಪ್ರವ್ಯ-2/ಬಿಎಸ್‌ಡಬ್ಲ್ಯೂಎಂಎಲ್/ತಿದ್ದು-01/2026-27 ದಿನಾಂಕ: 07.05.2026

ತಿದ್ದುಪಡಿ-1

ವಿಷಯ : ಟೆಂಡರ್‌ಗಾಗಿ ಈವೆಂಟ್‌ಗಳ ಕ್ಯಾಲೆಂಡರ್‌ನ ವಿಸ್ತರಣೆ. ಉಲ್ಲೇಖ ಉಪ್ರವ್ಯ-2 /ಬಿಎಸ್‌ಡಬ್ಲ್ಯೂಎಂಎಲ್/ಟೆಂಡ/03/2026-27 ದಿನಾಂಕ : 02.05.2026.
ಮೇಲಿನ ವಿಷಯ ಮತ್ತು ಉಲ್ಲೇಖದ ಪ್ರಕಾರ, ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದಾಗಿ ಮೇಲಿನ ಟೆಂಡರ್ ಅಧಿಸೂಚನೆಯ ಕಾರ್ಯಕ್ರಮಗಳ ಕ್ಯಾಲೆಂಡರ್ ಅನ್ನು ವಿಸ್ತರಿಸಲಾಗಿದೆ.

ಕ್ರ ಸಂ.	ವಿವರಗಳು	ಟೆಂಡರ್ ಅಧಿಸೂಚನೆಯ ಪ್ರಕಾರ	ಮುಂದೂಡಲಾದ ದಿನಾಂಕಗಳು
1	ಪ್ರೀ ಬಿಡ್‌ನ ದಿನಾಂಕ	12.05.2026 ಮಧ್ಯಾಹ್ನ 3.00 ಗಂಟೆ	18.05.2026 ಮಧ್ಯಾಹ್ನ 3.00 ಗಂಟೆ
2	ಅರ್ಹತಾ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	22.05.2026 ಸಂಜೆ 4.00 ಗಂಟೆಯವರೆಗೆ	29.05.2026 ಸಂಜೆ 4.00 ಗಂಟೆಯವರೆಗೆ
3	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	25.05.2026 ಸಂಜೆ 4.30 ಗಂಟೆಗೆ	30.05.2026 ಸಂಜೆ 4.30 ಗಂಟೆಗೆ

ಹೆಚ್ಚಿನ ವಿವರಗಳಿಗಾಗಿ ಜಿಓಕೆ ಕೆಪಿಪಿ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಗೆ ಭೇಟಿ ನೀಡಿ.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-2, ಬಿಎಸ್‌ಡಬ್ಲ್ಯೂಎಂಎಲ್

DIPR/CP/565/NR/2026-27

ಉನ್ನತ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು- 560001

ಸಂ. ಇಡಿ/12/ಕೆವಿಎ/2026 ದಿನಾಂಕ: 06-05-2026

ಸಾರ್ವಜನಿಕ ಪ್ರಕಟಣೆ

ಕನ್ನಡ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಯ ನೇಮಕಾತಿ

ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, ಇವರು ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಕನ್ನಡ ವಿಶ್ವವಿದ್ಯಾಲಯಗಳ ಅಧಿನಿಯಮ 1991 ರ ಪ್ರಕರಣ 13(2) ರ ಉಪಬಂಧಗಳನುಸಾರ ನೇಮಕಾತಿ ಮಾಡಲು ಅರ್ಹ ಪ್ರಾಧ್ಯಾಪಕರು / ಶಿಕ್ಷಣ ತಜ್ಞರುಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಈ ಜಾಹೀರಾತು ಪ್ರಕಟಣೆಯಾದ 20 ದಿನಗಳ ಒಳಗಾಗಿ ಸ್ವೀಕೃತವಾಗುವಂತೆ " ಸರಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು - 560001" ಇವರಿಗೆ ಸಲ್ಲಿಸತಕ್ಕದ್ದು. ಇಮೇಲ್ : kannadaunivc2026@gmail.com. ವಿವರವಾದ ಅರ್ಜಿಗಳು ಮತ್ತು ಇತರೆ ವಿವರಗಳು ಉನ್ನತ ಶಿಕ್ಷಣ ಇಲಾಖೆಯ ವೆಬ್ ಸೈಟ್ https://hed.karnataka.gov.in. ನಲ್ಲಿ ಪಡೆಯಬಹುದು.

ಸಹಿ/-
ಸರ್ಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ

DIPR/CP/552/Zen/2026-27

ಸರಕಾರಕ್ಕೆ ನೋಟಿಸ್

ಬೆಂಗಳೂರು: ಜಮೀನು ವ್ಯಾಜ್ಯದಲ್ಲಿ ನ್ಯಾಯಾಲಯದ ಆದೇಶ ಲೆಕ್ಕಿಸದೆ ಅತಿಕ್ರಮ ಪ್ರವೇಶ ಮಾಡಿದ್ದಾರೆಂಬ ಆರೋಪದಡಿ ಕಿರುತೆರೆ ನಿರ್ದೇಶಕ ಟಿ.ಎನ್.ಸೀತಾರಾಮ್ ಮತ್ತಿತರರ ವಿರುದ್ಧ ದಾಖಲಿಸಿರುವ ಪ್ರಕರಣ ಸಂಬಂಧ ಹೈಕೋರ್ಟ್, ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಟಿ.ಎನ್.ಸೀತಾರಾಮ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ನ್ಯಾಯಮೂರ್ತಿ ಪಿ.ಶ್ರೀಷಾನಂದ ಅವರಿದ್ದ ರಜಾ ಕಾಲದ ಏಕಸದಸ್ಯ ಪೀಠದ ಮುಂದೆ ಗುರುವಾರ ವಿಚಾರಣೆಗೆ ಬಂದಿತು. ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆ ಪೊಲೀಸ್ ಮತ್ತು ದೂರುದಾರ ಎಂ.ಎ. ಅರವಿಂದ ಕುಮಾರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿತು. ದೊಡ್ಡಬಳ್ಳಾಪುರ ತಾಲೂಕಿನ ಹಸನಘಟ್ಟದಲ್ಲಿನ ಜಮೀನು ವ್ಯಾಜ್ಯದ ಸಂಬಂಧ ತಮ್ಮ ವಿರುದ್ಧ ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಆ ಕುರಿತಾದ ತನಿಖೆ ರದ್ದುಪಡಿಸಬೇಕು ಎಂದು ಕೋರಿ ಅರ್ಜಿದಾರರು ಹೈಕೋರ್ಟ್‌ನ ಮೆಟ್ಟಿಲೇರಿದ್ದಾರೆ.

ಸಿಎಂ ಪಟ್ಟಕ್ಕೆ ಆರೇ ಹೆಜ್ಜೆ

» ಮೊದಲ ಪುಟದಿಂದ

ಟಿಪಿಕೆ ಜತೆ ಕೈಜೋಡಿಸಿರುವ ಕಾಂಗ್ರೆಸ್ ಮಾತ್ರವಲ್ಲದೆ ಡಿಎಂಕೆ, ಎಐಎಡಿಎಂಕೆ, ಪಿಸಿಕೆ ಹಾಗೂ ಎಡಪಕ್ಷಗಳ ಮುಖಂಡರೂ ಗವರ್ನರ್ ನಡೆಯನ್ನು ತಾರತಮ್ಯಪೂರಿತ ಮತ್ತು ಸಂವಿಧಾನ ಬಾಹಿರ ಎಂದು ಕಿಡಿಕಾರಿದ್ದಾರೆ. ರಾಜ್ಯಪಾಲರು ಬಿಜೆಪಿಯ ಸೂಚನೆಯಂತೆ ನಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಸ್ಟಾಲಿನ್ ಮರ್ಜಿಗೆ ನಿರ್ಧಾರ: ಡಿಎಂಕೆ ನಡೆ ನಿರ್ಧರಿಸಲು ಚೆನ್ನೈನಲ್ಲಿ ಡಿಎಂಕೆ ಶಾಸಕರು ಗುರುವಾರ ಸಭೆ ನಡೆಸಿದರು. ಸ್ಥಿರ ಸರಕಾರ ರಚನೆ ಮತ್ತು ಯಾವುದೇ ಕಾರಣಕ್ಕೂ ಮತ್ತೊಮ್ಮೆ ಚುನಾವಣೆ ನಡೆಯದಂತೆ ತಪ್ಪಿಸಲು ತಪ್ಪಿಸಲು ಅಂತಿಮ ನಿರ್ಧಾರವನ್ನು ಪಕ್ಷದ ಮುಖ್ಯಸ್ಥ ಸ್ಟಾಲಿನ್‌ಗೆ ಬಿಡಲಾಗಿದೆ.

ವಿಟಿಯು-ಯುಜಿ, ಪಿಜಿ ಪರೀಕ್ಷಾ ವೇಳಾಪಟ್ಟಿ ಬಿಡುಗಡೆ

■ **ವಿಕ ಸುದ್ದಿಲೋಕ** ಬೆಂಗಳೂರು

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ನಡೆಸುವ ಪರೀಕ್ಷಾ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ಪರೀಕ್ಷೆಗಳು ಜೂನ್ ಎರಡನೇ ವಾರದಿಂದ ಆರಂಭವಾಗಿ ಆಗಸ್ಟ್ ಮೂರನೇ ವಾರದ ಅವಧಿಗೆ ಅಂತ್ಯಗೊಳ್ಳಲಿದೆ.

ಹೊಸ ಪಠ್ಯಕ್ರಮ ಮತ್ತು ಹಳೇ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ವೇಳಾಪಟ್ಟಿಯನ್ನು ರೂಪಿಸಲಾಗಿದೆ. ಈ ವೇಳಾಪಟ್ಟಿಯನ್ನು ವಿಟಿಯು ಸಂಯೋಜಿತ ಕಾಲೇಜಿನ ಪ್ರಾಂಶುಪಾಲರು ಸೂಚನಾ ಫಲಕಗಳಲ್ಲಿ ಪ್ರಕಟಿಸುವ ಮೂಲಕ ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ವಿಟಿಯು ಸೂಚಿಸಿದೆ. ಹೆಚ್ಚಿನ ಮಾಹಿತಿಗೆ ವಿಟಿಯು ವೆಬ್‌ಸೈಟ್‌ಗೆ https://vtu.ac.in ಭೇಟಿ ನೀಡಬಹುದು ಎಂದು ವಿಟಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು - 560 009. ದೂ.ಸಂಖ್ಯೆ : 080-22265383, website: www.kiadb.in

ಸಂ.KIADB/COF/ಅಂತಿಮ ಬೆಲೆ/1847/2026-27 ದಿನಾಂಕ : 07.05.2026

ಪತ್ರಿಕೆ ಪ್ರಕಟಣೆ

ವಿಷಯ: ಕರ್ನಾಟಕದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶ (ದಾಬಸ್‌ಪೇಟೆ ನಾಲ್ಕನೆ ಹಂತ)ಕ್ಕೆ ಸಂಬಂಧಿಸಿದಂತೆ ಅಂತಿಮ ಬೆಲೆಯ ನಿರ್ಣಯ.

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ (KIADB) ಕರ್ನಾಟಕ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶ (ದಾಬಸ್‌ಪೇಟೆ ನಾಲ್ಕನೇ ಹಂತ) ಹಂಚಿಕೆದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, KIAD ಮಂಡಳಿಯು 07.03.2026ರಂದು ನಡೆದ 398ನೇ ಸಭೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶ (ದಾಬಸ್‌ಪೇಟೆ ನಾಲ್ಕನೇ ಹಂತ)ದ ಅಂತಿಮ ಬೆಲೆಯನ್ನು ಈ ಕೆಳಗೆ ವಿವರಿಸಿದಂತೆ ನಿರ್ಧರಿಸಿದೆ;

ಕ್ರ ಸಂ	ಪ್ರತಿ ಎಕರೆಗೆ ಹಂಚಿಕೆಯ ತಾತ್ಕಾಲಿಕ ವೆಚ್ಚ (ರೂ. ಲಕ್ಷಗಳಲ್ಲಿ)	ಪ್ರತಿ ಎಕರೆಗೆ ಅಂತಿಮ ಬೆಲೆಯನ್ನು (ಲಕ್ಷ ರೂ.ಗಳಲ್ಲಿ) ನಿರ್ಧರಿಸಲಾಗಿದೆ (ನೀರು ಸರಬರಾಜು ಯೋಜನೆಯ ಅನುಪಾತದ ವೆಚ್ಚ ಪ್ರತಿ ಎಕರೆಗೆ ರೂ.14.50 ಲಕ್ಷಗಳು ಸೇರಿದಂತೆ)	ಅಂತಿಮ ಬೆಲೆ ಪ್ರತಿ ಎಕರೆಗೆ ಪಾವತಿಸಬೇಕಾದ ಭೂಮಿಯ ಬೆಲೆಯ ವ್ಯತ್ಯಾಸದ ಮೊತ್ತ (ರೂ.(ಲಕ್ಷಗಳಲ್ಲಿ)
1	57.00 (ಅಭಿವೃದ್ಧಿ ವೆಚ್ಚದಲ್ಲಿ ಹಂಚಿಕೆ ಮಾಡಲಾಗಿದೆ)	105.35	48.35
2	75.00 (50% ರಿಯಾಯಿತಿ ದರದಲ್ಲಿ KASSIA ಗೆ ಹಂಚಿಕೆ ಮಾಡಲಾಗಿದೆ)	128.00	53.00
3	150.00	241.50	91.50

ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶದ (ದಾಬಸ್‌ಪೇಟೆ ನಾಲ್ಕನೆ ಹಂತ) ಎಲ್ಲಾ ಹಂಚಿಕೆದಾರರು KIADB RTGS/NEFT ಮೂಲಕ ಹಂಚಿಕೆ ಮಾಡಿದ ಭೂಮಿಯ ಬೆಲೆಯ ಅಂತಿಮ ಬೆಲೆ ವ್ಯತ್ಯಾಸವನ್ನು ಈ ಕೆಳಗೆ ತಿಳಿಸಲಾದ KIADB ಬ್ಯಾಂಕ್ ಖಾತೆಗೆ ಪಾವತಿಸಬೇಕು.

ಫಲಾನುಭವಿಯ ಹೆಸರು : KIADB, ಬ್ಯಾಂಕ್ ಹೆಸರು : ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶಾಖೆಯ ಹೆಸರು / ಶಾಖೆ ಕೋಡ್ : ರೇಸ್ ಕೋರ್ಸ್ ರಸ್ತೆ, ಬೆಂಗಳೂರು, ಖಾತೆ ಪ್ರಕಾರ: ಚಾಲ್ತಿ ಖಾತೆ, ಖಾತೆ ಸಂಖ್ಯೆ : 510341000075865, IFSC ಕೋಡ್: UBIN0930911.

ಪಾವತಿಸಬೇಕಾದ ಭೂಮಿಯ ಬೆಲೆಯ ಅಂತಿಮ ಬೆಲೆ ವ್ಯತ್ಯಾಸದ ಮೊತ್ತವನ್ನು ಕೆಳಗೆ ವಿವರಿಸಿದಂತೆ ಪಾವತಿಸಬೇಕು;

1) ಈ ಅಧಿಸೂಚನೆಯ ದಿನಾಂಕದಿಂದ 6 ತಿಂಗಳೊಳಗೆ ಭೂಮಿಯ ಬೆಲೆಯ ವ್ಯತ್ಯಾಸದ ಮೊತ್ತವನ್ನು ಪಾವತಿಸಿದರೆ, ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.

2) ಈ ಅಧಿಸೂಚನೆಯ ದಿನಾಂಕದಿಂದ 6 ತಿಂಗಳೊಳಗೆ ಭೂಮಿಯ ಬೆಲೆಯ ವ್ಯತ್ಯಾಸವನ್ನು ಪಾವತಿಸದಿದ್ದರೆ ಮುಂದಿನ 6 ತಿಂಗಳ ಅವಧಿಯವರೆಗೆ ವರ್ಷಕ್ಕೆ ಶೇ. 5% ಬಡ್ಡಿಯನ್ನು ವಿಧಿಸಲಾಗುತ್ತದೆ ಮತ್ತು ಒಂದು ವರ್ಷದ ನಂತರ ಪಾವತಿಸಿದ್ದಲ್ಲಿ ಪಾವತಿಸುವ ದಿನಾಂಕದ ವರೆಗೆ ವ್ಯತ್ಯಾಸದ ಮೊತ್ತದ ಮೇಲೆ ವರ್ಷಕ್ಕೆ ಶೇ. 10% ಬಡ್ಡಿಯನ್ನು ವಿಧಿಸಲಾಗುತ್ತದೆ.

ಈ ಪತ್ರಿಕಾ ಪ್ರಕಟಣೆಯ ಅಧಿಸೂಚನೆಯನ್ನು KIADBಯ ಬೇಡಿಕೆ ಪತ್ರ (Demand Notice)ಎಂದು ಪರಿಗಣಿಸತಕ್ಕದ್ದು.

ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ
ಕಾರ್ಯನಿರ್ವಾಹಕ ಸದಸ್ಯರು

DIPR/CP/563/Zen/2026-27

PUBLIC NOTICE

This is to notify the general public that I have been engaged by my client to investigate the title relating to all that piece and parcel of agricultural, undeveloped and vacant land measuring 20 Guntas in Sy. No. 7/7, 22 Guntas (out of 28 Guntas) in Sy. No. 7/8, 3 Guntas in 7/11, 30 Guntas in Sy. No. 14/2, 2 Guntas in 14/7, 12 Guntas in 16/7, 13 Guntas in Sy. No. 16/8, and 16.08 Guntas in Sy. No. 16/12, all situated at Gollahalli Village, Attibele Hobli, Anekal Taluk, Bangalore Urban District, more fully set out in the Schedule hereto and hereinafter referred to as the "Schedule Property."

If any person has any right, title, interest, claim or demand in relation to the Schedule Property or any part thereof, or has executed any transactions or documents (whether registered or unregistered) with the Owners or predecessors in title of the Schedule Property, having the effect of creating an encumbrance thereon, are called upon to submit their statements, objections or claims in writing, along with documentary evidence in support thereof, with the undersigned, within **15 (Fifteen) days** from the date of publication of this notice. If no objections are received, we would conclusively presume that no person has any right, title, interest, claim, demand, charge, or encumbrance whatsoever existing on the Schedule Property or any part thereof and we will issue our opinion confirming that the owner has title in respect of the Schedule Property.

SCHEDULE PROPERTY

All that piece and parcel of agricultural, undeveloped and vacant lands situated at Gollahalli Village, Attibele Hobli, Anekal Taluk, Bangalore Urban District, which are more fully described in the schedule herein below;

Sl. No.	Survey No.	Extent		Boundaries				Owners
		Acres	Guntas	East	West	North	South	
1.	7/7	0	20	Land in Sy. No. 7/6	Land in Sy. No. 14/7 & 16/11	Land in Sy. No. 7/2	Land in Sy. No. 7/11 & 7/8	Mrs. S. Savithri, W/o late Mr. S. Satya Murthy, Mr. S. Keshav Murthy, S/o. late Mr. Srinivasan, Mrs. Dharani. K., W/o. Mr. Keshav Murthy, Mr. S. Devaraj, S/o. late Mr. Srinivasan, Mrs. Sumathi, W/o. Mr. S. Devaraj, Mr. S. Dayashankar, S/o. late Mr. Srinivasan, and Mrs. S. Roopa, W/o. Mr. S. Dayashankar.
2.	7/8	0	22 (out of 28 Guntas)	Remaining portion in Sy. No. 7/8	Land in Sy. No. 7/11	Land in Sy. No. 7/7 and 7/6	Land in Sy. No. 7/9	Mr. Ramakrishnaiah, S/o. late Venkatachalam.
3.	7/11	0	3	Land in Sy. No. 7/8 and 7/9	Land in Sy. No. 14/2	Land in Sy. No. 7/7	Land in Sy. No. 7/9	Legal heirs of Balappa, and Indrani, D/o. Late Venkatachalam.
4.	14/2	0	30	Land in Sy. No. 7/11 and 14/7	Land in Sy. No. 14/1	Land in Sy. No. 16/18 and 14/7	Land in Sy. No. 14/4, 14/5 and 14/6	Mr. Ramachandra, S/o. Late Balappa, Mr. Gopal B., S/o Late Balappa, Mr. Lakshminarayana B., S/o. Late Balappa, and Mr. Srinivas, S/o. Late Balappa.
5.	14/7	0	2	Land in Sy. No. 7/7	Land in Sy. No. 14/2	Land in Sy. No. 16/11	Land in Sy. No. 14/2	Mr. Muniraju, S/o. Mr. Anand.
6.	16/7	0	12	Land in Sy. No. 16/8	Land in Sy. No. 16/12	Land in Sy. No. 16/5	Land in Sy. No. 14/1.	Mr. Ramachandra, S/o. Late Balappa, Mr. Gopal B., S/o Late Balappa, Mr. Lakshminarayana B., S/o. Late Balappa, and Mr. Srinivas, S/o. Late Balappa.
7.	16/8	0	13	Land in Sy. No. 16/10 and 16/11	Land in Sy. No. 16/7	Land in Sy. No. 16/5 and 16/9	Land in Sy. No. 14/2	Mr. Ramachandra, S/o. Late Balappa, Mr. Gopal B., S/o Late Balappa.
8.	16/12	0	16.08	Land in Sy. No. 16/7	Land in Sy. No. 16/6 and Road.	Land in Sy. No. 16/19	Land in Sy. No. 14/8.	Mrs. T. Vijaykumari, W/o. A. Narayana Swamy

Date: 08.05.2026, Bangalore

Gerald Manoharan, Partner, JSA Advocates and Solicitors, 17th & 18th Floor, SKAV 909, No. 9/1, Residency Road, Richmond Circle, Bengaluru-560025. Ph. 080-43503600/080-43503610, Email – gerald@jsalaw.com

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಶುಕ್ರವಾರ,8 ಮೇ 2026
ಇಂದಿನ ತಾಪಮಾನ 22° ಕನಿಷ್ಠ 32° ಗರಿಷ್ಠ
X.com /vijaykarnataka facebook.com/vijaykarnataka www.vijaykarnataka.com

ಸೈಬರ್ ಕ್ರೈಂ: ಬೆಂಗಳೂರು ದೇಶದಲ್ಲೇ ನಂ.1 »06

ಬನಶಂಕರಿ 6ನೇ ಹಂತದಲ್ಲಿ 300ಕ್ಕೂ ಹೆಚ್ಚು ನಿವೇಶನದಾರರಿಗೆ ಸಮಸ್ಯೆ | ಅರಣ್ಯ ಇಲಾಖೆ ಮೊರೆಹೋದ ಬಿಡಿಎ

ಬಫರ್ ಜೋನ್: ಮನೆ ನಿರ್ಮಾಣಕ್ಕೆ ಅಡ್ಡಿ

■ ಬಿ.ಎನ್.ಧನಂಜಯ ಬೆಂಗಳೂರು
dhananjaya.gowda@timesofindia.com

ಬನಶಂಕರಿ 6ನೇ ಹಂತದ ಬಡಾವಣೆಯಲ್ಲಿ ಬಿಡಿಎಯಿಂದ ನಿವೇಶನ ಪಡೆದವರಿಗೆ ಮನೆ ನಿರ್ಮಿಸಲು 'ಬಫರ್ ಜೋನ್' ಅಡ್ಡಿಯಾಗಿ ಪರಿಣಮಿಸಿದೆ. ಈ ಸಮಸ್ಯೆಯನ್ನು ಪರಿಹರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ಅರಣ್ಯ ಇಲಾಖೆ ಮೊರೆ ಹೋಗಿದೆ.

■ ತುರಹಳ್ಳಿ ಅರಣ್ಯಕ್ಕೆ ಹೊಂದಿಕೊಂಡ ಪ್ರದೇಶ

ದಶಕಗಳ ಹಿಂದೆ ಬಿಡಿಎಯು ಬನಶಂಕರಿ 6ನೇ ಹಂತದ ಬಡಾವಣೆ ಯನ್ನು (1ರಿಂದ 11ಬ್ಲಾಕ್) ಅಭಿವೃದ್ಧಿಪಡಿಸಿ, ನಿವೇಶನ ಹಂಚಿಕೆ ಮಾಡಿದೆ. ಆದರೆ, ವಿವಿಧ ಸರ್ವೆ ನಂಬರ್‌ನ ನಿವೇಶನಗಳು ತುರಹಳ್ಳಿ ಅರಣ್ಯ ಪ್ರದೇಶದ ಬಫರ್ ಜೋನ್ ವ್ಯಾಪ್ತಿಗೆ ಸೇರಿವೆ ಎಂಬ ಕಾರಣದಿಂದ ಮನೆ ನಿರ್ಮಿಸಲು ಅರಣ್ಯ ಇಲಾಖೆ ಆಕ್ಷೇಪಿಸಿದೆ. ಇದರಿಂದಾಗಿ ಹಲವರಿಗೆ ಮನೆ ನಿರ್ಮಿಸಲು ಸಾಧ್ಯವಾಗುತ್ತಿಲ್ಲ. ದಶಕಗಳಿಂದ ಕಾಡುತ್ತಿರುವ ಈ ತುರಹಳ್ಳಿ ಬಫರ್ ಜೋನ್ ಸಮಸ್ಯೆಯನ್ನು ಬಗೆಹರಿಸಲು ಬಿಡಿಎ ಕಳೆದ ವಾರ ಅರಣ್ಯ ಇಲಾಖೆಗೆ ಪತ್ರ ಬರೆದಿದೆ.

ಬನಶಂಕರಿ 6ನೇ ಹಂತದ ಬ್ಲಾಕ್ 1 ರಿಂದ 11 ರವರೆಗಿನ ಬ್ಲಾಕ್‌ಗಳಲ್ಲಿ 300ಕ್ಕೂ ಅಧಿಕ ನಿವೇಶನಗಳು ಬಫರ್ ಜೋನ್ ವ್ಯಾಪ್ತಿಗೆ ಬರುತ್ತವೆ ಎಂದು ಅರಣ್ಯ ಇಲಾಖೆ ಹೇಳುತ್ತಿದೆ. ಕಳೆದ ಹಲವು ವರ್ಷಗಳಿಂದ ಇಲ್ಲಿ ಕಟ್ಟಡ ನಿರ್ಮಾಣಕ್ಕೆ ಬ್ರೇಕ್ ಬಿದ್ದಿರುವುದರಿಂದ ಮಾಲೀಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾಲ ಮಾಡಿ ನಿವೇಶನ ಪಡೆದವರ ಪಾಡಂತೂ ಹೇಳತೀರದು. ಇತ್ತ ಸಾಲದ ಕಂತನ್ನೂ ಕಟ್ಟಬೇಕು, ಮನೆಯನ್ನೂ ನಿರ್ಮಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಹಲವು ನಿವೇಶನದಾರರು ಬಿಡಿಎ ಸಭೆಗಳಲ್ಲಿ ಅಳಲು ತೋಡಿಕೊಂಡಿರುವ ಹಿನ್ನೆಲೆಯಲ್ಲಿ ಬಿಡಿಎ ಸಮಸ್ಯೆಗೆ ಪರಿಹಾರ ಒದಗಿಸಲು ಕಸರತ್ತು ಆರಂಭಿಸಿದೆ.

1,598 ಎಕರೆಯ ಬಡಾವಣೆ: ಬೆಂಗಳೂರು ದಕ್ಷಿಣ ತಾಲೂಕಿನ ಕೆಂಗೇರಿ ಹೋಬಳಿಯ ತುರಹಳ್ಳಿ, ಹೆಮ್ಮಿಗೆಪುರ, ಲಿಂಗಧೀರನಹಳ್ಳಿ, ಸೋಂಪುರ ಮತ್ತು ಬಿಎಂ ಕಾವಲ್ ಗ್ರಾಮಗಳ ವ್ಯಾಪ್ತಿಗಳಲ್ಲಿನ ವಿವಿಧ ಸರ್ವೆ ನಂಬರ್‌ಗಳಲ್ಲಿ ಸುಮಾರು 1,598 ಎಕರೆ 2 ಗುಂಟೆಯಲ್ಲಿ ನಿವೇಶನ ನಿರ್ಮಿಸಲು ಬಿಡಿಎ ಮೊದಲು 2000ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. 2001ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸುವ ಮೂಲಕ ವಿವಿಧ ಅಳತೆಯ ಸುಮಾರು ಇಪ್ಪತ್ತು ಸಾವಿರ ನಿವೇಶನಗಳನ್ನು ರಚಿಸಿ, ಹಂಚಿಕೆ ಮಾಡಿತ್ತು. ಈ ಪೈಕಿ ತುರಹಳ್ಳಿ ಅರಣ್ಯದ ಬಫರ್ ವಲಯಕ್ಕೆ ಹೊಂದಿಕೊಂಡಿರುವ ನಿವೇಶನಗಳು ಸಮಸ್ಯೆಗೆ ಕಾರಣವಾಗಿವೆ.

''ಇತ್ತೀಚೆಗಷ್ಟೇ ಬಿಡಿಎ, ಅರಣ್ಯ ಇಲಾಖೆ ಜಂಟಿಯಾಗಿ ಡ್ರೋನ್ ಸಮೀಕ್ಷೆ ನಡೆಸಿವೆ. ಈ ಸಮೀಕ್ಷೆಯ ವರದಿಯ ಪ್ರಕಾರ, ಆರಂಭದಲ್ಲಿ ಸುಮಾರು 1,300 ಸೈಟುಗಳು ಬಫರ್‌ಜೋನ್ ವ್ಯಾಪ್ತಿಯಲ್ಲಿದ್ದವು. ನಿರಂತರ ಪ್ರಯತ್ನದ ಬಳಿಕ 329 ನಿವೇಶನಗಳನ್ನು ಬಿಟ್ಟು, ಉಳಿದ ನಿವೇಶನಗಳನ್ನು ಬಫರ್ ಜೋನ್ ಕಳಂಕದಿಂದ ಮುಕ್ತಗೊಳಿಸಲಾಗಿದೆ. ಆದರೆ, ಅರಣ್ಯದ ಗಡಿಗೆ ಹೊಂದಿಕೊಂಡಂತಿರುವ 300ಕ್ಕೂ ಅಧಿಕ ನಿವೇಶನಗಳು ಸಮಸ್ಯೆಗೆ ಕಾರಣವಾಗಿವೆ,'' ಎಂದು ಬಿಡಿಎ ಮೂಲಗಳು ತಿಳಿಸಿವೆ.



ಡ್ರೋನ್ ಸರ್ವೆ ಮುಖಾಂತರ ಅರಣ್ಯ ಇಲಾಖೆಯ 100 ಮೀಟರ್ ಬಫರ್ ವಲಯಕ್ಕೆ ಒಳಪಟ್ಟಿರುವ ನಿವೇಶನಗಳ ವಿವರ ಹೀಗಿದೆ

ಬ್ಲಾಕ್	ಗ್ರಾಮ	ಸರ್ವೆ ನಂ.	ಬಫರ್‌ಜೋನ್‌ಗೆ ಒಳಪಟ್ಟ ಸೈಟ್‌ಗಳ ಸಂಖ್ಯೆ
3	ಹೆಮ್ಮಿಗೆಪುರ	114 (ಹಳೆಯದು 86)	220
5	ಹೆಮ್ಮಿಗೆಪುರ	82	50
7	ಹೆಮ್ಮಿಗೆಪುರ	82	36
10	ಬಿಎಂಕಾವಲ್	171,175	23
8	ಬಿಎಂಕಾವಲ್	170	ಸಾರ್ವಜನಿಕ ರಸ್ತೆ ಉಪಯೋಗಕ್ಕೆ
(ಒಟ್ಟು 329 ನಿವೇಶನಗಳು ಮತ್ತು ರಸ್ತೆ ಇರುವುದೂ ಸೇರಿದಂತೆ ಒಟ್ಟು 19 ಎಕರೆ 18 ಗುಂಟೆ ಭೂಮಿ ಬಫರ್‌ಜೋನ್‌ಗೆ ಒಳಪಟ್ಟಿದೆ)			

ಜಂಟಿ ಸಭೆ ಆಯೋಜಿಸಲು ಪತ್ರ

ತುರಹಳ್ಳಿ ಅರಣ್ಯ ಪ್ರದೇಶದ ಬಫರ್ ಜೋನ್‌ಗೆ ಸೇರಿರುವ ನಿವೇಶನಗಳಲ್ಲಿ ಮನೆ ನಿರ್ಮಿಸಿಕೊಳ್ಳಲು ಅರಣ್ಯ ಇಲಾಖೆ ಅನುಮತಿ ನೀಡಿಲ್ಲ. ತುರಹಳ್ಳಿ ಬಫರ್ ವಲಯದ ಗೊಂದಲಕ್ಕೆ ಸಂಬಂಧಿಸಿದಂತೆ ತೊಂದರೆಗೊಳಗಾಗಿರುವ ನಿವೇಶನದಾರರಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಲು ಜಂಟಿ ಸಭೆ ಆಯೋಜಿಸಲು ಬೆಂಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಪತ್ರ ಬರೆದು ಕೋರಲಾಗಿದೆ ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬನ್ನೇರುಘಟ್ಟ ಉದ್ಯಾನದಲ್ಲಿ 3 ವರ್ಷದ ಜಿರಾಫೆ ಸಾವು

ಬೆಂಗಳೂರು ದಕ್ಷಿಣ: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 3 ವರ್ಷ 10 ತಿಂಗಳ ವಯಸ್ಸಿನ ಶಿವಾನಿ ಎಂಬ ಹೆಣ್ಣು ಜಿರಾಫೆ ಮೃತಪಟ್ಟಿದೆ. ದೊಡ್ಡ ಕರುಳು ಸುತ್ತಿಕೊಂಡು ರಕ್ತ ಸಂಚಾರ ನಿಂತುಹೋಗುವ ಸೀಕಲ್ ಟಾರ್ಷನ್ ಎಂಬ ಗಂಭೀರ ಸಮಸ್ಯೆಯಿಂದ ಸಾವು ಸಂಭವಿಸಿದೆ ಎಂದು ಮರಣೋತ್ತರ ಪರೀಕ್ಷೆ ವರದಿಯಿಂದ ಗೊತ್ತಾಗಿದೆ. ಶಿವಾನಿಯು ಮೂರು ದಿನಗಳಿಂದ ಆಹಾರ ಸೇವನೆ ನಿಲ್ಲಿಸಿತ್ತು. ಮೃಗಾಲಯದ ಪಶುವೈದ್ಯರ ತಂಡ ತೀವ್ರ ನಿಗಾ ಇರಿಸಿ, ಆರೈಕೆ ಮಾಡಿದರೂ ಸಹ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದೆ ಎಂದು ಜೈವಿಕ ಉದ್ಯಾನದ ವೈದ್ಯಾಧಿಕಾರಿ ತಿಳಿಸಿದ್ದಾರೆ. ಸಾವಿನ ಬಗ್ಗೆ ಹೆಚ್ಚಿನ ಅಧ್ಯಯನಕ್ಕಾಗಿ ಜಿರಾಫೆಯ ಒಳಾಂಗಗಳ ಮಾದರಿಗಳನ್ನು ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಮತ್ತು ಪಶುವೈದ್ಯಕೀಯ ಜೈವಿಕ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ವಿಸ್ತೃತ ವರದಿ ಬಂದ ನಂತರವೇ ಅಂತಿಮ ಕಾರಣ ಖಚಿತವಾಗಲಿದೆ ಎಂದು ತಿಳಿಸಿದರು. ಈ ಕುರಿತು ಪ್ರತಿಕ್ರಿಯಿಸಿರುವ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ವಿಶಾಲ್ ಸೂರ್ಯ ಸೇನ್, ''ಪ್ರಾಣಿಗಳ ಆರೋಗ್ಯಕ್ಕೆ ನಾವು ಅತ್ಯುತ್ತಮ ಆದ್ಯತೆ ನೀಡುತ್ತೇವೆ. ಎಲ್ಲಾ ರೀತಿಯ ಮುನ್ನೆಚ್ಚರಿಕೆ ವಹಿಸಿದ್ದರೂ ಉಳಿಸಿಕೊಳ್ಳಲಾಗಲಿಲ್ಲ. ಇದ್ದ ಎರಡು ಜಿರಾಫೆಗಳಲ್ಲಿ ಒಂದನ್ನು ಕಳೆದುಕೊಂಡಂತಾಗಿದೆ,'' ಎಂದು ವಿಷಾದಿಸಿದರು. 2024ರ ಫೆ.27 ರಂದು ಮೈಸೂರಿನ ಚಾಮರಾಜೇಂದ್ರ ಮೃಗಾಲಯದಿಂದ ಶಿವಾನಿಯನ್ನು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಕರೆತರಲಾಗಿತ್ತು.

ಪತಿಗೆ ನೇಣು ಕುಣಿಕೆ ಫೋಟೊ ಕಳಿಸಿ ಆತ್ಮಹತ್ಯೆ

ಬೆಂಗಳೂರು : ಗಂಡನಿಗೆ ನೇಣು ಕುಣಿಕೆ ಫೋಟೋವನ್ನು ವಾಟ್ಸ್ಯಾಪ್‌ನಲ್ಲಿ ಕಳಿಸಿ ನವವಿವಾಹಿತೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಯಶವಂತಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಎಸ್.ಎಲ್.ನಗರದ ನಿವಾಸಿ ಶಾರದಾ (40) ಆತ್ಮಹತ್ಯೆಗೆ ಶರಣಾದವರು. ವರದಕ್ಷಿಣೆ ಕಿರುಕುಳ ಆರೋಪದ ಮೇರೆಗೆ ಅವರ ಪತಿ ಮಹೇಶ್‌ನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕಿನ ಶಾರದಾ ಹಾಗೂ ಮಹೇಶ್ ಮದುವೆಯಾಗಿ ಒಂಬತ್ತು ತಿಂಗಳಾಗಿತ್ತು. ಎಸ್‌ಎಲ್ ನಗರದಲ್ಲಿ ನೆಲೆಸಿದ್ದ ದಂಪತಿ ನಡುವೆ ಇತ್ತೀಚೆಗೆ ಕೌಟುಂಬಿಕ ವಿಚಾರಗಳಿಗೆ ಜಗಳ ನಡೆಯುತ್ತಿತ್ತು. »06

ಅಪಘಾತವೆಸಗಿ ಒಂಟಿ ಮಹಿಳೆ ಕೊಲೆ

ಹಣ, ಆಭರಣ ದೋಚಲು ಸಿನಿಮೀಯ ಸಂಚು ಹೂಡಿದ್ದ ಗ್ಯಾಂಗ್ ಸೆರೆ

ಕಸ್ಟಡಿಯಲ್ಲಿದ್ದ ಆರೋಪಿ ಅನಾರೋಗ್ಯದಿಂದ ಸಾವು

ಬೆಂಗಳೂರು: ಹಣ, ಆಭರಣ ದೋಚುವ ಸಲುವಾಗಿ ಒಂಟಿ ಮಹಿಳೆಯೊಬ್ಬರನ್ನು ಅಪಘಾತದ ಹೆಸರಲ್ಲಿ ಕೊಂದಿದ್ದ ನಾಲ್ವರು ಆರೋಪಿಗಳನ್ನು ಮಹಾಲಕ್ಷ್ಮೀ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಜಯಲಕ್ಷ್ಮೀ

ಕುಮಾರಸ್ವಾಮಿ ಲೇಔಟ್ ಠಾಣೆ ರೌಡಿಶೀಟರ್ ಪ್ರದೀಪ್, ಜಾನ್, ರಾಕೇಶ್, ಚೇತನ್ ಬಂಧಿತರು. ಮತ್ತೊಬ್ಬ ಆರೋಪಿ ಜಿ. ಮಂಜುನಾಥ್, ಬಂಧನದ ವೇಳೆ ಅನಾರೋಗ್ಯದಿಂದ ಅಸ್ವಸ್ಥಗೊಂಡು ಮೃತಪಟ್ಟಿದ್ದಾನೆ.

ಐವರು ಆರೋಪಿಗಳು ಏ.20ರಂದು ಕುರುಬರಹಳ್ಳಿಯ ನಿವಾಸಿ ವಿಜಯಲಕ್ಷ್ಮೀ (65) ಅವರಿಗೆ ಉದ್ದೇಶಪೂರ್ವಕವಾಗಿ ಅಪಘಾತ ಎಸಗಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ವಿಜಯಲಕ್ಷ್ಮೀ ಏ.27 ರಂದು ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದರು. ಈ ಮೂಲಕ ಕೊಲೆಯನ್ನು ಅಪಘಾತ ಎಂಬಂತೆ ಬಿಂಬಿಸಿದ್ದರು. ಸಂಬಂಧಿಕರೇ ಇಲ್ಲದೆ ಒಬ್ಬಂಟಿಯಾಗಿ ವಾಸಿಸುತ್ತಿದ್ದ ವಿಜಯಲಕ್ಷ್ಮೀ ಅವರನ್ನು ಕೊಲೆಗೈದು, ಮನೆಯಲ್ಲಿಟ್ಟಿದ್ದ ಬಂಗಾರ ಹಾಗೂ ನಗದು ದೋಚಲು ಕೆಲ ತಿಂಗಳಿಂದ ಹೆಣೆದಿದ್ದ ಸಂಚಿನ ಬಗ್ಗೆ ವಿಚಾರಣೆ ವೇಳೆ ಆರೋಪಿಗಳು ಬಾಯ್ಬಿಟ್ಟಿದ್ದಾರೆ. »06

'ಸ್ಥಳ ಪರಿಶೀಲನೆ ನಂತರ ಉತ್ತರ ಪಾಲಿಕೆ ಕಟ್ಟಡದ ಜಾಗ ಅಂತಿಮ'

ಬೆಂಗಳೂರು: ಬೆಂಗಳೂರು ಉತ್ತರ ಪಾಲಿಕೆಯ ನೂತನ ಕಟ್ಟಡ ನಿರ್ಮಾಣಕ್ಕಾಗಿ ಮೂರ್ನಾಲ್ಕು ಕಡೆ ಜಾಗ ಗುರುತಿಸಲಾಗಿದೆ. ಸ್ಥಳ ಪರಿಶೀಲನೆ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸಚಿವರು ಹಾಗೂ ಅಧಿಕಾರಿಗಳ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಸಚಿವರು, ಶಾಸಕರು ತಮ್ಮದೇ ಆದ ಅಭಿಪ್ರಾಯ ನೀಡಿದ್ದಾರೆ. ಸ್ಥಳ ಪರಿಶೀಲನೆ ಬಳಿಕ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು,'' ಎಂದರು. ಜಿಕೆವಿಕೆಯಲ್ಲಿ ಕಟ್ಟಡ ನಿರ್ಮಿಸಲಾಗುವುದೇ ಎಂಬ ಪ್ರಶ್ನೆಗೆ ಉತ್ತರಿಸಿದ ಡಿಸಿಎಂ, ''ಇಲ್ಲ, ಸದ್ಯಕ್ಕೆ ಅಂತಹ ಆಲೋಚನೆ ಇಲ್ಲ. ಈ ಬಗ್ಗೆ ಪರಿಶೀಲನೆ ಮಾಡುತ್ತೇವೆ,'' ಎಂದರು.

ಪರಪ್ಪನ ಅಗ್ರಹಾರ ಬಂದೀಖಾನೆ ಮಕ್ಕಳ ಬಾಲ್ಯ ಸುಂದರಗೊಳಿಸುವ ನಿಟ್ಟಿನಲ್ಲಿ ಕ್ರಮ

ಜೈಲಿನಲ್ಲಿ ಚಿಣ್ಣರಿಗೆ ವಿಶೇಷ ಕಲಿಕೆ ಕೇಂದ್ರ

■ ಮಂಜುನಾಥ್ ಲಗುಮೇನಹಳ್ಳಿ ಬೆಂಗಳೂರು
manjunatha.s@timesofindia.com

ಪರಪ್ಪನ ಅಗ್ರಹಾರ ಜೈಲಿನಲ್ಲಿ ಮಹಿಳಾ ಕೈದಿಗಳ ಜತೆಗಿರುವ ಪುಟ್ಟಮಕ್ಕಳ ಪೋಷಣೆ ಸಲುವಾಗಿ ವಿಶೇಷ ಆರೈಕೆ ಕೇಂದ್ರ ಸ್ಥಾಪಿಸಲಾಗಿದೆ. ಈ ಮೂಲಕ ತಮ್ಮದಲ್ಲದ ತಪ್ಪಿಗೆ ಜೈಲಿನಲ್ಲಿ ಬಾಲ್ಯ ಕಳೆಯುತ್ತಿರುವ ಚಿಣ್ಣರ ಬಗ್ಗೆ ಕಾಳಜಿ ವಹಿಸಿ, ಅತ್ಯುತ್ತಮ ಪರಿಸರ ನಿರ್ಮಾಣ ಸಲುವಾಗಿ ಆರೈಕೆ ಕೇಂದ್ರ ಸ್ಥಾಪಿಸಿದ ಹೆಗ್ಗಳಿಕೆಗೆ ರಾಜ್ಯ ಸರಕಾರ ಪಾತ್ರವಾಗಿದೆ.

ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗೂ ಕಾರಾಗೃಹ ಇಲಾಖೆ ಸಹಭಾಗಿತ್ವದಲ್ಲಿ ರೂಪುಗೊಂಡಿರುವ ಈ ಮಕ್ಕಳ ವಿಶೇಷ ಆರೈಕೆ ಕೇಂದ್ರದಲ್ಲಿ ಈಗಾಗಲೇ ಮೂವರು ವಿದೇಶಿ ಮಕ್ಕಳು ಸೇರಿ 9 ಮಂದಿ ಚಿಣ್ಣರ ಕಲಿಕೆ ಆರಂಭವಾಗಿದೆ.

ಬಿಳಿ ಗೋಡೆ ಹಾಗೂ ಕಬ್ಬಿಣದ ಸರಳು ಕಂಡಿದ್ದ ಪುಟಾಣಿಗಳ ಕಂಗಳು ಈಗ ಬಣ್ಣ ಬಣ್ಣದ ಚಿತ್ತಾರ ನೋಡುತ್ತಿವೆ. ಅ, ಆ, ಇ, ಈ ಅಕ್ಷರಾಭ್ಯಾಸ ನಡೆದಿದೆ. ಎ, ಬಿ, ಸಿ, ಡಿ ಕಲಿಕೆಯೂ ಸರಾಗವಾಗಿ ನಡೆದಿದೆ. ಮಕ್ಕಳಿಗೆ ಪ್ರತಿನಿತ್ಯ ಶಿಕ್ಷಕರಿಂದ ಪಾಠ ಆರಂಭಿಸಲಾಗಿದೆ. ಯೂನಿಫಾರ್ಮ್ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇಬ್ಬರು ಶಿಕ್ಷಕರಿಂದ ಮನೋವಿಕಸನ, ಅಕ್ಷರಾಭ್ಯಾಸ ಸೇರಿದಂತೆ ವಿವಿಧ ತರಬೇತಿ ಸಿಗಲಿದೆ.

ಬಾದಲ್ ಚಿತ್ತಾರ: ಚಿತ್ರಕಲಾವಿದ ಬಾದಲ್ ನಂಜುಂಡಸ್ವಾಮಿ ಕುಂಚದಿಂದ ಮಹಿಳಾ ಬ್ಯಾರಕ್‌ನ ಎಲ್ಲಾ ಕೊಠಡಿಗಳು ಹೊಸ ರೂಪ ಪಡೆದಿವೆ. ಪರಿಸರ ಜಾಗೃತಿ, ಪ್ರಾಣಿಗಳ ಚಿತ್ರ, ತಾಯಿ ಹಾಗೂ ಮಗುವಿನ ಬಾಂಧವ್ಯ ಸೇರಿದಂತೆ ಹಲವು ಚಿತ್ರಗಳು ಮೂಡಿವೆ. »06

ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ.

ಪರಪ್ಪನ ಅಗ್ರಹಾರ ಜೈಲಿನಲ್ಲಿ ಆರಂಭಿಸಲಾಗಿರುವ ಮಕ್ಕಳ ವಿಶೇಷ ಆರೈಕೆ ಕೇಂದ್ರದಿಂದ ಮಹಿಳಾ ಬ್ಯಾರಕ್‌ನಲ್ಲಿ ಸಕಾರಾತ್ಮಕ ಬದಲಾವಣೆ ಬರುತ್ತಿದೆ. ಮಕ್ಕಳಿಗೆ ಮೊಟ್ಟೆ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಪೌಷ್ಟಿಕ ಆಹಾರ ನೀಡಲು ಚಿಂತನೆ ನಡೆಸಲಾಗಿದೆ. ಜತೆಗೆ, ಪ್ರತಿ ತಿಂಗಳು ಮಕ್ಕಳ ತಾಯಂದಿರ ಜತೆ ಸಮಾಲೋಚನೆ, ಕೇಂದ್ರದ ಅಚ್ಚುಕಟ್ಟು ನಿರ್ವಹಣೆಗೆ ಆದ್ಯತೆ ನೀಡಲಾಗುವುದು.

- ಎಚ್.ಕೆ. ಆಶಾ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ

ನಿಯಮಬಾಹಿರ ಪೋಡಿ ಅಳತೆ, ಭೂಮಾಪಕನ ವಿರುದ್ಧ ಪ್ರಕರಣ

ಬೆಂಗಳೂರು: ಯಲಹಂಕ ತಾಲೂಕಿನ ಕೋತಿಹೊಸಹಳ್ಳಿ ಗ್ರಾಮದ ಸರ್ವೆ ನಂಬರ್ 13/1ರಲ್ಲಿನ ಜಮೀನನ್ನು ಅಕ್ರಮವಾಗಿ ಪೋಡಿ ಅಳತೆ ಮಾಡಿಕೊಟ್ಟ ಪ್ರಕರಣ ಸಂಬಂಧ ಪರವಾನಗಿ ಭೂಮಾಪಕ ಸೇರಿದಂತೆ ಇಬ್ಬರ ವಿರುದ್ಧ ಕೊಡಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಪಾಲಿಕೆ ಕಟ್ಟಡವನ್ನೂ ಪರಿಗಣಿಸದೆ ನಕ್ಷೆ ತಯಾರಿ

ಪರವಾನಗಿ ಭೂಮಾಪಕ ಟಿ.ಕೆ. ಎಲ್.ಪ್ರಕಾಶ್ ಅವರು ಕೋತಿಹೊಸಹಳ್ಳಿ ಗ್ರಾಮದಲ್ಲಿನ 1 ಎಕರೆ 19 ಗುಂಟೆ ಜಮೀನನ್ನು ಬಲರಾಮ್ ಎಂಬುವರಿಗೆ ಅಕ್ರಮವಾಗಿ ಪೋಡಿ ಅಳತೆ ಮಾಡಿಕೊಟ್ಟಿದ್ದರು. ಹೀಗಾಗಿ, ಪ್ರಕಾಶ್ ಮತ್ತು ಅರ್ಜಿದಾರ ಬಲರಾಮ್ ವಿರುದ್ಧ ದೂರು ದಾಖಲಿಸಲಾಗಿದೆ ಎಂದು ಯಲಹಂಕ ತಾಲೂಕಿನ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಬಡಾವಣೆ ನಕ್ಷೆ ಅನುಮೋದಿಸಿದ್ದ ಸಂದರ್ಭದಲ್ಲಿ ಉದ್ಯಾನಕ್ಕೆ (ಸಿ.ಎ. ನಿವೇಶನ) 33 ಗುಂಟೆ ಜಮೀನು ಕಾಯ್ದಿರಿಸಿರುವುದನ್ನು ಹಾಗೂ ಸ್ಥಳದಲ್ಲಿ ಬಿಬಿಎಂಪಿ ಕಟ್ಟಡ ಮತ್ತು ಆಟದ ಮೈದಾನವಿದ್ದರೂ ಪರಿಗಣಿಸದೆ ಭೂಮಾಪಕರು 1 ಎಕರೆ 19 ಗುಂಟೆ ಜಮೀನಿನ ನಕ್ಷೆ ತಯಾರಿಸಿ ಅಕ್ರಮ ಎಸಗಿದ್ದಾರೆ ಎಂದು ಸಹಾಯಕ ನಿರ್ದೇಶಕರು ಹೇಳಿದ್ದಾರೆ.

ಬಿಡಿಎ, ಸಿ.ಎ. ನಿವೇಶನಕ್ಕೆ ಕಾಯ್ದಿರಿಸಿದ್ದ ಪ್ರದೇಶವನ್ನು ಸಹಕಾರ ನಗರ ಕ್ಲಬ್‌ಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದೆ. ಆ ಜಮೀನನ್ನು ಸೇರಿಸಿ ಅಕ್ರಮವಾಗಿ ಪೋಡಿ ಮಾಡಿರುವ ಸಂಬಂಧ ಕಾನೂನು ಕ್ರಮ ಜರುಗಿಸುವಂತೆ ತಕರಾರು ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಆಯುಕ್ತರು ಇತ್ತೀಚೆಗೆ ಸ್ಥಳ ಪರಿಶೀಲನೆ ನಡೆಸಿದ್ದರು ಎಂದು ಮಾಹಿತಿ ನೀಡಿದ್ದಾರೆ.

2024ರಲ್ಲಿ 17,561 ಪ್ರಕರಣ ವರದಿ | ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ ಕೇಸ್ ಸಂಖ್ಯೆ

ಸೈಬರ್ ಕ್ರೈಂ: ಬೆಂಗಳೂರು ದೇಶದಲ್ಲೇ ನಂ.1

■ **ವಿಕ ಸುದ್ದಿಲೋಕ** ಬೆಂಗಳೂರು

ಸೈಬರ್ ಅಪರಾಧ ಪ್ರಕರಣಗಳಲ್ಲಿ ರಾಜಧಾನಿ ಬೆಂಗಳೂರು ನಗರವು ದೇಶದಲ್ಲೇ ಮೊದಲ ಸ್ಥಾನ ಪಡೆದಿದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಹೇಳಿದೆ.

ದೇಶದ ವಿವಿಧ ರಾಜ್ಯಗಳಲ್ಲಿ 2024ರಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳ ಸಂಬಂಧ ಎನ್‌ಸಿಆರ್‌ಬಿ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಮಾಹಿತಿ ಬಹಿರಂಗವಾಗಿದೆ.

2024ರಲ್ಲಿ ದೇಶದಲ್ಲಿ ಒಟ್ಟಾರೆ 34,958 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಬೆಂಗಳೂರು ನಗರ ಒಂದರಲ್ಲೇ 17,561 ಪ್ರಕರಣಗಳು ವರದಿಯಾಗಿವೆ. 4,939 ಪ್ರಕರಣಗಳೊಂದಿಗೆ ಮುಂಬಯಿ ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಹೈದರಾಬಾದ್ (4,009), ಚೆನ್ನೈ (1,882), ಪುಣೆ (1,504) ಮತ್ತು ಲಖನೌ (1,292) ನಗರಗಳಿವೆ.

ಜಾಗೃತಿ ಫಲವಾಗಿ ದೂರಿನ ಸಂಖ್ಯೆ ಹೆಚ್ಚಳ

''ಬೆಂಗಳೂರು ಸೇರಿದಂತೆ ರಾಜ್ಯದೆಲ್ಲೆಡೆ ಪೊಲೀಸರ ಪ್ರಯತ್ನದ ಫಲವಾಗಿ ಸೈಬರ್ ಅಪರಾಧಗಳ ಬಗ್ಗೆ ಜನರಲ್ಲಿ ಜಾಗೃತಿ ಹೆಚ್ಚುತ್ತಿದೆ. ಹೀಗಾಗಿ, ಪ್ರಕರಣಗಳ ದಾಖಲಾತಿ ಹೆಚ್ಚುತ್ತಿದೆ,'' ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ. ''ಬೆಂಗಳೂರು ನಗರದಲ್ಲಿ 11 ವಿಶೇಷ ಸೈಬರ್ ಪೊಲೀಸ್ ಠಾಣೆಗಳಿರುವುದು ಪ್ರಕರಣಗಳ ದಾಖಲಾತಿ ಹೆಚ್ಚಳಕ್ಕೆ ಪ್ರಮುಖ ಕಾರಣ. ಜತೆಗೆ, ಆನ್‌ಲೈನ್ ಮೂಲಕವೂ ದೂರು ನೀಡುವ ವ್ಯವಸ್ಥೆಯಿದೆ. ಹೀಗಾಗಿ, ಜನರು ಯಾವುದೇ ಸಮಸ್ಯೆಯಿಲ್ಲದೆ ಸುಲಭವಾಗಿ ದೂರು ದಾಖಲಿಸುತ್ತಿದ್ದಾರೆ,'' ಎಂದು ಅಧಿಕಾರಿಗಳು ಹೇಳಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ 2024ರಲ್ಲಿ ಒಟ್ಟಾರೆ 21,993 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. ಅದೇ ರೀತಿ 2023ರಲ್ಲಿ 21,889 ಸೈಬರ್ ಪ್ರಕರಣಗಳು ದಾಖಲಾಗಿದ್ದವು. ಈ ಅಂಕಿ-ಸಂಖ್ಯೆಗಳನ್ನು ಅವಲೋಕಿಸಿದರೆ ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಸೈಬರ್ ಅಪರಾಧಗಳು ಏರಿಕೆಯಾಗುತ್ತಿರುವುದು ದೃಢಪಟ್ಟಿದೆ.

2023ರಲ್ಲಿ ಬೆಂಗಳೂರಿನಲ್ಲಿ 17,631 ಸೈಬರ್ ಪ್ರಕರಣಗಳು ದಾಖಲಾಗಿದ್ದವು. ಅದೇ ರೀತಿ 2024ರಲ್ಲಿ 17,561 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 3,632 ಪ್ರಕರಣಗಳು ಇತ್ಯರ್ಥವಾಗಿವೆ. ಇನ್ನೂ 13,929 ಪ್ರಕರಣಗಳು ಬಾಕಿ ಉಳಿದಿವೆ. ಕರ್ನಾಟಕದಲ್ಲಿ 2024ರಲ್ಲಿ 5,096 ಸೈಬರ್ ಅಪರಾಧಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ. ಇಡೀ ರಾಜ್ಯದ ಮುಕ್ಕಾಲು ಪ್ರಮಾಣದಷ್ಟು ಸೈಬರ್ ಪ್ರಕರಣಗಳು ಬೆಂಗಳೂರು ನಗರ ಒಂದರಲ್ಲೇ ದಾಖಲಾಗುತ್ತಿವೆ ಎಂದು ಎನ್‌ಸಿಆರ್‌ಬಿ ವರದಿ ಹೇಳಿದೆ.

ಬಿಡಿಎ ನಿವೇಶನ ಕಬಳಿಕೆ: ಎಫ್‌ಐಆರ್ ದಾಖಲು

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ನಿವೇಶನ ಪಡೆದಿದ್ದ ಎಚ್.ನಾಗರಾಜು ಹಾಗೂ ಇತರರ ವಿರುದ್ಧ ಶೇಷಾದ್ರಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ದೊಡ್ಡಕಲ್ಲಸಂದ್ರ ಮತ್ತು ಲಿಂಗಧೀರನಹಳ್ಳಿ ಬಡಾವಣೆಗಳಲ್ಲಿ ಪ್ರಾಧಿಕಾರದ ಕೆಳ ಹಂತದ ನೌಕರರಿಗಾಗಿ ನಿವೇಶನಗಳನ್ನು ಮೀಸಲಿಡಲಾಗಿತ್ತು. ಲಿಂಗದೀರನಹಳ್ಳಿ ನಿವಾಸಿ ಎಚ್.ನಾಗರಾಜ್ ತಾನು ಕೂಡ ಬಿಡಿಎ ನೌಕರ ಎಂದು ಸುಳ್ಳು ದಾಖಲೆ ಸೃಷ್ಟಿಸಿ ನಿವೇಶನ ಪಡೆದಿದ್ದರು. ಈ ಸಂಗತಿಯು ಬಿಡಿಎ ಜಾಗೃತ ದಳ ನಡೆಸಿದ ಆಂತರಿಕ ತನಿಖೆಯಲ್ಲಿ ದೃಢಪಟ್ಟಿತ್ತು. ಈ ನಿಟ್ಟಿನಲ್ಲಿ ಜಾಗೃತ ದಳದ ಡಿವೈಎಸ್ಪಿ ಬಿ.ಹನುಮಂತರಾಯ ನೀಡಿದ ದೂರಿನ ಅನ್ವಯ ಆರೋಪಿ ನಾಗರಾಜ್ ಸೇರಿ ಇತರರ ವಿರುದ್ಧ ಕೇಸ್ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನಾಗರಾಜ್ ವಂಚನೆ ಎಸಗಲು ಪ್ರಾಧಿಕಾರದ ಕೆಲ ಅಧಿಕಾರಿಗಳು ಮತ್ತು ಸಿಬ್ಬಂದಿ ಸಹಕಾರ ನೀಡಿರುವುದು ಗೊತ್ತಾಗಿದ್ದು, ಅವರ ವಿರುದ್ಧವೂ ಕ್ರಮ ಜರುಗಿಸಬೇಕು ಎಂದು ಡಿವೈಎಸ್ಪಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಹುಲಿಯೂರಮ್ಮದೇವಿ ಜಾತ್ರಾ ಮಹೋತ್ಸವ

ಬೆಂಗಳೂರು: ದಾಸನಪುರ ಹೋಬಳಿಯ ಸೀಗೇಹಳ್ಳಿ ಗೇಟ್ ಅರ್ಕಾವತಿನಗರದ ಹುಲಿಯೂರಮ್ಮದೇವಿ ದೇವಸ್ಥಾನದ

ಎರಡನೇ ವರ್ಷದ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಏ.28ರ ಮಂಗಳವಾರ ಕಂಬದರಾಯನ ಪ್ರತಿಷ್ಠಾಪನೆಯೊಂದಿಗೆ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು. ಮೇ 5ರಂದು ಆಂಜನೇಯಸ್ವಾಮಿಗೆ ಬೆಲ್ಲದ ಆರತಿ ನಡೆಯಿತು. ಮೇ 6ರಂದು ಸಂಜೆ ರಾಜಬೀದಿಗಳಲ್ಲಿ ಅಮ್ಮನವರು, ಆಂಜನೇಯಸ್ವಾಮಿ ಹಾಗೂ ಮುನಿಯಪ್ಪ ದೇವರ ಮೆರವಣಿಗೆ ನಡೆಯಿತು.

ಮೇ 7ರಂದು ಮಧ್ಯಾಹ್ನ ಕಂಬದ ರಾಯನ ವಿಸರ್ಜನಾ ಕಾರ್ಯಕ್ರಮ ನಡೆಯಿತು. ರಾತ್ರಿ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಪೌರಾಣಿಕ ನಾಟಕ ನಡೆಯಿತು ಎಂದು ಪ್ರಧಾನ ಅರ್ಚಕ ವಿ.ಆರ್.ಗಂಗಯ್ಯ, ಅರ್ಚಕ ಶಿವಪ್ಪ, ವ್ಯವಸ್ಥಾಪಕ ಕೃಷ್ಣಪ್ಪ (ಕಂಬಿ) ತಿಳಿಸಿದ್ದಾರೆ.

ಜೈಲು ಚಿಣ್ಣರಿಗೆ ವಿಶೇಷ ಆರೈಕೆ ಕೇಂದ್ರ

» ನಮ್ಮ ಮೊದಲ ಪುಟದಿಂದ

ಮಕ್ಕಳ ಕಲಿಕೆ ಹಾಗೂ ಚಟುವಟಿಕೆಯಿಂದ ಇಡೀ ಮಹಿಳಾ ಬ್ಯಾರಕ್ ಚಿತ್ರಣವೇ ಬದಲಾಗಿದೆ. ಮಹಿಳಾ ಕೈದಿಗಳಿಗೂ ಮನಃಪರಿವರ್ತನೆಯ ತರಬೇತಿ ನೀಡಲಾಗುತ್ತಿದೆ. ''ಸುಂದರ ಬಾಲ್ಯವನ್ನು ಹೊರಗಿನ ಪ್ರಪಂಚದಲ್ಲಿ ಕಳೆಯಬೇಕಾದ ಮಕ್ಕಳು ಜೈಲಿನಲ್ಲಿ ಕಳೆಯಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಮಕ್ಕಳಲ್ಲಿ ಸಕಾರಾತ್ಮಕ ಭಾವನೆ ಮೂಡಿಸುವ ಜತೆಗೆ ಅವರ ಬಾಲ್ಯಾವಸ್ಥೆ ಸುಂದರಗೊಳಿಸುವ ಸ್ಪಷ್ಟ ಗುರಿ ಹೊಂದಲಾಗಿದೆ. ಇದಕ್ಕೆ ಪೂರಕವಾಗಿ ಇಡೀ ಮಹಿಳಾ ಬ್ಯಾರಕ್‌ನ ಗೋಡೆಗಳನ್ನು ಬಣ್ಣಗಳಿಂದ ಚಿತ್ತಾರಗೊಳಿಸ ಲಾಗಿದೆ,'' ಎಂದು ಹಿರಿಯ ಜೈಲು ಅಧಿಕಾರಿಯೊಬ್ಬರು ವಿವರಿಸಿದರು. ಕಾರಾಗೃಹ ಇಲಾಖೆ ಡಿಜಿಪಿ ಅಲೋಕ್‌ಕುಮಾರ್, ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕಿ ಡಾ.ಸಿ.ವಿ. ಸ್ನೇಹಾ ಅವರ ಮಾರ್ಗದರ್ಶನದಲ್ಲಿ ವಿಶೇಷ ಆರೈಕೆ ಕೇಂದ್ರದ ನಿರ್ವಹಣೆ ಜವಾಬ್ದಾರಿಯನ್ನು ಬೆಂಗಳೂರು ನಗರ ಪಶ್ಚಿಮ ವಿಭಾಗದ (ಆನೇಕಲ್) ಮಕ್ಕಳ ರಕ್ಷಣಾ ಘಟಕ ನಿಭಾಯಿಸುತ್ತಿದೆ.

ಮುಂದೇನು?: ''ಜೈಲಿನಲ್ಲಿರುವ ಮಕ್ಕಳಿಗೆ ಆರು ವರ್ಷ ತುಂಬುವತನಕ ಕೇಂದ್ರದಲ್ಲಿ ಆರೈಕೆ ಮಾಡಲಾಗುತ್ತದೆ. ಬಳಿಕ ಮಕ್ಕಳ ಸಂಬಂಧಿಕರನ್ನು ಸಂಪರ್ಕಿಸಿ ಆರೈಕೆ ಜವಾಬ್ದಾರಿ ಬಗ್ಗೆ ಅಭಿಪ್ರಾಯ ಕೇಳುತ್ತೇವೆ. ಒಂದು ವೇಳೆ ಅವರು ಒಪ್ಪದಿದ್ದರೆ ಕೇಂದ್ರ ಸರಕಾರದ ನೋಂದಾಯಿತ ಎನ್‌ಜಿಒಗಳ ಮುಖಾಂತರ ಮಕ್ಕಳ ಶಿಕ್ಷಣ ಹಾಗೂ ಪೋಷಣೆ ಜವಾಬ್ದಾರಿ ಒಪ್ಪಿಸಲಾಗುತ್ತದೆ,'' ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಚ್.ಕೆ. ಆಶಾ ಹೇಳಿದರು.

ನಾಳೆ ತೋಟಗಾರಿಕೆ ಸಂತೆ

ಬೆಂಗಳೂರು: ವಿದ್ಯಾರಣ್ಯಪುರದ ಯಲಹಂಕ ರಸ್ತೆಯ ದೊಡ್ಡಬೆಟ್ಟಹಳ್ಳಿ ಬಸ್ ನಿಲ್ದಾಣ ಬಳಿ ಮೇ 9 ರಂದು ತೋಟಗಾರಿಕೆ ಸಂತೆ ಆಯೋಜಿಸಲಾಗಿದೆ. ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ತೋಟಗಾರಿಕೆ ವಿಜ್ಞಾನಗಳ ವಿವಿ ಆವರಣದಲ್ಲಿ ಪ್ರತಿ ತಿಂಗಳ ಎರಡನೇ ಶನಿವಾರ 'ಯುಎಚ್‌ಎಸ್ ಸಂತೆ' ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದ ಎರಡನೇ ಸಂತೆಯು ಮೇ 9 ರಂದು ಬೆಳಗ್ಗೆ 7 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಡೆಯಲಿದೆ. ಸುತ್ತಮುತ್ತಲ ಜಿಲ್ಲೆಗಳ ರೈತರು ಬೆಳೆದ ನಾನಾ ತರಕಾರಿ, ಹಣ್ಣು, ಹೂವು, ಸಾಂಬಾರು ಪದಾರ್ಥಗಳು ಹಾಗೂ ಇತರೆ ಮೌಲ್ಯವರ್ಧಿತ ಉತ್ಪನ್ನಗಳನ್ನು ರೈತರಿಂದ ನೇರ ಮಾರಾಟ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ.

ಶಾಸಕ ಎಸ್‌ಟಿಎಸ್‌ಗೆ ಮಾತೃ ವಿಯೋಗ

ಬೆಂಗಳೂರು: ಯಶವಂತಪುರ ಕ್ಷೇತ್ರದ ಶಾಸಕ ಎಸ್.ಟಿ. ಸೋಮಶೇಖರ್ ಅವರ ತಾಯಿ ಟಿ. ಸೀತಮ್ಮ (98) ಗುರುವಾರ

ನಿಧನರಾದರು. ವಯೋ ಸಹಜ ಕಾಯಿಲೆಯಿಂದ ಅವರು ಗುರುವಾರ ಸಂಜೆ ನಿಧನರಾದರು. ಮೃತರಿಗೆ ಶಾಸಕ ಎಸ್.ಟಿ. ಸೋಮಶೇಖರ್ ಸೇರಿದಂತೆ ಓರ್ವ ಪುತ್ರ ಹಾಗೂ ನಾಲ್ವರು ಹೆಣ್ಣು ಮಕ್ಕಳಿದ್ದಾರೆ.

ಶಾಸಕ ಎಸ್. ಟಿ. ಸೋಮಶೇಖರ್ ಅವರ ನಿವಾಸ (ಬಿಟಿಎಂ ಲೇಔಟ್, ಎರಡನೇ ಹಂತ ಗೋಪಾಲನ್ ಮಾಲ್ ಎದುರು)ದಲ್ಲಿ ಪಾರ್ಥಿವ ಶರೀರ ದರ್ಶನಕ್ಕೆ ಮೇ 8ರಂದು ಬೆಳಗ್ಗೆ 11 ಗಂಟೆವರೆಗೆ ಅವಕಾಶ ಕಲ್ಪಿಸಲಾಗಿದೆ. ಸಂಜೆ 4 ಗಂಟೆಗೆ ಚನ್ನಪಟ್ಟಣ ತಾಲೂಕಿನ ಶೆಟ್ಟಿಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಶ್ವ ಬ್ಯಾಂಕ್ ಅನುದಾನದ ಕಾಮಗಾರಿಗಳಿಗೆ ವೇಗ

■ **ವಿಕ ಸುದ್ದಿಲೋಕ** ಬೆಂಗಳೂರು

ಜಿಬಿಎ ವ್ಯಾಪ್ತಿಯಲ್ಲಿ ವಿಶ್ವ ಬ್ಯಾಂಕ್ ಅನುದಾನದಡಿ ಕೈಗೆತ್ತಿಕೊಂಡಿರುವ ಮಳೆ ನೀರುಗಾಲುವೆ ಕಾಮಗಾರಿಗಳಿಗೆ ವೇಗ ನೀಡಲಾಗಿದೆ ಎಂದು ಯೋಜನಾ ಅನುಷ್ಠಾನ ಘಟಕದ ಮುಖ್ಯ ಎಂಜಿನಿಯರ್ ಎಸ್.ವಿ. ರಾಜೇಶ್ ತಿಳಿಸಿದರು.

ಪ್ರಗತಿಯಲ್ಲಿರುವ ಕೆಲ ಕಾಮಗಾರಿಗಳ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ''ವಿಶ್ವ ಬ್ಯಾಂಕ್‌ನ 2000 ಕೋಟಿ ರೂ.ಅನುದಾನದಲ್ಲಿ 173 ಕಿ.ಮೀ. ಉದ್ದದ ಕಚ್ಚಾ ಮಳೆ ನೀರುಗಾಲುವೆಯನ್ನು ಆರ್‌ಸಿಸಿ ತಡೆಗೋಡೆ ಸಹಿತ ಪಕ್ಕಾ ಮಳೆನೀರು ಕಾಲುವೆ ಹಾಗೂ 80 ಕಿ.ಮೀ. ಉದ್ದದ ಮಳೆ ನೀರುಗಾಲುವೆಯ ನವೀಕರಣ ಕಾರ್ಯ ಪ್ರಗತಿಯಲ್ಲಿದೆ. ಅದರಂತೆ, ಈಗಾಗಲೇ ಬಹುತೇಕ ಕಡೆ ಕಾಮಗಾರಿ ಪ್ರಾರಂಭಿಸಲಾಗಿದ್ದು, ಕೆಲಸ ಆರಂಭವಾಗಿರುವ ಕಾಮಗಾರಿಗಳಿಗೆ ಮತ್ತಷ್ಟು ವೇಗ ನೀಡಿ ಮಳೆಗಾಲಕ್ಕೂ ಮುನ್ನ ಪೂರ್ಣಗೊಳಿಸಲು ಯೋಜನೆ ರೂಪಿಸಲಾಗಿದೆ,'' ಎಂದು ಮಾಹಿತಿ ನೀಡಿದರು.

''ಸಿಲ್ಕ್ ಬೋರ್ಡ್ ಜಂಕ್ಷನ್ ಜಲಾವೃತಗೊಳ್ಳುವುದನ್ನು ತಪ್ಪಿಸುವ ಸಲುವಾಗಿ ಸ್ಟೀಲ್ ಗರ್ಡರ್ ಅಳವಡಿಸುವ ಮುಖಾಂತರ 1.5 ಮೀ. ಸಾಮರ್ಥ್ಯದ ಬದಲಿಗೆ 3.5 ಮೀ.ನಷ್ಟು ರಾಜಕಾಲುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಅಂಜನಾಪುರದ ಬಳಿಯ ಕಾಲುವೆಗೆ ತಡೆಗೋಡೆ, 250 ಮೀ. ಉದ್ದದ ಕಾಲುವೆ ಕಾಮಗಾರಿಯ ಪೈಕಿ 180 ಮೀ. ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ 15 ದಿನಗಳಲ್ಲಿ ಪೂರ್ಣಗೊಳ್ಳಲಿದೆ,'' ಎಂದು ಭರವಸೆ ನೀಡಿದರು.

''ಗಾಂಧಿನಗರದ ಝಿಯಾನ್ ಚರ್ಚ್ ಬಳಿ 188 ಮೀ. ಉದ್ದದ ಬಾಕ್ಸ್ ಡ್ರೈನ್ ಕಾಮಗಾರಿ ಪ್ರಗತಿಯಲ್ಲಿದೆ. 33 ಮೀ. ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕೆಲಸವನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು,'' ಎಂದರು.

ಮಡಿವಾಳ ಕೆರೆಗೆ ಸ್ಲೂಯಿಸ್ ಗೇಟ್ ಅಳವಡಿಕೆ ಪರಿಶೀಲಿಸಿದ ಅವರು, ಮಳೆ ನೀರುಗಾಲುವೆ ಕಾಮಗಾರಿಗಳ ಬಳಿ ಸುರಕ್ಷಾ ಕ್ರಮ ಕೈಗೊಂಡು ಕೆಲಸ ಮಾಡಬೇಕು. ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ವಿಶ್ವ ಬ್ಯಾಂಕ್‌ನ ಪ್ರತಿನಿಧಿಗಳಾದ ಕ್ರಿಸ್ ವಿಲ್ಸನ್, ಡೆವಿಡ್ ಲಾರ್ಡ್, ಕಾರ್ಯಪಾಲಕ ಎಂಜಿನಿಯರ್ ಉಪಸ್ಥಿತರಿದ್ದರು.

ಭೂಸ್ವಾಧೀನ, ಟಿಡಿಆರ್ ಕಡತಗಳ ತ್ವರಿತ ವಿಲೇವಾರಿಗೆ ಸೂಚನೆ

ಬೆಂಗಳೂರು: ಭೂಸ್ವಾಧೀನ ಹಾಗೂ ಟಿಡಿಆರ್. ಕಡತಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡುವಂತೆ ಹೆಚ್ಚುವರಿ ಆಯುಕ್ತರಾದ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆಯ ಭೂಸ್ವಾಧೀನ ಹಾಗೂ ಟಿಡಿಆರ್. ವಿಭಾಗದಲ್ಲಿನ ಆಡಳಿತಾತ್ಮಕ ಕಾರ್ಯವೈಖರಿಯನ್ನು ಮತ್ತಷ್ಟು ಸುಗಮಗೊಳಿಸುವ ಹಿನ್ನೆಲೆಯಲ್ಲಿ ಅವರು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಭೂಸ್ವಾಧೀನ ಹಾಗೂ ಟಿಡಿಆರ್ ವಿಭಾಗಗಳಲ್ಲಿ ಬಾಕಿ ಇರುವ ಕಡತಗಳ ವಿಲೇವಾರಿ ಪ್ರಗತಿ, ಇ-ಕಚೇರಿ ವ್ಯವಸ್ಥೆಗಳ ಬಳಕೆ, ತಾಂತ್ರಿಕ ಸುಧಾರಣೆ ಹಾಗೂ ನ್ಯಾಯಾಲಯ ಸಂಬಂಧಿತ ಪ್ರಕರಣಗಳ ನಿರ್ವಹಣೆ ಕುರಿತು ಅವರು ಚರ್ಚೆ ನಡೆಸಿದರು. ಟಿಡಿಆರ್ ಪಡೆದಿರುವ ಆರ್.ಡಿ. ಸ್ವತ್ತುಗಳಿಗೆ ಸಂಬಂಧಿಸಿದಂತೆ ಇ-ಆಸ್ತಿ ತಂತ್ರಾಂಶದಲ್ಲಿ ಖಾತೆ ವಿಭಜನೆ ಪ್ರಕ್ರಿಯೆ ವೇಗಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ ಅವರು, ಇ-ಟಿಡಿಆರ್ ಪೋರ್ಟಲ್ ಅಭಿವೃದ್ಧಿ ಕಾರ್ಯವನ್ನು ತಾಂತ್ರಿಕ ತಂಡವು ಶೀಘ್ರ ಪೂರ್ಣಗೊಳಿಸಬೇಕು. ಟಿಡಿಆರ್ ಸಂಬಂಧಿತ ಕಡತಗಳನ್ನು ಇ-ಟಿಡಿಆರ್ ಪೋರ್ಟಲ್ ಮೂಲಕ ನಿರ್ವಹಿಸಬೇಕು. ಟಿಡಿಆರ್‌ಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳು ಹಾಗೂ ಕಾನೂನು ಪ್ರಕ್ರಿಯೆಗಳನ್ನು ಆದ್ಯತೆಯ ಮೇರೆಗೆ ನಿರ್ವಹಿಸಬೇಕು ಎಂದು ನಿರ್ದೇಶಿಸಿದರು.

ಹೂಳೆತ್ತುವ ಕಾಮಗಾರಿ ಶೀಘ್ರ ಮುಗಿಸಲು ಸೂಚನೆ

ಬೆಂಗಳೂರು: ಮುಂಗಾರು ಮಳೆ ಪ್ರಾರಂಭವಾಗುವ ಮುನ್ನವೇ ಸಂಭವಿಸಬಹುದಾದ ಪ್ರವಾಹ ಮತ್ತು ವಿಪತ್ತುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾಮಗಾರಿಗಳನ್ನು ಮುಗಿಸುವಂತೆ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಎಂಜಿನಿಯರ್‌ಗಳಿಗೆ ಸೂಚಿಸಿದರು.

ಸಾರಕ್ಕಿ, ಜೆ.ಪಿ.ನಗರದ ಸಿಂಧೂರ ಕಲ್ಯಾಣ ಮಂಟಪದ ಸಮೀಪ ಹೊರವರ್ತುಲ ರಸ್ತೆಯ ರಾಜಕಾಲುವೆ ಪ್ರದೇಶಗಳಲ್ಲಿ ನಡೆಯುತ್ತಿರುವ ಹೂಳೆತ್ತುವ ಕಾಮಗಾರಿಯನ್ನು ಖುದ್ದಾಗಿ ಪರಿಶೀಲಿಸಿದ ನಂತರ ಅವರು ಮಾತನಾಡಿದರು.

''ಮಳೆ ನೀರು ಚರಂಡಿ ಹಾಗೂ ರಾಜಕಾಲುವೆಗಳಲ್ಲಿ ಶೀಘ್ರ ಹೂಳು ತೆಗೆಯಬೇಕು. ರಸ್ತೆ ಬದಿಯ ಚರಂಡಿಗಳ ಮೇಲಿರುವ ಸ್ಲ್ಯಾಬ್ ತೆಗೆದು ಸಂಗ್ರಹವಾಗಿರುವ ಪ್ಲಾಸ್ಟಿಕ್ ತ್ಯಾಜ್ಯ, ಕಸ ಮತ್ತು ಕಳೆ ಗಿಡಗಳನ್ನು ಸಂಪೂರ್ಣವಾಗಿ ತೆಗೆಯಬೇಕು,'' ಎಂದು ಎಂಜಿನಿಯರ್‌ಗಳಿಗೆ ನಿರ್ದೇಶನ ನೀಡಿದರು.

ಬೊಮ್ಮನಹಳ್ಳಿಯಲ್ಲಿ ಹೆಚ್ಚುವರಿ ಆಯುಕ್ತ ಡಾ. ನವೀನ್ ಕುಮಾರ್ ರಾಜು ನೇತೃತ್ವದಲ್ಲಿ ವಿಪತ್ತು ನಿರ್ವಹಣಾ ತಂಡದ ಕಾರ್ಯಾಚರಣೆ ನಡೆಯಿತು. ಎಚ್‌ಎಸ್‌ಆರ್ ಲೇಔಟ್ 1ನೇ ಮುಖ್ಯರಸ್ತೆ, 14ನೇ ಅಡ್ಡರಸ್ತೆ, ಮಡಿವಾಳ ಕೆರೆ, ಆಕ್ಸ್‌ಫರ್ಡ್ ಕಾಲೇಜು ಮತ್ತು ಅನುಗ್ರಹ ಲೇಔಟ್‌ನಂತಹ ಪ್ರಮುಖ

ತಂದೆ ಒಪ್ಪಿಗೆ ಇಲ್ಲದೆ ಮಗುವಿಗೆ ಪಾಸ್‌ಪೋರ್ಟ್ ನೀಡಲು ಆದೇಶ

■ **ವಿಕ ಸುದ್ದಿಲೋಕ** ಬೆಂಗಳೂರು

ದಂಪತಿ ನಡುವಿನ ವೈಮನಸ್ಸು ಅಥವಾ ಜಗಳಕ್ಕೆ ಅಪ್ರಾಪ್ತ ಮಗು ಬಲಿಯಾಗಬಾರದು ಎಂದು ಪ್ರಕರಣವೊಂದರಲ್ಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ವಿದೇಶದಲ್ಲಿರುವ ಅಜ್ಜ-ಅಜ್ಜಿಯನ್ನು ಭೇಟಿ ಮಾಡಿ ಪಾಸ್‌ಪೋರ್ಟ್ ಅವಧಿ ಮುಗಿಯುವುದಕ್ಕೂ ಮುನ್ನವೇ ಭಾರತಕ್ಕೆ ಹಿಂದಿರುಗಬೇಕು. ಈ ಸಂಬಂಧ ಪ್ರಮಾಣಪತ್ರ ಸಲ್ಲಿಸಬೇಕೆಂಬ ಷರತ್ತನ್ನು ವಿಧಿಸಿದ ನ್ಯಾಯಪೀಠ, ಮುಂದಿನ ಒಂದು ವಾರದಲ್ಲಿ ಪಾಸ್‌ಪೋರ್ಟ್ ನೀಡಲು ಪಾಸ್‌ಪೋರ್ಟ್ ವಿತರಣಾ ಪ್ರಾಧಿಕಾರದ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ತಂದೆಯ ಒಪ್ಪಿಗೆ ಇಲ್ಲದ ಪರಿಣಾಮ ಅಧಿಕಾರಿಗಳು ಪಾಸ್‌ಪೋರ್ಟ್ ನೀಡುತ್ತಿಲ್ಲ, ಹೀಗಾಗಿ, ತನ್ನ ಮಗುವಿಗೆ ಪಾಸ್‌ಪೋರ್ಟ್ ನೀಡಲು ನಿರ್ದೇಶನ ನೀಡಬೇಕು ಎಂದು ಕೋರಿ ಮಗುವಿನ ತಾಯಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ

ಪೀಠ ಈ ಆದೇಶ ನೀಡಿದೆ.

''ತಂದೆಯು ಒಂದೇ ವಿಳಾಸದಲ್ಲಿ ವಾಸವಿದ್ದರೂ, ನ್ಯಾಯಾಲಯದ ನೋಟಿಸ್ ಸ್ವೀಕರಿಸದೇ ಉದ್ದೇಶಪೂರ್ವಕವಾಗಿ ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಒಬ್ಬ ಪೋಷಕರು ಅನಗತ್ಯವಾಗಿ ಅಡ್ಡಿಪಡಿಸಿದಾಗ ಮಗುವಿನ ಹಿತದೃಷ್ಟಿಯಿಂದ ನಿಯಮಗಳನ್ನು ಸಡಿಲಿಸಬಹುದು,'' ಎಂದು ಅಭಿಪ್ರಾಯಪಟ್ಟ ಪೀಠ, ''ಕುಟುಂಬದ ಸದಸ್ಯರನ್ನು ಭೇಟಿ ಮಾಡುವುದು ಮಗುವಿನ ನ್ಯಾಯಸಮ್ಮತ ಹಕ್ಕಾಗಿದ್ದು, ದಂಪತಿ ನಡುವಿನ ಹಳಸಿದ ಸಂಬಂಧವು ಮಗುವಿನ ಹಕ್ಕುಗಳನ್ನು ಮೊಟಕುಗೊಳಿಸಬಾರದು,'' ಎಂದು ತಿಳಿಸಿದೆ.

ಪ್ರಕರಣದ ಹಿನ್ನೆಲೆ

ಅರ್ಜಿದಾರ ಮಗು ತನ್ನ ತಾಯಿ ಮತ್ತು ಅಜ್ಜ - ಅಜ್ಜಿಯರೊಂದಿಗೆ ಬೇಸಿಗೆ ರಜೆ ಕಳೆಯಲು ಆಸ್ಟ್ರೇಲಿಯಾಕ್ಕೆ ತೆರಳಲು ಉದ್ದೇಶಿಸಿದ್ದರು. ಆದರೆ, ಪಾಸ್‌ಪೋರ್ಟ್ ನಿಯಮಗಳ ಪ್ರಕಾರ ಅಪ್ರಾಪ್ತ ಮಕ್ಕಳಿಗೆ ಪಾಸ್‌ಪೋರ್ಟ್ ಪಡೆಯಲು ತಂದೆ ಮತ್ತು ತಾಯಿ ಇಬ್ಬರ ಒಪ್ಪಿಗೆ ಕಡ್ಡಾಯವಾಗಿರಲಿದೆ. ಈ ಪ್ರಕರಣದಲ್ಲಿ ತಂದೆಯು ಒಪ್ಪಿಗೆ ನೀಡಲು ನಿರಾಕರಿಸಿದ್ದರಿಂದ ಪಾಸ್‌ಪೋರ್ಟ್ ಪ್ರಾಧಿಕಾರವು ಅರ್ಜಿಯನ್ನು ಬಾಕಿ ಉಳಿಸಿಕೊಂಡಿತ್ತು. ಹಾಗಾಗಿ, ಅದನ್ನು ಪ್ರಶ್ನಿಸಿ ಪತ್ನಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಅಲ್ಲದೆ, ತಂದೆ ಅನುಮತಿ ಇಲ್ಲದೆಯೂ ವಿದೇಶಿ ಪ್ರವಾಸಕ್ಕೆ ಎಂಟು ವಾರಗಳ ಕಾಲ ಪಾಸ್‌ಪೋರ್ಟ್ ನೀಡುವಂತೆ ಸೂಚನೆ ನೀಡಿ ಆದೇಶಿಸಿದೆ. ''ಅಪ್ರಾಪ್ತ ಮಕ್ಕಳಿಗೆ ಪಾಸ್‌ಪೋರ್ಟ್ ನೀಡುವಾಗ ಪೋಷಕರಿಬ್ಬರ ಅನುಮತಿ ಕಡ್ಡಾಯವಾಗಿರಲಿದೆ. ಆದರೆ, ಪೋಷಕರ ಒಪ್ಪಿಗೆ ನೀಡಲು ನಿರಾಕರಿಸಿದಾಗ ಅಪ್ರಾಪ್ತರ ಕಾನೂನು ಬದ್ಧ ಹಕ್ಕುಗಳನ್ನು ಉಲ್ಲಂಘಿಸುವುದಕ್ಕೆ ಸಾಧ್ಯವಿಲ್ಲ,'' ಎಂದು ಪೀಠ ಹೇಳಿದೆ.

ಅರ್ಜಿದಾರರ ಪರ ವಕೀಲರು, ''ಅರ್ಜಿದಾರರು ಮತ್ತವರ ಪತಿಯ ನಡುವೆ ವೈವಾಹಿಕ ಸಂಬಂಧ ಪ್ರಕರಣಗಳಲ್ಲಿ ಸಿಲುಕಿಕೊಂಡಿದ್ದಾರೆ. ವಿಚ್ಛೇದನ ಕೋರಿ ಪತಿ ಸಲ್ಲಿಸಿರುವ ಅರ್ಜಿಗಳು ಕೌಟುಂಬಿಕ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿವೆ. ಆದರೆ, ಅರ್ಜಿದಾರರು ಬೇಸಿಗೆ ರಜೆ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಅಜ್ಜಿ- ಅಜ್ಜನನ್ನು ನೋಡುವುದಕ್ಕೆ ಹೋಗಲು ಉದ್ದೇಶಿಸಿದ್ದಾರೆ. ಪಾಸ್‌ಪೋರ್ಟ್ ನೀಡುವಲ್ಲಿ ವಿಳಂಬವಾದಲ್ಲಿ ಅಪ್ರಾಪ್ತ ವಯಸ್ಕರ ಹಿತಾಸಕ್ತಿಗಳಿಗೆ ಹಾನಿಯಾಗಲಿದೆ. ಆದ್ದರಿಂದ ತಂದೆ ಅನುಮತಿ ಇಲ್ಲದೇ ಮಗುವಿಗೆ ಪಾಸ್‌ಪೋರ್ಟ್ ನೀಡಲು ನಿರ್ದೇಶನ ನೀಡಬೇಕು,'' ಎಂದು ಕೋರಿದರು.

ವಾಣಿಜ್ಯ ಅಡುಗೆ ಅನಿಲದ ಸಿಲಿಂಡರ್‌ದ ಬೆಲೆ ಏರಿಕೆಯನ್ನು ವಿರೋಧಿಸಿ ಹಾಗೂ ತಕ್ಷಣವೇ ಬೆಲೆ ಏರಿಕೆ ಆದೇಶ ಹಿಂಪಡೆಯಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಷ್ಟ್ರಸಮಿತಿ (ಕೆಆರ್‌ಎಸ್) ಕಾರ್ಯಕರ್ತರು, ಫ್ರೀಡಂಪಾರ್ಕ್‌ನಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ರಾಜಾನುಕುಂಟೆ ಸರಕಾರಿ ಪಾಲಿಟೆಕ್ನಿಕ್‌ನಲ್ಲಿ ಪ್ರವೇಶ ಆರಂಭ

ಯಲಹಂಕ: ರಾಜಾನುಕುಂಟೆ ಸರಕಾರಿ ಪಾಲಿಟೆಕ್ನಿಕ್‌ನಲ್ಲಿ ಪ್ರಸಕ್ತ (2026-27) ಶೈಕ್ಷಣಿಕ ವರ್ಷದಿಂದಲೇ ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭಿಸಲಾಗುತ್ತಿದೆ. ನಾಲ್ಕು ವಿಭಾಗಗಳಲ್ಲಿ 240 ಸೀಟು ಲಭ್ಯವಿವೆ ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿದರು.

''ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ (60), ಸಿವಿಲ್ ಎಂಜಿನಿಯರಿಂಗ್ (60), ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ (60), ಮೆಕ್ಯಾನಿಕಲ್ ಎಂಜಿನಿಯರಿಂಗ್ (60) ವಿಭಾಗಗಳಲ್ಲಿ ಸೀಟುಗಳು ಲಭ್ಯವಿವೆ. ಕನಿಷ್ಠ 35% ಅಂಕದೊಂದಿಗೆ 10ನೇ ತರಗತಿ ತೇರ್ಗಡೆಯಾದ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹರು. ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬೇಕು. ಮೆರಿಟ್ ಆಧಾರಿತ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಖಾಲಿ ಸೀಟುಗಳಿಗೆ ಸ್ಥಳದಲ್ಲೇ ಪ್ರವೇಶ ಅವಕಾಶವೂ ಇರಲಿದೆ,'' ಎಂದರು.

''ಕಾಲೇಜಿನಲ್ಲಿ ಅನುಭವೀ ಬೋಧಕ ವೃಂದ, ಸುಸಜ್ಜಿತ ಪ್ರಯೋಗಾಲಯ, ಗ್ರಂಥಾಲಯ ಸೌಲಭ್ಯವಿದೆ. ಸರಕಾರಿ ಕೋಟಾದಡಿ ಪ್ರವೇಶಕ್ಕೆ ಸುಮಾರು 4,580 ರೂ. ಶುಲ್ಕ ನಿಗದಿಯಾಗಿದ್ದು, ಮೇ 30 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಮಾಹಿತಿಗೆ ಇಮೇಲ್ ವಿಳಾಸ pplgptyelahanka@gmail.com ಸಂಪರ್ಕಿಸಬಹುದು,'' ಎಂದರು.

ಪಕ್ಕದ ಮನೆಯ ಮಹಿಳೆ ಚುಡಾಯಿಸಿ ಪುಂಡಾಟ: ಬಂಧನ

ಬೆಂಗಳೂರು: ತನ್ನ ಪತ್ನಿಯನ್ನು ಚುಡಾಯಿಸುತ್ತಿದ್ದ ಬಗ್ಗೆ ಪ್ರಶ್ನಿಸಿದ ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ನೆರೆಮನೆಯವನನ್ನು ಶಂಕರಪುರಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಂಗರಾವ್ ರಸ್ತೆಯ ನಿವಾಸಿ ಪುಟ್ಟರಾಜು ಬಂಧಿತ. ಆರೋಪಿ ಪುಟ್ಟರಾಜು ತನ್ನ ಪಕ್ಕದ ಮನೆಯ ನಿವಾಸಿ ನಂದೀಶ್ ಎಂಬುವವರ ಮೇಲೆ ಬುಧವಾರ ಹಲ್ಲೆ ನಡೆಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಮೈಸೂರು ಮೂಲದ ನಂದೀಶ್ ಅವರು ರಂಗರಾವ್ ರಸ್ತೆಯ ಉದ್ಯಮಿಯೊಬ್ಬರ ಭದ್ರತಾ ಸಿಬ್ಬಂದಿಯಾಗಿದ್ದು, ಪತ್ನಿ ಜತೆ ಅಲ್ಲಿಯೇ ವಾಸಿಸುತ್ತಿದ್ದರು. ಅವರ ಪಕ್ಕದ ಮನೆಯಲ್ಲಿ ಪುಟ್ಟರಾಜು ವಾಸಿಸುತ್ತಿದ್ದ. ಹಲವು ದಿನಗಳಿಂದ ನಂದೀಶ್ ಪತ್ನಿ ಜತೆ ಪುಟ್ಟರಾಜು ಅಸಭ್ಯವಾಗಿ ನಡೆದುಕೊಳ್ಳುತ್ತಿದ್ದ. ಮನೆ ಮುಂದೆ ಪಾತ್ರೆ ತೊಳೆಯುವಾಗ, ಬಟ್ಟೆ ಒಣ ಹಾಕಲು ಬಂದಾಗ ಚುಡಾಯಿಸಿ ಕಣ್ಸನ್ನೆಗಳ ಮೂಲಕ ಕಿರುಕುಳ ನೀಡುತ್ತಿದ್ದ. ಬುಧವಾರ ಸಹ ಪುಟ್ಟರಾಜು ಚೇಷ್ಟೆ ಮುಂದುವರಿಸಿದಾಗ ಸಹಿಸಲಾಗದೆ ಗಂಡನಿಗೆ ತಿಳಿಸಿದ್ದರು. ಮನೆಯಿಂದ ಹೊರಬಂದ ನಂದೀಶ್, ಪುಟ್ಟರಾಜುನನ್ನು ತರಾಟೆ ತೆಗೆದುಕೊಂಡಿದ್ದರು. ಈ ವೇಳೆ ಪುಟ್ಟರಾಜು ಮನಸೋ-ಇಚ್ಛೆ ಹಲ್ಲೆ ನಡೆಸಿ ಸ್ಥಳದಿಂದ ಪರಾರಿಯಾಗಿದ್ದ ಎಂದು ಪೊಲೀಸರು ವಿವರಿಸಿದರು.

ನೇಣು ಕುಣಿಕೆ ಫೋಟೊ ಕಳಿಸಿ ಆತ್ಮಹತ್ಯೆ

» ನಮ್ಮ ಮೊದಲ ಪುಟದಿಂದ

ಮಂಗಳವಾರ ರಾತ್ರಿ ಕೊಠಡಿಯಲ್ಲಿ ಪ್ರತ್ಯೇಕವಾಗಿ ಮಲಗಿದ್ದ ಶಾರದಾ, ತಡರಾತ್ರಿ ತನ್ನ ಗಂಡನಿಗೆ ವಾಟ್ಸ್ಯಾಪ್‌ನಲ್ಲಿ ನೇಣುಕುಣಿಕೆ ಫೋಟೊ ಕಳಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ನಡುಮನೆಯಲ್ಲಿ ಮಲಗಿದ್ದ ಮಹೇಶ್ ಬೆಳಗ್ಗೆ ನಿದ್ರೆಯಿಂದ ಎದ್ದ ಬಳಿಕ ವಾಟ್ಸ್ಯಾಪ್ ನೋಡಿದಾಗ ಪತ್ನಿ ನೇಣುಕುಣಿಕೆ ಫೋಟೊ ಹಾಗೂ ಸಂದೇಶ ಕಳಿಸಿರುವುದನ್ನು ಕಂಡು ಕಂಗಾಲಾಗಿದ್ದರು. ಕೊಠಡಿಗೆ ತೆರಳಿ ನೋಡಿದಾಗ ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ನನ್ನ ಸಹೋದರಿ ಸಾವಿಗೆ ವರದಕ್ಷಿಣೆ ಕಿರುಕುಳ ಕಾರಣ' ಎಂದು ಆರೋಪಿಸಿ ಶಾರದಾ ಅಣ್ಣ ದೂರು ನೀಡಿದ್ದರು. ಈ ನಿಟ್ಟಿನಲ್ಲಿ ಪ್ರಕರಣ ದಾಖಲಿಸಿಕೊಂಡು ಮಹೇಶ್‌ನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಚನ್ನಪಟ್ಟಣಕ್ಕೆ ಬಿಎಂಟಿಸಿ ಬಸ್

ಚನ್ನಪಟ್ಟಣ: ಬಿಎಂಟಿಸಿ ಸೇವೆಯನ್ನು ಕಳೆದೆರಡು ತಿಂಗಳ ಹಿಂದಷ್ಟೇ ರಾಮನಗರ-ಕನಕಪುರಕ್ಕೆ ವಿಸ್ತರಿಸಿದ್ದ ನಿಗಮ, ಶುಕ್ರವಾರದಿಂದ ಚನ್ನಪಟ್ಟಣಕ್ಕೂ ವಿಸ್ತರಣೆ ಮಾಡುತ್ತಿದೆ.

ಕಳೆದ ಮಾರ್ಚ್‌ನಲ್ಲಿ ರಾಮನಗರ ಮತ್ತು ಕನಕಪುರಕ್ಕೆ ಬಿಎಂಟಿಸಿ ಬಸ್ ಸೇವೆಗೆ ಚಾಲನೆ ನೀಡಿದ್ದ ಸಾರಿಗೆ ಸಚಿವರು ಮುಂದಿನ ದಿನಗಳಲ್ಲಿ ಚನ್ನಪಟ್ಟಣಕ್ಕೂ ವಿಸ್ತರಿಸುವುದಾಗಿ ನೀಡಿದ್ದ ಭರವಸೆಯಂತೆ ಶುಕ್ರವಾರದಿಂದ ನಗರದಲ್ಲಿ ಬಿಎಂಟಿಸಿ ಬಸ್‌ಗಳು ಸಂಚಾರ ನಡೆಸಲಿವೆ. ಶಾಸಕ ಸಿ.ಪಿ.ಯೋಗೇಶ್ವರ್ ಮತ್ತು ಸಾರಿಗೆ ಅಧಿಕಾರಿಗಳು ಬಸ್ ಸೇವೆಗೆ ಚಾಲನೆ ನೀಡಲಿದ್ದಾರೆ.

ಈಗಾಗಲೇ ರಾಮನಗರಕ್ಕೆ 6 ಹಾಗೂ ಕನಕಪುರಕ್ಕೆ 8 ಬಿಎಂಟಿಸಿ ವಾಯು ವಜ್ರ ಎಸಿ ಬಸ್‌ಗಳನ್ನು ನಿಯೋಜಿಸಲಾಗಿದೆ. ಚನ್ನಪಟ್ಟಣಕ್ಕೂ ಹತ್ತು ಹವಾನಿಯಂತ್ರಿಕ ಬಸ್‌ಗಳನ್ನು ನಿಯೋಜಿಸಲಾಗಿದ್ದು, ಬೆಳಗ್ಗೆಯಿಂದ ಸಂಜೆ ವರೆಗೂ ಅರ್ಧಗಂಟೆಗೆ ಒಂದರಂತೆ ಕಾರ್ಯಾಚರಿಸಲಿವೆ.

ಅಪಘಾತವೆಸಗಿ ಒಂಟಿ ಮಹಿಳೆಯ ಕೊಲೆ

» ನಮ್ಮ ಮೊದಲ ಪುಟದಿಂದ

ಕುರುಬರಹಳ್ಳಿಯ ಜೆ.ಸಿ.ನಗರದ ಅನಿಲ್‌ಕುಮಾರ್ ಎಂಬುವವರ ಮನೆಯಲ್ಲಿ 11 ವರ್ಷಗಳಿಂದ ವಿಜಯಲಕ್ಷ್ಮೀ ವಾಸಿಸುತ್ತಿದ್ದರು. ಸ್ವಲ್ಪ ಮಟ್ಟಿಗೆ ಕ್ಯಾಬ್ ಚಾಲಕರು ಹಾಗೂ ಪರಿಚಯಸ್ಥರಿಗೆ ಬಡ್ಡಿಗೆ ಹಣ ನೀಡುತ್ತಿದ್ದರು. ಮೈ ತುಂಬಾ ಬಂಗಾರ ಧರಿಸಿಕೊಂಡಿರುತ್ತಿದ್ದರು. ಅವರಿಗೆ ಯಾರೂ ಇಲ್ಲ ಎಂಬುದು ಅದೇ ಏರಿಯಾದ ಚೇತನ್ ಹಾಗೂ ರೌಡಿ ಪ್ರದೀಪ್‌ಗೆ ಗೊತ್ತಾಗಿತ್ತು.

ವಿಜಯಲಕ್ಷ್ಮೀ ಅವರಿಗೆ ಅಪಘಾತವೆಸಗಿದರೆ ಮೃತಪಡಲಿದ್ದಾರೆ. ಇದರಿಂದ ಸುಲಭವಾಗಿ ಹಣ, ಆಭರಣ ದೋಚಬಹುದು. ಅವರ ಪರವಾಗಿ ಯಾರೊಬ್ಬರೂ ತಲೆಕೆಡಿಸಿಕೊಳ್ಳುವುದಿಲ್ಲ ಎಂಬ ಲೆಕ್ಕಾಚಾರ ಹಾಕಿ ಶೇಷಾದ್ರಿಪುರಂ ರೌಡಿಶೀಟರ್ ಮಂಜುನಾಥ್, ರಾಕೇಶ್ ಹಾಗೂ ಜಾನ್‌ಗೂ ತಿಳಿಸಿ ಒಪ್ಪಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕೊಲೆಗಾರನೇ ದೂರು ನೀಡಿದ್ದ: ಪೂರ್ವನಿಗದಿತ ಸಂಚಿನಂತೆ ಏ.20ರಂದು ರಾತ್ರಿ ಏಳು ಗಂಟೆ ಸುಮಾರಿಗೆ ವಿಜಯಲಕ್ಷ್ಮೀ ಅವರು ಮನೆಗೆ ನಡೆದುಕೊಂಡು ಹೋಗುವಾಗ ವಾಹನವೊಂದರಿಂದ ಡಿಕ್ಕಿ ಹೊಡೆಸಿದ್ದರು. ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ವಿಜಯಲಕ್ಷ್ಮೀ ಅವರನ್ನು ಸ್ಥಳದಲ್ಲಿದ್ದ ರಾಕೇಶ್ ಆಸ್ಪತ್ರೆಗೆ ದಾಖಲಿಸಿದ್ದ. ಜತೆಗೆ, ವಿಜಯನಗರ ಸಂಚಾರ ಠಾಣೆ ಪೊಲೀಸರಿಗೆ ತಾನೇ ದೂರು ನೀಡಿ, ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ ಎಂದು ವಿವರಿಸಿದ್ದ.

ಕೀ ಕದ್ದಿದ್ದ ಆರೋಪಿ: ಅಪಘಾತದ ವೇಳೆ ವಿಜಯಲಕ್ಷ್ಮೀ ಅವರ ಪರ್ಸ್ ಹಾಗೂ ಮನೆ ಕೀಯನ್ನು ರಾಕೇಶ್ ಕದ್ದಿಟ್ಟುಕೊಂಡಿದ್ದ. ಆಸ್ಪತ್ರೆಗೆ ದಾಖಲಿಸಿದ ಬಳಿಕ ನೇರವಾಗಿ ಮನೆಗೆ ತೆರಳಿ ಆಭರಣ ದೋಚಲು ಮನೆ ಪುಡುಕಾಡುತ್ತಿದ್ದಾಗ ಮಾಲೀಕರು ಗಮನಿಸಿ ಪ್ರಶ್ನಿಸಿದ್ದರು. ಇದರಿಂದ ಗಲಿಬಿಲಿಗೊಂಡ ರಾಕೇಶ್ ಅಲ್ಲಿಂದ ಪರಾರಿಯಾಗಿದ್ದ. ಇದರಿಂದ ಅನುಮಾನಗೊಂಡ ಮನೆ ಮಾಲೀಕ ಅನಿಲ್‌ಕುಮಾರ್, ಅಪಘಾತದ ಬಗ್ಗೆ ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದರು.

ಈ ನಡುವೆ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವಿಜಯಲಕ್ಷ್ಮೀ ಅವರು ಏ.27ರಂದು ಮೃತಪಟ್ಟಿದ್ದರಿಂದ ಕೊಲೆ ಪ್ರಕರಣ ಸೇರ್ಪಡೆ ಮಾಡಲಾಗಿತ್ತು. ತನಿಖೆ ಚುರುಕುಗೊಳಿಸಿ ರಾಕೇಶ್ ಸೇರಿ ಐವರು ಆರೋಪಿಗಳನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಕೊಲೆ ಕೃತ್ಯ ಒಪ್ಪಿಕೊಂಡಿದ್ದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಕಸ್ಟಡಿ ಅವಧಿಯಲ್ಲಿ ಆರೋಪಿ ಸಾವು

ಕೃತ್ಯದಲ್ಲಿ ಶಾಮೀಲಾಗಿದ್ದ ಆರೋಪಿ ಜಿ.ಮಂಜುನಾಥ್‌ನನ್ನು ಏ. 28ರಂದು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ ವಿಚಾರಣೆ ಸಲುವಾಗಿ ಕಸ್ಟಡಿಗೆ ಪಡೆಯಲಾಗಿತ್ತು. ಪಿತ್ತಕೋಶ ಸಮಸ್ಯೆಯಿಂದ ಬಳಲುತ್ತಿದ್ದ ಮಂಜುನಾಥ್ ಮೇ 1ರಂದು ಹೊಟ್ಟೆನೋವಿನಿಂದ ಅಸ್ವಸ್ಥಗೊಂಡಿದ್ದು, ಅವರ ಕುಟುಂಬಸ್ಥರಿಗೆ ವಿಷಯ ತಿಳಿಸಲಾಗಿತ್ತು. ಬಳಿಕ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೆ ಮೇ 5ರಂದು ಮೃತಪಟ್ಟಿದ್ದ. ಮಂಜುನಾಥ್ ಸಾವಿನ ಸಂಬಂಧ ಅಸಹಜ ಸಾವು ಪ್ರಕರಣ ದಾಖಲಿಸಲಾಗಿದೆ. ಮಂಜುನಾಥ್ ಅನಾರೋಗ್ಯದಿಂದ ಬಳಲುತ್ತಿದ್ದ ಬಗ್ಗೆ ಅವರ ಕುಟುಂಬಸ್ಥರು ಹೇಳಿಕೆ ನೀಡಿದ್ದಾರೆ. ವೈದ್ಯಕೀಯ ವರದಿಯೂ ಇದೆ ಎಂದು ಪೊಲೀಸರು ಹೇಳಿದರು.

ಎಲ್ಲಿ-ಏನು?

ಶುಕ್ರವಾರ

ಆಕಾಶವಾಣಿ: 90 ವರ್ಷಗಳ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ವಾಕಥಾನ್.
ಮಾರ್ಗ: ಬೆಂಗಳೂರು ಆಕಾಶವಾಣಿ, ರಾಜಭವನ ರಸ್ತೆ-ಕಬ್ಬನ್ ಪಾರ್ಕ್-ವಿಧಾನಸೌಧ. ಬೆಳಗ್ಗೆ 6.30

ಬೆಂಗಳೂರು ಜಲಮಂಡಳಿ: ವಿಶ್ವ ಜಲ ದಿನ. ಉದ್ಘಾಟನೆ : ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್.
ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ, ಚಂದ್ರಾ ಲೇಔಟ್ 2ನೇ ಹಂತ. ಬೆಳಗ್ಗೆ 10.30.

ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಆ್ಯಂಡ್ ಟೆಕ್ನಾಲಜಿಕಲ್ ಮ್ಯೂಸಿಯಂ: ರಾಷ್ಟ್ರೀಯ ತಂತ್ರಜ್ಞಾನ ದಿನದ ಪ್ರಯುಕ್ತ 'ಭಾರತದ ಮೂರು ಹಂತದ ಅಣು ವಿದ್ಯುತ್ ಯೋಜನೆ' ಮೂಲಕ ಇಂಧನ ಭದ್ರತೆ ಕುರಿತು ವಿಜ್ಞಾನಿ ಶ್ರೀಕುಮಾರ್ ಜಿ.ಪಿಳ್ಳೈ ಅವರಿಂದ ಉಪನ್ಯಾಸ.
ಸ್ಥಳ: ಆಡಿಟೋರಿಯಂ, ಮ್ಯೂಸಿಯಂ ಆವರಣ, ಕಸ್ತೂರಬಾ ರಸ್ತೆ. ಬೆಳಗ್ಗೆ 10.30.

ಕರ್ನಾಟಕ ನಾಟಕ ಅಕಾಡೆಮಿ: ಮಕ್ಕಳ ರಂಗಹಬ್ಬ- ಚಿಣ್ಣರ ನಾಟಕಗಳ ದೊಡ್ಡ ಪ್ರದರ್ಶನ. ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಡಾ.ಬಿ.ಎಸ್. ಮಂಜುನಾಥಸ್ವಾಮಿ. ಹನುಮಾಯನ, ಗೊಂಬೆ ರಾವಣ, ರಾತ್ರಿಯ ಗುಮ್ಮ, ಅಜ್ಜನ ಹೆಜ್ಜೆ ಜಾಡು, ತಿರುಕನ ಕನಸು, ಚೆಕ್ ಮಾರಿ ದೊಡ್ ಮಾರಿ, ಹಕ್ಕಿಹಾಡು, ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ.
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ. ಬೆಳಗ್ಗೆ 10.30ರಿಂದ ರಾತ್ರಿವರೆಗೆ

ಸಂಗೀತನಾದ ಟ್ರಸ್ಟ್: 16ನೇ ವಾರ್ಷಿಕೋತ್ಸವ ಪ್ರಯುಕ್ತ ಸಾಂಸ್ಕೃತಿಕ ವೈಭವ, ವಿವಿಧ ಕ್ಷೇತ್ರದ ಸಾಧಕರಿಗೆ ಕರುನಾಡ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ. ಉದ್ಘಾಟನೆ : ಶಾಸಕ ಎಸ್.ಟಿ.ಸೋಮಶೇಖರ್
ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ. ಮಧ್ಯಾಹ್ನ 2.30ರಿಂದ

ಸಹಕಾರ ಇಲಾಖೆ : ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರ ನೂತನ ಆಡಳಿತ ಕಚೇರಿ 'ಸಹಕಾರ ಸಮೃದ್ಧಿ ಸೌಧ' ಲೋಕಾರ್ಪಣೆ ಸಮಾರಂಭ. ಉದ್ಘಾಟನೆ : ಸಿಎಂ ಸಿದ್ದರಾಮಯ್ಯ, ಉಪಸ್ಥಿತಿ : ಡಿಸಿಎಂ ಡಿ.ಕೆ.ಶಿವಕುಮಾರ್. ಅಧ್ಯಕ್ಷತೆ : ಶಾಸಕ ರಿಜ್ವಾನ್ ಅರ್ಷದ್.
ಸ್ಥಳ: ಸಹಕಾರ ಸಂಘಗಳ ನಿಬಂಧಕರ ಕಚೇರಿ, ಅಲಿ ಅಸ್ಕರ್ ರಸ್ತೆ. ಸಂಜೆ 4.

ಎಫ್‌ಕೆಸಿಸಿಐ: ಸದಸ್ಯರ ದಿನಾಚರಣೆ, 110ನೇ ವರ್ಷದ ಸಂಭ್ರಮ.
ಮುಖ್ಯ ಅತಿಥಿ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಅಧ್ಯಕ್ಷತೆ : ಸಂಸ್ಥೆ ಅಧ್ಯಕ್ಷೆ ಉಮಾರೆಡ್ಡಿ.
ಸ್ಥಳ: ಸರ್ ಎಂ.ವಿ.ಆಡಿಟೋರಿಯಂ, ಎಫ್‌ಕೆಸಿಸಿಐ. ಸಂಜೆ 4.40.

ಬೆಂಗಳೂರು ಗಾಯನ ಸಮಾಜ: ವಾದ್ಯ ವೈಭವ. ಸಂಜೆ 5.15 ರಿಂದ 6.45ರವರೆಗೆ ವಂಶಿಧರ್ (ಕೊಳಲು ವಾದನ), ಚಾರುಲತಾ ರಾಮಾನುಜಂ (ಪಿಟೀಲು),
ಆರ್.ಆದಮ್ಯ(ಮೃದಂಗ), ಶಮಿತ್ ಗೌಡ (ಘಟ). ಸಂಜೆ 7ರಿಂದ 8.30ರವರೆಗೆ ವಿಶ್ವನಾಥ್ (ಹಾರ್ಮೋನಿಯಂ), ಯಶಸ್ವಿ (ಪಿಟೀಲು), ಅನೂರು ದತ್ತಾತ್ರೇಯ ಶರ್ಮ (ಮೃದಂಗ), ಭಾರ್ಗವ ಹಾಲಂಬಿ (ಕಾಂಜಿರಾ)
ಸ್ಥಳ: ಗಾಯನ ಸಮಾಜದ ಸಭಾಂಗಣ, ಕೆ. ಆರ್.ರಸ್ತೆ.

ರಾಗೀಗುಡ್ಡ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್ : ವಿದ್ವಾನ್ ರಂಗನಾಥ ಕಟ್ಟಾಯ ಅವರಿಂದ ಶಲ್ಯ ಗದಾಪರ್ವದ ಸ್ವಾರಸ್ಯಗಳು ಕುರಿತು ಉಪನ್ಯಾಸ.
ಸ್ಥಳ: ದೇಗುಲದ ಸಾಂಸ್ಕೃತಿಕ ಮಂದಿರ, ಜಯನಗರ 9ನೇ ಬ್ಲಾಕ್. ಸಂಜೆ 6.30ರಿಂದ 8ರವರೆಗೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಸ್ಸೆಸ್ಸೆಲ್ಸಿ-ಪಿಯುಸಿಯಲ್ಲಿ ಶೇ.90ಕ್ಕಿಂತಲೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳ ಪೋಷಕರು ಕಡ್ಡಾಯವಾಗಿ ಯಶವಂತಪುರ ಕ್ಷೇತ್ರದ ನಿವಾಸಿಗಳಾಗಿರಬೇಕು. ಸರಕಾರಿ ಮತ್ತು ಖಾಸಗಿ ಕಾಲೇಜು ವಿದ್ಯಾರ್ಥಿಗಳು, ರಾಜ್ಯ ಪಠ್ಯಕ್ರಮ, ಸಿಬಿಎಸ್‌ಇ, ಐಸಿಎಸ್‌ಇಯಲ್ಲಿ ಪ್ರಥಮ ಪ್ರಯತ್ನದಲ್ಲೇ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದಿದ್ದರೆ ಅರ್ಜಿ ಸಲ್ಲಿಸಬಹುದಾಗಿದೆ. ಯಶವಂತಪುರ ಶಾಸಕ ಎಸ್.ಟಿ.ಸೋಮಶೇಖರ್, ವೈಯಕ್ತಿಕವಾಗಿ ಪ್ರತಿಭಾ ಪುರಸ್ಕಾರ ಮತ್ತು ಉಡುಗೊರೆ ನೀಡಲು ಮುಂದಾಗಿದ್ದಾರೆ. ವಿದ್ಯಾರ್ಥಿಯ ಅಂಕಪಟ್ಟಿ, ಆಧಾರ್‌ಕಾರ್ಡ್, ಫೋಟೊ, ತಂದೆ-ತಾಯಿಯ ಗುರುತಿನ ಚೀಟಿಯನ್ನು ಶಾಲಾ ಮುಖ್ಯ ಶಿಕ್ಷಕರು ಅಥವಾ ಪ್ರಾಂಶುಪಾಲರಿಂದ ದೃಢೀಕರಿಸಿ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಬಹುದು.

ಪ್ರತಿಭಾ ಪುರಸ್ಕಾರದ ಅರ್ಜಿಗಳನ್ನು ಯಶವಂತಪುರ ಕ್ಷೇತ್ರದ ಶಾಸಕರ ಕಚೇರಿ ಬಿ.ಇ.ಎಲ್. (ಭಾರತ್ ನಗರ) 1ನೇ ಹಂತ, ಮಾಗಡಿ ರಸ್ತೆ, ಹೇರೋಹಳ್ಳಿ- ಇಲ್ಲಿ ಪಡೆಯಬಹುದಾಗಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ಶಾಸಕರ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ.

ಕೇರಳ ಗೆದ್ದ ಕಾಂಗ್ರೆಸ್‌ಗೆ ಸಿಎಂ ಆಯ್ಕೆಯದ್ದೇ ತಲೆನೋವು

ಒಮ್ಮತದ ನಿರ್ಣಯಕ್ಕೆ ಬರಲು ಶಾಸಕಾಂಗ ಪಕ್ಷದ ಸಭೆ ವಿಫಲ | ಅಂತಿಮ ತೀರ್ಮಾನ ಹೈಕಮಾಂಡ್ ಹೆಗಲಿಗೆ

ತಿರುವನಂತಪುರ: ಕೇರಳದಲ್ಲಿ ದಶಕದ ಬಳಿಕ ಎಡಪಕ್ಷಗಳನ್ನು ಮಣಿಸಿದ ಕಾಂಗ್ರೆಸ್‌ಗೆ ಈಗ ಮುಖ್ಯಮಂತ್ರಿ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದೆ. ಮೂವರು ನಾಯಕರ ನಡುವಿನ ತೀವ್ರ ಪೈಪೋಟಿಯಿಂದ ಹೈಕಮಾಂಡ್ ಅಡಕತ್ತರಿಗೆ ಸಿಲುಕಿದೆ.

ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಗುರುವಾರ ನಡೆದ ಸಿಎಲ್‌ಪಿ ಸಭೆಯಲ್ಲೂ ಒಮ್ಮತದ ನಿರ್ಧಾರಕ್ಕೆ ಬರುವಲ್ಲಿ ವಿಫಲವಾದ ವೀಕ್ಷಕರು, ಮುಖ್ಯಮಂತ್ರಿ ಆಯ್ಕೆ ವಿಷಯವನ್ನು ಪಕ್ಷದ ವರಿಷ್ಠರ ಹೆಗಲಿಗೆ ವಹಿಸಿದ್ದಾರೆ.

ಕಳೆದ 10 ವರ್ಷ ಪ್ರತಿಪಕ್ಷ ನಾಯಕರಾಗಿದ್ದ ವಿ.ಡಿ.ಸತೀಷನ್, ಹಿರಿಯ ನಾಯಕ ರಮೇಶ್ ಚೆನ್ನಿತ್ತಲ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ನಡುವೆ ಮುಖ್ಯಮಂತ್ರಿ ಹುದ್ದೆಗೆ ಪೈಪೋಟಿ ಏರ್ಪಟ್ಟಿದೆ.

ಶಾಸಕಾಂಗ ಸಭೆಗೆ ವೀಕ್ಷಕರಾಗಿ ಆಗಮಿಸಿದ್ದ ಹಿರಿಯ ನಾಯಕ ಮುಕುಲ್ ವಾಸ್ನಿಕ್ ಹಾಗೂ ಅಜಯ್ ಮಾಕೆನ್ ಅವರು ನೂತನ ಶಾಸಕಾಂಗ ನಾಯಕ ಆಯ್ಕೆ ಸಂಬಂಧ ಚುನಾಯಿತ ಶಾಸಕರ ಜತೆ ಸಮಾಲೋಚಿಸಿದರು. ಮೂವರು ಆಕಾಂಕ್ಷಿಗಳ ಹೆಸರು ಪ್ರಸ್ತಾಪಿಸಿ ಅಭಿಪ್ರಾಯ ಆಲಿಸಿದರು. ಬಳಿಕ ಪ್ರತಿ ಶಾಸಕರ ಜತೆಗೆ ಪ್ರತ್ಯೇಕ ಮಾತುಕತೆ ನಡೆಸುವ ಮೂಲಕ ಅಭಿಪ್ರಾಯ ಸಂಗ್ರಹಿಸಿದರು.

ಸಭೆ ಬಳಿಕ ಮಾತನಾಡಿದ ಮುಕುಲ್ ವಾಸ್ನಿಕ್, ''ಶಾಸಕಾಂಗ ನಾಯಕನ ಆಯ್ಕೆ ಸಂಬಂಧ ಶಾಸಕರು ಅಭಿಪ್ರಾಯ ತಿಳಿಸಿದ್ದಾರೆ. ಮುಖ್ಯಮಂತ್ರಿ ಅಭ್ಯರ್ಥಿ ಆಯ್ಕೆಯನ್ನು ವರಿಷ್ಠರ ತೀರ್ಮಾನಕ್ಕೆ ಬಿಡಲು ಒಂದು ಸಾಲಿನ ನಿರ್ಣಯ ಕೈಗೊಳ್ಳಲಾಗಿದೆ. ಸಭೆಯ ನಿರ್ಧಾರವನ್ನು ಪಕ್ಷದ ಅಧ್ಯಕ್ಷರಿಗೆ ಸಲ್ಲಿಸಲಾಗುವುದು. ವರಿಷ್ಠರು ಶಾಸಕಾಂಗ ಪಕ್ಷದ ನಾಯಕನ ಹೆಸರು ಘೋಷಣೆ ಮಾಡಲಿದ್ದಾರೆ,'' ಎಂದು ತಿಳಿಸಿದರು.

ಸಭೆಯಲ್ಲಿ ಭಾಗಿಯಾಗಿದ್ದ ನೂತನ ಶಾಸಕ ಕೆ.ಮುರಳಿಧರ್ ಮಾತನಾಡಿ, ''ವರಿಷ್ಠರು ನಮ್ಮ ಅಭಿಪ್ರಾಯ ಆಲಿಸಿದ್ದಾರೆ. ಭಾನುವಾರದೊಳಗೆ ಹೊಸ ಮುಖ್ಯಮಂತ್ರಿ ಯಾರೆಂದು ಘೋಷಣೆ ಆಗಲಿದೆ,'' ಎಂದು ಹೇಳಿದರು.

ಕೆಸಿವಿಗೆ ಬೆಂಬಲ: ಗುರುವಾರ ನಡೆದ ನೂತನ ಚುನಾಯಿತ ಶಾಸಕರ ಸಭೆಯಲ್ಲಿ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಪರ ಒಲವು ವ್ಯಕ್ತವಾಗಿದೆ.

ಸಭೆಯಲ್ಲಿ ಭಾಗಿಯಾಗಿದ್ದ ಬಹುತೇಕ ಶಾಸಕರು ವೇಣುಗೋಪಾಲ್ ಪರ ಬ್ಯಾಟಿಂಗ್ ಮಾಡಿದ್ದಾರೆ. 63 ಶಾಸಕರಲ್ಲಿ 35 ಮಂದಿ ವೇಣುಗೋಪಾಲ್ ಬೆಂಬಲಿಸಿದ್ದಾರೆ. ಸತೀಶನ್ ಹಾಗೂ ಚೆನ್ನಿತ್ತಲ ಪರವಾಗಿ ತಲಾ 10 ಶಾಸಕರು ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ತಿಳಿದು ಬಂದಿದೆ. ಆದರೆ, ಶಾಸಕರಲ್ಲದ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಪರಿಗಣಿಸಬಾರದು ಎಂಬ ವಾದ ವಿರೋಧಿಗಳಿಂದ ವ್ಯಕ್ತವಾಗಿದೆ. ''ಯಾರಿಗೆ ಶಾಸಕರ ಬೆಂಬಲ ಇರಲಿದೆಯೋ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಲಾಗುವುದು. ಕರ್ನಾಟಕ, ಹಿಮಾಚಲ ಪ್ರದೇಶದಂತೆ ಕೇರಳದಲ್ಲೂ ಶಾಸಕರ ಬೆಂಬಲ ಉಳ್ಳವರು ಸರಕಾರದ ನೇತೃತ್ವ ವಹಿಸಲಿದ್ದಾರೆ,'' ಎಂಬ ಸಂದೇಶವನ್ನು ಹೈಕಮಾಂಡ್ ರವಾನಿಸಿದೆ.

ಮುಂದುವರಿದ ಅಭಿಯಾನ: ಈ ನಡುವೆ ವಿ.ಡಿ.ಸತೀಶನ್ ಪರವಾಗಿ ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ಶುರುವಾಗಿದೆ. ಮುಖ್ಯಮಂತ್ರಿ ಹುದ್ದೆ ಬಿಟ್ಟು ಬೇರೆ ಯಾವುದೇ ಸ್ಥಾನವನ್ನು ಒಪ್ಪಿಕೊಳ್ಳಬಾರದು ಎಂದು ಬೆಂಬಲಿಗರು ಆಗ್ರಹಿಸಿದ್ದಾರೆ. ಸತೀಶನ್ ಬಿಟ್ಟು ಬೇರೆ ಯಾರನ್ನೇ ಮುಖ್ಯಮಂತ್ರಿ ಹುದ್ದೆಯಲ್ಲಿ ಕೂರಿಸಿದರೆ ಬಂಡಾಯದ ಬಾವುಟ ಹಾರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಕಳೆದ 2023ರ ಕರ್ನಾಟಕ ಚುನಾವಣೆ ಬಳಿಕ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ನಡುವೆ ಸೃಷ್ಟಿಯಾದ ನಾಯಕತ್ವ ಸಂಘರ್ಷದಂತೆ ಕೇರಳದಲ್ಲೂ ಸಿಎಂ ಸ್ಥಾನಕ್ಕೆ ಮೂವರು ಮುಖಂಡರ ಮಧ್ಯೆ ತ್ರಿವಳಿ ಕಲಹ ಎದುರಾಗಿದೆ. ಬಿಕ್ಕಟ್ಟು ಪರಿಹರಿಸಲು ಹೈಕಮಾಂಡ್ ಅಧಿಕಾರ ಹಂಚಿಕೆ ಸೂತ್ರ ರೂಪಿಸಲಿದೆಯೋ ಅಥವಾ ಒಬ್ಬ ನಾಯಕನ ಹೆಸರನ್ನು ಸೂಚಿಸಲಿದೆಯೋ ಎಂಬ ಕುತೂಹಲ ಮೂಡಿಸಿದೆ.

ಯಾರ ಒಲವು ಯಾರಿಗೆ?




ವೇಣುಗೋಪಾಲ್	ವಿ.ಡಿ.ಸತೀಶನ್	ರಮೇಶ್ ಚೆನ್ನಿತ್ತಲ	ಯಾರಾದರೂ ಓಕೆ	ಕಾಂಗ್ರೆಸ್ ಶಾಸಕರ ಸಂಖ್ಯೆ
35	10	10	08	63

ಶಾಸಕಿಯ ತಬ್ಬಿಕೊಳ್ಳಲು ಮುಂದಾದ ಶಾಸಕ

ಶಾಸಕಾಂಗ ಸಭೆಗೆ ಆಗಮಿಸಿದ ನೂತನ ಶಾಸಕಿಯನ್ನು ಅಪ್ಪಿಕೊಳ್ಳಲು ಯತ್ನಿಸಿದ ಘಟನೆ ಕೇರಳ ಕಾಂಗ್ರೆಸ್ ಕಚೇರಿ ಬಳಿ ನಡೆದಿದೆ. ಹಿರಿಯ ಕಾಂಗ್ರೆಸ್ ನಾಯಕ ಚೇರಿಯನ್ ಫಿಲಿಪ್ ಅವರು ಸಭೆಗೆ ಆಗಮಿಸುತ್ತಿದ್ದ ಕೊಲ್ಲಂ ಶಾಸಕಿ ಬಿಂದು ಕೃಷ್ಣ ಅವರನ್ನು ಬಲವಂತವಾಗಿ ಅಪ್ಪಿಕೊಳ್ಳಲು ಯತ್ನಿಸಿದರು. ಶಾಸಕಾಂಗ ಸಭೆಗೆ ಆಗಮಿಸಿದ ಬಿಂದು ಕೃಷ್ಣ ಅವರು ಪಕ್ಷದ ಕಾರ್ಯಕರ್ತರು, ಮಾಧ್ಯಮ ಸ್ನೇಹಿತರತ್ತ ಕೈಬೀಸಿ ಮುಂದೆ ಬಂದರು. ಈ ವೇಳೆ ಎದುರಾದ ಚೆರಿಯನ್ ಫಿಲಿಪ್ ಅವರಿಗೆ ಹಸ್ತಲಾಘವ ಮಾಡಲು ಮುಂದಾದರು. ಆದರೆ, ಫಿಲಿಪ್ ಅವರು ಹಸ್ತಲಾಘವ ಬದಲಾಗಿ ಬಲವಂತವಾಗಿ ಬಿಂದು ಅವರನ್ನು ಅಪ್ಪಿಕೊಳ್ಳಲು ಯತ್ನಿಸಿದರು. ಕೈಮುಗಿದು ಫಿಲಿಪ್ ಅವರನ್ನು ತಡೆದ ಬಿಂದು, ಸಭೆ ನಡೆಯುತ್ತಿದ್ದ ಕೊಠಡಿಯತ್ತ ಹೆಜ್ಜೆ ಹಾಕಿದರು. ವಿಡಿಯೊ ವೈರಲ್ ಆಗುತ್ತಿದ್ದಂತೆ ಕಾಂಗ್ರೆಸ್ ನಾಯಕರು ಇರಸುಮುರಸಿಗೆ ಒಳಗಾದರು.

ದೀದಿ ಹಠದ ನಡುವೆಯೇ ಬಂಗಾಳ ವಿಧಾನಸಭೆ ವಿಸರ್ಜನೆ

ಕೋಲ್ಕೊತಾ: ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂಬ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿಯವರ ಹಠದ ನಡುವೆ ಪಶ್ಚಿಮ ಬಂಗಾಳ ವಿಧಾನಸಭೆಯನ್ನು ರಾಜ್ಯಪಾಲ ಆರ್.ಎನ್.ರವಿ ಅವರು ಗುರುವಾರ ವಿಸರ್ಜಿಸಿದ್ದಾರೆ.



ಚುನಾವಣಾ ಆಯೋಗ ಹೊಸ ಶಾಸನಸಭೆಯ ಶಾಸಕರ ಪಟ್ಟಿಯನ್ನು ಸಲ್ಲಿಸಿದ ಬಳಿಕ ಸಂವಿಧಾನದ 174 (2) ಅಡಿಯಲ್ಲಿ ಪಶ್ಚಿಮ ಬಂಗಾಳದ 15ನೇ ವಿಧಾನಸಭೆಯನ್ನು ರಾಜ್ಯಪಾಲರು ಅಧಿಕೃತವಾಗಿ ವಿಸರ್ಜಿಸಿದರು.

ವಿಧಾನಸಭೆ ವಿಸರ್ಜನೆಯೊಂದಿಗೆ ತೃಣಮೂಲ ಸರಕಾರದ ಅವಧಿ ಪೂರ್ಣಗೊಂಡಿದ್ದು, ಮುಖ್ಯಮಂತ್ರಿ ಸ್ಥಾನ ಕಾನೂನು ಮಾನ್ಯತೆ ಕಳೆದುಕೊಂಡಿದೆ. ಸಿಎಂ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದಿಲ್ಲ ಎಂಬ ಮಮತಾ ಬ್ಯಾನರ್ಜಿ ವಾದಕ್ಕೆ ಬೆಲೆ ಇಲ್ಲವಾಗಿದೆ. ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ, ''ನಮ್ಮ ಪಕ್ಷ ಚುನಾವಣೆಯಲ್ಲಿ ಸೋಲು ಅನುಭವಿಸಿಲ್ಲ, ಅಕ್ರಮ ನಡೆಸುವ ಮೂಲಕ ಬಿಜೆಪಿ ಗೆಲುವು ಸಾಧಿಸಿದೆ. ಹೀಗಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ. ಬೇಕಿದ್ದರೆ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಿ, ನನ್ನನ್ನು ವಜಾಗೊಳಿಸಲಿ,'' ಎಂದು ಮಮತಾ ಬ್ಯಾನರ್ಜಿ ಪಟ್ಟು ಹಿಡಿದಿದ್ದರು.

ಇಂದು ಬಿಜೆಪಿ ಶಾಸಕರ ಸಭೆ: ಗುರುವಾರ ತಡರಾತ್ರಿ ಕೋಲ್ಕೊತಾಗೆ ಆಗಮಿಸಿರುವ ಬಿಜೆಪಿ ಪಶ್ಚಿಮ ಬಂಗಾಳ ವೀಕ್ಷಕ ಅಮಿತ್ ಶಾ ಹಾಗೂ ಒಡಿಶಾ ಸಿಎಂ ಮೋಹನ್ ಚರಣ್ ಮಾಝಿ ಅವರು ಶುಕ್ರವಾರ ಪಕ್ಷದ ಚುನಾಯಿತ ಶಾಸಕರ ಸಭೆ ನಡೆಸಲಿದ್ದಾರೆ. ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಶಾಸಕರ ಅಭಿಪ್ರಾಯ ಆಲಿಸಿದ ಬಳಿಕ ಹೊಸ ನಾಯಕನ ಹೆಸರು ಘೋಷಣೆ ಮಾಡಲಿದ್ದಾರೆ. ಬಳಿಕ ರಾಜ್ಯಪಾಲರನ್ನು ಭೇಟಿಯಾಗಲಿರುವ ಶಾಸಕಾಂಗ ಪಕ್ಷದ ನಾಯಕ ಸರಕಾರ ರಚನೆಗೆ ಹಕ್ಕು ಮಂಡಿಸಲಿದ್ದಾರೆ. ಮೇ 9 ರಂದು ಬ್ರಿಗೇಡ್ ಮೈದಾನದಲ್ಲಿ ನೂತನ ಮುಖ್ಯಮಂತ್ರಿ, ಸಚಿವರ ಪ್ರಮಾಣ ವಚನ ಕಾರ್ಯಕ್ರಮ ನಡೆಯಲಿದೆ.

ಮುಖ್ಯಮಂತ್ರಿ ಹುದ್ದೆಗೆ ಸುವೇಂದು ಅಧಿಕಾರಿ ಜತೆಗೆ ರೂಪಾ ಗಂಗೂಲಿ, ಅಗ್ನಿಮಿತ್ರಾ ಪೌಲ್ ಅವರ ಹೆಸರು ಮುಖ್ಯವಾಗಿ ಕೇಳಿ ಬಂದಿವೆ. ನಿರ್ಗಮಿತ ಮಹಿಳಾ ಸಿಎಂ ಬದಲಿಗೆ ಮಹಿಳೆಯನ್ನು ಮುಖ್ಯಮಂತ್ರಿ ಹುದ್ದೆಯಲ್ಲಿ ಕೂರಿಸುವ ಕುರಿತು ಚಿಂತನೆ ನಡೆದಿದೆ. ಜತೆಗೆ ಬಿಜೆಪಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ, ಮಾಜಿ ಅಧ್ಯಕ್ಷ ದಿಲೀಪ್ ಘೋಷ್ ಹೆಸರು ಸಹ ಕೇಳಿ ಬಂದಿವೆ.

ವಿಸರ್ಜಿತ ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿದ್ದ ಸುವೇಂದು ಅಧಿಕಾರಿ ಮುಖ್ಯಮಂತ್ರಿ ಹುದ್ದೆಗೆ ಸೂಕ್ತ ಎಂಬ ಅಭಿಪ್ರಾಯ ಕೇಳಿ ಬಂದಿದೆ. ಮಮತಾ ಬ್ಯಾನರ್ಜಿ ಅವರನ್ನು ಎರಡು ಬಾರಿ ಸೋಲಿಸಿರುವ ಅವರು ಟಿಎಂಸಿಯ ತಂತ್ರಗಾರಿಕೆ ಅರಿತಿದ್ದಾರೆ. ತೃಣಮೂಲ ಕಾಂಗ್ರೆಸ್‌ನ ಪ್ರತಿರೋಧ ನಿಗ್ರಹಿಸಲು ಸುವೇಂದು ಸೂಕ್ತ ಎಂದು ವಾದಿಸಲಾಗಿದೆ.

24 ಗಂಟೆಯಲ್ಲಿ 2ನೇ ಬಾರಿ ರಾಜ್ಯಪಾಲರ ಭೇಟಿ | ಏರಿಕೆ ಕಾಣದ ಶಾಸಕರ ಸಂಖ್ಯಾಬಲ

ಮ್ಯಾಜಿಕ್ ನಂಬರ್‌ಗೆ ವಿಜಯ್ ಪರದಾಟ

ಚೆನ್ನೈ: ತಮಿಳುನಾಡಿನಲ್ಲಿ ಸರಕಾರ ರಚನೆ ಕಗ್ಗಂಟು ಯಥಾಸ್ಥಿತಿಯಲ್ಲಿ ಮುಂದುವರಿದಿದೆ. ಬಹುಮತದ ಗಡಿ ಮುಟ್ಟಲು ಕಸರತ್ತು ನಡೆಸಿರುವ ಟಿವಿಕೆ ಮುಖ್ಯಸ್ಥ ವಿಜಯ್ ಅವರಿಗೆ ಪ್ರಮಾಣ ವಚನಕ್ಕೂ ಮೊದಲು 118 ಶಾಸಕರ ಸಂಖ್ಯಾಬಲ ತೋರಿಸುವಂತೆ ರಾಜ್ಯಪಾಲರು ತಾಕೀತು ಮಾಡಿದ್ದಾರೆ. ಹೀಗಾಗಿ ಹೊಸ ಸರಕಾರ ರಚನೆ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗಲಿದೆ.

ಕಳೆದ 24 ಗಂಟೆ ಅವಧಿಯಲ್ಲಿ ಎರಡನೇ ಬಾರಿ ಲೋಕಭವನಕ್ಕೆ ಭೇಟಿ ನೀಡಿದ ವಿಜಯ್ ಅವರು ಸರಕಾರ ರಚನೆ ಸಂಬಂಧ ಸುದೀರ್ಘ 45 ನಿಮಿಷ ಮಾತುಕತೆ ನಡೆಸಿದರು.

''ಕಾಂಗ್ರೆಸ್ ಸೇರಿದಂತೆ ಕೆಲವು ಪಕ್ಷಗಳು ಸರಕಾರ ರಚನೆಗೆ ಬೆಂಬಲ ನೀಡಲು ಮುಂದೆ ಬಂದಿವೆ. ನಮ್ಮ ಪಕ್ಷಕ್ಕೆ ಸರಕಾರ ರಚನೆಗೆ ಅವಕಾಶ ಮಾಡಿಕೊಡಿ. ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸುವೆ,'' ಎಂದು ರಾಜ್ಯಪಾಲರಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದರು.

ಬದಲಾಗದ ಗವರ್ನರ್ ನಿಲುವು

ವಿಜಯ್ ಅಹವಾಲು ಆಲಿಸಿದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಆರ್ಲೇಕರ್, ''ಸರಕಾರ ರಚನೆಗೆ ಬೇಕಾದ ಬಹುಮತದ ಸಂಖ್ಯೆ ನಿಮ್ಮ ಬಳಿ ಇಲ್ಲ, ಸ್ಥಿರ ಸರಕಾರ ರಚನೆ ಉದ್ದೇಶದಿಂದ ನಿಮಗೆ ಮತ್ತೊಂದು ಅವಕಾಶ ನೀಡುವೆ. 118 ಶಾಸಕರ ಸಹಿಯುಳ್ಳ ಪತ್ರದೊಂದಿಗೆ ಬನ್ನಿ. ಅಗತ್ಯ ಸಂಖ್ಯಾಬಲ ತೋರಿಸಿದರೆ ಸರಕಾರ ರಚನೆಗೆ ಆಹ್ವಾನ ನೀಡುವೆ. ನಿಮ್ಮ ಪಕ್ಷ ಬಿಟ್ಟು ಬೇರೆ ಯಾವುದೇ ಮೈತ್ರಿಕೂಟವನ್ನು ಸರಕಾರ ರಚನೆಗೆ ಆಹ್ವಾನಿಸುವುದಿಲ್ಲ,'' ಎಂದು ಭರವಸೆ ನೀಡಿದರು.

ರಾಜ್ಯಪಾಲರ ವಿವರಣೆ ಬಳಿಕ ಬಂದ ದಾರಿಗೆ ಸುಂಕ ಇಲ್ಲದೆ ವಿಜಯ್ ವಾಪಸ್ ತೆರಳಿದರು. ಬುಧವಾರ ರಾಜ್ಯಪಾಲರನ್ನು ಭೇಟಿಯಾಗಿದ್ದ ವಿಜಯ್ 112 ಸಂಖ್ಯಾಬಲ ತೋರಿಸಿ, ಸರಕಾರ ರಚನೆಗೆ ಹಕ್ಕು ಮಂಡಿಸಿದ್ದರು. 118 ಶಾಸಕರ ಬೆಂಬಲದ ಪತ್ರ ಸಲ್ಲಿಸುವಂತೆ ರಾಜ್ಯಪಾಲರು ಸೂಚಿಸಿದ್ದರು.

6 ತಿಂಗಳು ಸಮಯ

ರಾಜ್ಯದಲ್ಲಿ ನಟ ವಿಜಯ್ ಅವರು ಟಿವಿಕೆ ಸರಕಾರ ರಚಿಸಲಿ. ಯಾವುದೇ ಕಾರಣಕ್ಕೂ ಸರಕಾರವನ್ನು ಅಲುಗಾಡಿಸುವುದಿಲ್ಲ, ಆಡಳಿತ ವೈಖರಿಯನ್ನು ಆರು ತಿಂಗಳು ಕಾದು ನೋಡುತ್ತೇವೆ. ಅಲ್ಲಿಯವರೆಗೆ ರಚನಾತ್ಮಕ ಪ್ರತಿಪಕ್ಷವಾಗಿ ಕಾರ್ಯ ನಿರ್ವಹಿಸುತ್ತೇವೆ. ಜನ ವಿರೋಧಿ ನೀತಿ ಅನುಸರಿಸಿದರೆ ಹೋರಾಟಕ್ಕೆ ಇಳಿಯುತ್ತೇವೆ

- ಎಂ.ಕೆ.ಸ್ಟಾಲಿನ್, ಮಾಜಿ ಸಿಎಂ

ಎಡಪಕ್ಷಗಳ ಬೆಂಬಲ ಕೋರಿದ ಟಿವಿಕೆ

ಬಹುಮತದ ಸಂಖ್ಯಾಬಲದೊಂದಿಗೆ ಬನ್ನಿ ಎಂಬ ರಾಜ್ಯಪಾಲರ ವಿವರಣೆ ಬಳಿಕ ಟಿವಿಕೆ ಮುಖಂಡರು ಎಡಪಕ್ಷಗಳ ಬೆಂಬಲ ಕೋರಿದರು. ಟಿವಿಕೆ ನಾಯಕ ಸಿ.ಟಿ.ಆರ್.ನಿರ್ಮಲ್ ಕುಮಾರ್ ಅವರು ಗುರುವಾರ ಸಿಪಿಐ ನಾಯಕ ಎಂ.ವೀರಪಾಡ್ಯನ್, ಸಿಪಿಐ(ಎಂ) ನಾಯಕ ಪಿ. ಷಣ್ಮುಗಂ ಅವರನ್ನು ಭೇಟಿಯಾಗಿ ಸರಕಾರ ರಚನೆಗೆ ಬೆಂಬಲ ನೀಡುವಂತೆ ಕೋರಿದರು. ಶುಕ್ರವಾರ ನಡೆಯುವ ಸಭೆಯಲ್ಲಿ ಸಮಾಲೋಚಿಸಿ ನಿರ್ಧಾರ ತಿಳಿಸುವುದಾಗಿ ಎಡಪಕ್ಷಗಳ ಮುಖಂಡರು ಭರವಸೆ ನೀಡಿದ್ದಾರೆ. ಇಬ್ಬರು ಶಾಸಕರನ್ನು ಹೊಂದಿರುವ ವಿದುತಲೈ ಚಿರುತೈಗಲ್ ಕಚ್ಚಿ (ವಿಸಿಕೆ) ಪಕ್ಷ ಬೆಂಬಲ ಕೊಡುವ ವಿಚಾರದಲ್ಲಿ ಕಾದು ನೋಡುವ ತಂತ್ರ ಅನುಸರಿಸಿದೆ.

ರಾಜ್ಯಪಾಲರ ಲೆಕ್ಕಾಚಾರವೇನು?

ಕರ್ನಾಟಕದ ಮಾಜಿ ಸಿಎಂ ಎಸ್.ಆರ್.ಬೊಮ್ಮಾಯಿ ಪ್ರಕರಣದ ತೀರ್ಪಿನಂತೆ ಅಲ್ಪಮತದ ಪಕ್ಷ ಅಥವಾ ಮೈತ್ರಿಕೂಟ ಸರಕಾರ ರಚಿಸಿದಲ್ಲಿ ವಿಧಾನಸಭೆಯಲ್ಲಿ ಬಹುಮತ ಸಾಬೀತಿಗೆ ಅವಕಾಶ ನೀಡಬೇಕು. ತಮಿಳುನಾಡಿನಲ್ಲಿ 112 ಶಾಸಕರ ಬಲದೊಂದಿಗೆ ಎರಡು ಬಾರಿ ಹಕ್ಕು ಮಂಡಿಸಿದರೂ ಸರಕಾರ ರಚನೆಗೆ ಅಗತ್ಯ ಬಹುಮತ ಸಂಖ್ಯೆ ತೋರಿಸುವಂತೆ ರಾಜ್ಯಪಾಲರು ನಿರ್ದೇಶನ ನೀಡಿರುವುದು ಕುತೂಹಲ ಮೂಡಿಸಿದೆ. ಸಂಖ್ಯಾಬಲ ಇಲ್ಲದೆ ಸರಕಾರ ರಚನೆಗೆ ಅವಕಾಶ ನೀಡಿದರೆ ಅಸ್ಥಿರತೆಗೆ ದಾರಿಯಾಗಬಹುದು ಎಂಬ ಲೆಕ್ಕಾಚಾರದಲ್ಲಿ ರಾಜ್ಯಪಾಲರು 118 ಶಾಸಕರ ಸಹಿ ಪತ್ರ ಕೇಳಿದ್ದಾರೆ ಎಂದು ರಾಜಭವನ ಗುರುವಾರ ತಿಳಿಸಿದೆ. ಅದಕ್ಕೆ 2018ರ ಕರ್ನಾಟಕ, 2019ರ ಮಹಾರಾಷ್ಟ್ರದ ಉದಾಹರಣೆ ನೀಡಿದೆ. 2018ರಲ್ಲಿ ಅತ್ಯಧಿಕ ಸ್ಥಾನ ಗಳಿಸಿದ್ದ ಬಿಜೆಪಿಗೆ ಸರಕಾರ ರಚಿಸಲು ಅವಕಾಶ ನೀಡಲಾಯಿತು. ಆದರೆ, ಬಹುಮತ ಸಾಬೀತುಪಡಿಸಲು ಸಾಧ್ಯವಾಗದೆ ಸರಕಾರ ಬಿದ್ದು ಹೋಯಿತು. 2019ರಲ್ಲಿ ಮಹಾರಾಷ್ಟ್ರ ಚುನಾವಣೆಯಲ್ಲಿ ಅಧಿಕ ಸ್ಥಾನ ಪಡೆದಿದ್ದ ಬಿಜೆಪಿಯನ್ನು ಸರಕಾರ ರಚಿಸಲು ರಾಜ್ಯಪಾಲರು ಆಹ್ವಾನಿಸಿದರು. ಬಹುಮತ ಸಾಬೀತುಪಡಿಸಲು ವಿಫಲವಾದ ಸರಕಾರ ಪತನವಾದ ಉದಾಹರಣೆ ನೀಡಿದೆ.

ರೆಸಾರ್ಟ್‌ಗೆ ಶಾಸಕರು

ಸರಕಾರ ರಚನೆಗೆ ಶಾಸಕರ ಬಲ ಹೊಂದಿಸಲು ಟಿವಿಕೆ ಪ್ರಯತ್ನದ ನಡುವೆ ತಮಿಳುನಾಡಿನಲ್ಲಿ ರೆಸಾರ್ಟ್ ರಾಜಕೀಯ ಆರಂಭವಾಗಿದೆ. ಕುದುರೆ ವ್ಯಾಪಾರದ ಭೀತಿಯಲ್ಲಿ ಎಐಎಡಿಎಂಕೆ ಶಾಸಕರನ್ನು ಪುದುಚೇರಿ ರೆಸಾರ್ಟ್‌ಗೆ ಶಿಫ್ಟ್ ಮಾಡಲಾಗಿದೆ. ಟಿವಿಕೆಗೆ ಬೆಂಬಲ ನೀಡುವ ವಿಷಯದಲ್ಲಿ ಭಿನ್ನಮತ ತಲೆದೋರಿದ ಹಿನ್ನೆಲೆಯಲ್ಲಿ ಶಾಸಕರನ್ನು ಹಿಡಿದಿಟ್ಟುಕೊಳ್ಳಲು ರೆಸಾರ್ಟ್‌ಗೆ ಸ್ಥಳಾಂತರಿಸಲಾಗಿದೆ ಎಂದು ವರದಿಯಾಗಿದೆ. 20ಕ್ಕೂ ಹೆಚ್ಚು ಶಾಸಕರು ಟಿವಿಕೆಗೆ ಬೆಂಬಲ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಡಿಎಂಕೆ-ಎಐಎಡಿಎಂಕೆ ಮೈತ್ರಿ ಇಲ್ಲ

''ಉತ್ತರ-ದಕ್ಷಿಣ ಧ್ರುವದಂತಿರುವ ಡಿಎಂಕೆ-ಎಐಎಡಿಎಂಕೆ ಸರಕಾರ ರಚಿಸುವ ಮಾತೇ ಇಲ್ಲ, ಈ ಸಂಬಂಧ ಯಾವುದೇ ಮಾತುಕತೆ ನಡೆದಿಲ್ಲ, ಮಾಧ್ಯಮಗಳ ವರದಿಯಂತೆ ಎರಡು ಪಕ್ಷಗಳು ಸರಕಾರ ರಚಿಸುವ ಸಾಧ್ಯತೆ ಇಲ್ಲವೇ ಇಲ್ಲ,'' ಎಂದು ಉಭಯ ಪಕ್ಷಗಳ ಮುಖಂಡರು ಸ್ಪಷ್ಟಪಡಿಸಿದ್ದಾರೆ.

ಸಾಮೂಹಿಕ ರಾಜೀನಾಮೆ ಬೆದರಿಕೆ

ಒಂದು ವೇಳೆ ಡಿಎಂಕೆ ಮತ್ತು ಎಐಎಡಿಎಂಕೆ ಸರಕಾರ ರಚಿಸಲು ಮುಂದಾದರೆ ತಮ್ಮ ಪಕ್ಷದ ಎಲ್ಲ 107 ಶಾಸಕರು ರಾಜೀನಾಮೆ ನೀಡಲಿದ್ದಾರೆ ಎಂದು ಟಿವಿಕೆ ಪಕ್ಷದ ಮೂಲಗಳು ತಿಳಿಸಿವೆ. ಸರಕಾರ ರಚಿಸಲು ವಿಜಯ್ ಅವರಿಗೆ ಆಹ್ವಾನ ನೀಡುವಲ್ಲಿ ರಾಜ್ಯಪಾಲರು ವಿಳಂಬ ಮಾಡುತ್ತಿರುವುದು ಬಿಕ್ಕಟ್ಟಿಗೆ ಕಾರಣವಾಗಿದ್ದು, ಈ ಬೆಳವಣಿಗೆಯು ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ.

ಕಾಂಗ್ರೆಸ್, ಟಿವಿಕೆ ಪ್ರತಿಭಟನೆ

ಸರಕಾರ ರಚಿಸಲು ವಿಜಯ್‌ಗೆ ಅವಕಾಶ ನೀಡದ ರಾಜ್ಯಪಾಲರ ನಡೆ ವಿರೋಧಿಸಿ ಟಿವಿಕೆ ಹಾಗೂ ಕಾಂಗ್ರೆಸ್ ಪಕ್ಷಗಳು ರಾಜ್ಯದ ವಿವಿಧೆಡೆ ಪ್ರತಿಭಟನೆ ನಡೆಸಿವೆ. ಚೆನ್ನೈನ ಲೋಕಭವನದ ಮುಂದೆ ಪ್ರತಿಭಟನೆ ನಡೆಸಿದ ಟಿವಿಕೆ ಕಾರ್ಯಕರ್ತರು, ವಿಜಯ್ ಅವರನ್ನು ಸರಕಾರ ರಚಿಸಲು ಆಹ್ವಾನಿಸುವಂತೆ ಆಗ್ರಹಿಸಿದರು. ''ರಾಜ್ಯಪಾಲರು ಕೇಂದ್ರದ ಆಣತಿಯಂತೆ ನಡೆದುಕೊಳ್ಳುತ್ತಿದ್ದಾರೆ. ಸಂವಿಧಾನದ ನೀತಿ ನಿಯಮ ಮೀರಿ ವರ್ತಿಸುತ್ತಿದ್ದಾರೆ. ರಾಜ್ಯದ ಜನರ ತೀರ್ಪಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ,'' ಎಂದು ತಮಿಳುನಾಡು ಕಾಂಗ್ರೆಸ್ ಉಸ್ತುವಾರಿ ಗಿರೀಶ್ ಚೋಡಂಕರ್ ಆಪಾದಿಸಿದ್ದಾರೆ. ಸರಕಾರ ರಚಿಸಲು ಟಿವಿಕೆಗೆ ಅವಕಾಶ ನೀಡದ ರಾಜ್ಯಪಾಲರ ನಡೆ ಖಂಡಿಸಿರುವ ವಿಸಿಕೆ ಮುಖ್ಯಸ್ಥ ಟಿ.ತಿರುಮಾಲವನ್, ''ರಾಜ್ಯಪಾಲರು ಸಂವಿಧಾನದ ಪ್ರಕಾರ ನಡೆದುಕೊಳ್ಳಬೇಕು. ಬಿಜೆಪಿ ನಾಯಕರ ಚಿತಾವಣೆಯಂತೆ ರಾಜ್ಯದ ಜನ ನೀಡಿದ ಜನಾದೇಶ ಧಿಕ್ಕರಿಸಬಾರದು,'' ಎಂದು ಟೀಕಿಸಿದ್ದಾರೆ.

ನಕಲಿ ನಂಬರ್ ಪ್ಲೇಟ್ ಇದ್ದ ಬೈಕ್ ಬಳಕೆ

ಸುವೇಂದು ಆಪ್ತನ ಹತ್ಯೆ: 3 ದಿನ ಚಲನವಲನ ಗಮನಿಸಿದ್ದ ಹಂತಕರು

ಘಟನಾ ಸ್ಥಳದಲ್ಲಿ ವಿಧಿವಿಜ್ಞಾನ ತಜ್ಞರಿಂದ ಪರಿಶೀಲನೆ.

ದೀದಿ ಸೋಲಿಸಿದ್ದಕ್ಕೆ ಹತ್ಯೆ

''ಭವಾನಿಪುರದಲ್ಲಿ ಮಮತಾ ಬ್ಯಾನರ್ಜಿ ಸೋಲಿಸಿದ್ದಕ್ಕೆ ನನ್ನ ಆಪ್ತ ಚಂದ್ರನಾಥ್ ರಥ್ ಅವರನ್ನು ಕೊಲ್ಲಲಾಗಿದೆ,'' ಎಂದು ಸುವೇಂದು ಅಧಿಕಾರಿ ಆರೋಪಿಸಿದ್ದಾರೆ. ''ಆರೋಪಿಗಳನ್ನು ಬಂಧಿಸಿ, ಶಿಕ್ಷಿಸಬೇಕು ಎಂದು ಮೃತನ ಕುಟುಂಬ ಆಗ್ರಹಿಸಿದೆ. ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಮೂವರು ಶಂಕಿತರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಎಸ್‌ಐಟಿ ಹಂತಕರನ್ನು ಬಂಧಿಸಲಿದೆ,'' ಎಂದು ಅಧಿಕಾರಿ ಹೇಳಿದರು.

ಕೋಲ್ಕೊತಾ: ವಿಧಾನಸಭೆ ಫಲಿತಾಂಶದ ಬಳಿಕ ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರ ಭುಗಿಲೆದ್ದಿದೆ. ಕಳೆದ ಮೂರು ದಿನಗಳಿಂದ ಚುನಾವಣೋತ್ತರ ಹಿಂಸಾಚಾರದಲ್ಲಿ ಮೂವರು ಬಲಿಯಾಗಿದ್ದಾರೆ.

ಬುಧವಾರ ರಾತ್ರಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಆಪ್ತ ಚಂದ್ರನಾಥ್ ರಥ್ ಅವರನ್ನು ಗುಂಡಿಕ್ಕಿ ಹತ್ಯೆಗೈದ ಬಳಿಕ ರಾಜ್ಯದಲ್ಲಿ ಭೀತಿಯ ವಾತಾವರಣ ಸೃಷ್ಟಿಯಾಗಿದೆ. ಚಂದ್ರನಾಥ್ ರಥ್ ಹತ್ಯೆ ತನಿಖೆಗೆ ವಿಶೇಷ ತಂಡ (ಎಸ್‌ಐಟಿ) ರಚಿಸಲಾಗಿದೆ. ಹಂತಕರ ಪತ್ತೆಗೆ ಕಾರ್ಯಾಚರಣೆ ನಡೆಸಿರುವ ಪೊಲೀಸರು, ಘಟನಾ ಸ್ಥಳದಲ್ಲಿನ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಿದ್ದಾರೆ.

ಹತ್ಯೆ ಸ್ಥಳದಲ್ಲಿ ಪರಿಶೀಲನೆ ನಡೆಸಿರುವ ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು, ಕೃತ್ಯಕ್ಕೆ ಗ್ಲಾಕ್ 47 ಎಕ್ಸ್ ಪಿಸ್ತೂಲ್ ಬಳಸಿರಬಹುದು. ವೃತ್ತಿಪರ ಶೂಟರ್‌ಗಳು ದಾಳಿಯಲ್ಲಿ ಭಾಗಿಯಾಗಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. ಗುರುತು ಮರೆಮಾಚಲು ನಕಲಿ ನಂಬರ್ ಪ್ಲೇಟ್ ಇದ್ದ ಬೈಕ್‌ಗಳನ್ನು ದುಷ್ಕರ್ಮಿಗಳು ಬಳಸಿದ್ದಾರೆ ಎಂದು ತಿಳಿದು ಬಂದಿದೆ.

ಬುಧವಾರ ರಾತ್ರಿ 10.30ರ ಸಮಯದಲ್ಲಿ ಕೋಲ್ಕೊತಾದಿಂದ ಮನೆಗೆ ತೆರಳುತ್ತಿದ್ದ ಚಂದ್ರನಾಥ್ ರಥ್ ಅವರನ್ನು ಮಧ್ಯಮಗ್ರಾಮದ ಬಳಿ ತಡೆದ ದುಷ್ಕರ್ಮಿಗಳ ಗುಂಪು 10 ಸುತ್ತು ಗುಂಡು ಹಾರಿಸಿದೆ. 4 ಗುಂಡುಗಳು ಚಂದ್ರನಾಥ್ ರಥ್ ದೇಹ ಸೀಳಿವೆ. ಹತ್ಯೆ ಬಳಿಕ ಹಂತಕರು ಸ್ಥಳದಿಂದ ಪರಾರಿಯಾಗಿದ್ದಾರೆ. ಮೂರು ದಿನಗಳಿಂದ ಅವರ ಚಲನವಲನ ಕುರಿತು ಹಂತಕರ ತಂಡ ನಿಗಾ ವಹಿಸಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಖಂಡಿಸಿ ಬಿಜೆಪಿ ರಾಜ್ಯದ ಹಲವು ಕಡೆ ಪ್ರತಿಭಟನೆ ನಡೆಸಿತು.

ವರ್ಷ ಪೂರೈಸಿದ ಆಪರೇಷನ್ ಸಿಂದೂರ

ಹೊಸದಿಲ್ಲಿ: ಜಮ್ಮು -ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕಿಸ್ತಾನ ಕೃಪಾಪೋಷಿತ ಉಗ್ರರು ನಡೆಸಿದ ನರಮೇಧಕ್ಕೆ ಪ್ರತೀಕಾರವಾಗಿ ಭಾರತೀಯ ಸಶಸ್ತ್ರ ಪಡೆಗಳು ನಡೆಸಿದ ಕೆಚ್ಚೆದೆಯ 'ಆಪರೇಷನ್ ಸಿಂದೂರ' ಕಾರ್ಯಾಚರಣೆ ಮೇ 7ರ ಗುರುವಾರ ಒಂದು ವರ್ಷ ಪೂರೈಸಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಕೇಂದ್ರ ಸಚಿವರು ಸಾಮಾಜಿಕ ಜಾಲತಾಣಗಳ ತಮ್ಮ ಖಾತೆಗಳ ಪ್ರೊಫೈಲ್ ಫೋಟೊವನ್ನು 'ಆಪರೇಷನ್ ಸಿಂದೂರ' ಲೋಗೊದೊಂದಿಗೆ ಬದಲಿಸಿಕೊಳ್ಳುವ ಮೂಲಕ ಗೌರವ ಅರ್ಪಿಸಿದರು.

''ಭಯೋತ್ಪಾದನೆ ವಿರುದ್ಧ ಭಾರತದ ನಿಲುವು ಎಷ್ಟು ಕಠಿಣ ಮತ್ತು ನಿಖರವಾಗಿತ್ತು ಎಂಬುದನ್ನು ಸೇನಾ ಕಾರ್ಯಾಚರಣೆ ದೃಢಪಡಿಸಿದೆ. 4 ದಿನದ ಕಾರ್ಯಾಚರಣೆ ಉಗ್ರರ ಹುಟ್ಟಡಗಿಸಿತು. ದೇಶದ ಭದ್ರತೆ, ಸಾರ್ವಭೌಮತ್ವ ಮತ್ತು ನಾಗರಿಕರ ರಕ್ಷಣೆಗೆ ಸರಕಾರ ಅಚಲ ಬದ್ಧತೆ ಹೊಂದಿದೆ ಎಂಬುದನ್ನು ಸಾಬೀತುಪಡಿಸಿತು,'' ಎಂದು ಮೋದಿ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಸಾಟಿ ಇಲ್ಲದ ನಿಖರತೆ: ''ದೇಶದಲ್ಲಿ ಇನ್ನು ಮುಂದೆ ಉಗ್ರ ನೆಲೆಗಳ ಮೇಲಿನ ದಾಳಿ ಸಾಮಾನ್ಯವಾಗಿರಲಿದೆ. ದೇಶದ ತಂಟೆಗೆ ಬಂದರೆ ಪ್ರತೀಕಾರ ತೀರಿಸಿಕೊಳ್ಳಲಾಗುವುದು. ಎಲ್ಲೇ ಅಡಗಿದರೂ ಹೊರಗೆಳೆದು ಸದೆಬಡಿಯಲಾಗುವುದು,'' ಎಂದು ಮಿಲಿಟರಿ ಕಾರ್ಯಾಚರಣೆ ಮಹಾ ನಿರ್ದೇಶಕ (ಡಿಜಿಎಂಒ) ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#59, ರಿಚ್‌ಮಂಡ್ ರಸ್ತೆ (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ), ಬೆಂಗಳೂರು-25. ದೂ: 080-25584102 / 25594893
ಇಮೇಲ್ : eecontractksphc@gmail.com ವೆಬ್‌ಸೈಟ್: www.ksphc.org

ಸಂಖ್ಯೆ: ಪಿಹೆಚ್‌ಸಿ/ಸಿಎನ್‌ಟಿ/ಎಂಪ್ಯಾನೆಲ್‌ಮೆಂಟ್/ಟಿಎನ್‌ಡಿ/2026-27/04/170 ದಿನಾಂಕ: 07.05.2026

ಆಸಕ್ತಿ ವ್ಯಕ್ತಪಡಿಸುವಿಕೆಗೆ ಆಹ್ವಾನ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ)

ಕೆಲಸದ ಹೆಸರು: ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಮಣ್ಣು ಪರೀಕ್ಷೆಗಾಗಿ (ಎಸ್‌ಬಿಸಿ – ಸುರಕ್ಷಿತ ಬೇರಿಂಗ್ ಸಾಮರ್ಥ್ಯ) ಸಲಹಾ ಸೇವೆಗಳು.

01 ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಮಣ್ಣು ಪರೀಕ್ಷೆಗಾಗಿ (ಎಸ್‌ಬಿಸಿ – ಸುರಕ್ಷಿತ ಬೇರಿಂಗ್ ಸಾಮರ್ಥ್ಯ) ಸಲಹಾ ಸೇವೆಗಳ ಕೆಲಸಕ್ಕಾಗಿ ಅರ್ಹ ಸಂಸ್ಥೆಗಳು / ಏಜೆನ್ಸಿಗಳಿಂದ ಕೆಎಸ್‌ಪಿಎಚ್ & ಐಡಿಸಿಎಲ್ ಅವರು ಆನ್‌ಲೈನ್ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಲಾಗಿದೆ.
02 ಟೆಂಡರ್ ಶುಲ್ಕ, ಟೆಂಡರ್ ದಾಖಲೆಗಳು ಇತ್ಯಾದಿ ವಿವರಗಳು ದಿನಾಂಕ: 11.05.2026 ರಿಂದ https://kppp.karnataka.gov.in ಪೋರ್ಟಲ್‌ನಲ್ಲಿ ಲಭ್ಯವಿದೆ.
03 ಈ ಇಓಐನಲ್ಲಿ ನಿಗದಿಪಡಿಸಿದ ನಿಯಮಗಳ ಪ್ರಕಾರ ಮಣ್ಣು ಪರೀಕ್ಷೆಗಾಗಿ (ಎಸ್‌ಬಿಸಿ-ಸುರಕ್ಷಿತ ಬೇರಿಂಗ್ ಸಾಮರ್ಥ್ಯ) ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಸಲ್ಲಿಸಲು ಕೆಎಸ್‌ಪಿಎಚ್&ಐಡಿಸಿಎಲ್ ಅವರು ಆಸಕ್ತ ಸಲಹಾ ಸಂಸ್ಥೆಗಳು / ಸಂಸ್ಥೆಗಳು / ಏಜೆನ್ಸಿಗಳನ್ನು ಆಹ್ವಾನಿಸಲಾಗಿದೆ.
04 ಈ ಇಓಐಗೆ ಪ್ರತಿಕ್ರಿಯೆಯಾಗಿ ದಾಖಲೆಗಳನ್ನು ಸಲ್ಲಿಸುವ / ಅಪ್‌ಲೋಡ್ ಮಾಡುವ ಮೊದಲು ಸಮಾಲೋಚನಾ ಸಂಸ್ಥೆಗಳು / ಸಂಸ್ಥೆಗಳು ಆಸಕ್ತಿ ವ್ಯಕ್ತಪಡಿಸುವಿಕೆ (ಇಓಐ) ದಾಖಲೆಯನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಲು ಸೂಚಿಸಿದೆ.
05 ಇಓಐ ದಾಖಲೆಯನ್ನು ವರ್ಗಾಯಿಸಲಾಗುವುದಿಲ್ಲ.
06 ಇಓಐ ಗೆ (ಸರಿಯಾಗಿ ಸಹಿ ಮಾಡಿರುವ) ಪ್ರತಿಕ್ರಿಯೆಗಳ ಹಾರ್ಡ್ ಪ್ರತಿಯನ್ನು ಸ್ವೀಕೃತಿಯ ಕೊನೆಯ ದಿನಾಂಕದಂದು ಅಥವಾ ಅದಕ್ಕೂ ಮೊದಲು **ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಗುತ್ತಿಗೆಗಳ ವಿಭಾಗ, ಕೆಎಸ್‌ಪಿಹೆಚ್& ಐಡಿಸಿಎಲ್, ಬೆಂಗಳೂರು-560025** ಇಲ್ಲಿಗೆ ಸಲ್ಲಿಸಬಹುದು.
07 ಕೆಎಸ್‌ಪಿಹೆಚ್&ಐಡಿಸಿಎಲ್ ರವರು ಯಾವುದೇ ಕಾರಣ ನೀಡದೇ ಎಲ್ಲಾ ಪ್ರತಿಕ್ರಿಯೆಗಳನ್ನು ಸ್ವೀಕರಿಸುವ/ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.

ಸೂಚನೆ: ಉಳಿದಂತೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ / ಮಾರ್ಪಾಡುಗಳಿದ್ದಲ್ಲಿ ಕೇವಲ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

DIPR/CP/YC/547/2026-27 ಸಹಿ/- ಕಾರ್ಯಪಾಲಕ ಇಂಜಿನಿಯರ್ – ಗುತ್ತಿಗೆಗಳು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) (ಕೆಪಿಪಿ ಪೋರ್ಟಲ್ ಮೂಲಕ)

"ಬೆವಿಕಂ, ವಿವಿಧ ಫೀಡರ್‌ಗಳಲ್ಲಿ ಅಪಾಯಕಾರಿ ಸ್ಥಳಗಳಲ್ಲಿನ ಪ್ರಸ್ತುತವಿರುವ ಎಲ್‌ಟಿ ಓವರ್‌ಹೆಡ್ ಮಾರ್ಗಗಳನ್ನು ಎಲ್‌ಟಿ ಏರಿಯಲ್ ಬಂಚ್ಡ್ (ಎಬಿ) ಕೇಬಲ್ ಆಗಿ ಪರಿವರ್ತನೆ ಮಾಡುವ ಕಾಮಗಾರಿಗಳನ್ನು ವಿದ್ಯುತ್ ವ್ಯವಸ್ಥೆ ಬಲವರ್ಧನೆ ಅಡಿಯಲ್ಲಿ ಶೇಕಡಾವಾರು ಕೋಟಿಂಗ್ ಆಧಾರದಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ".

ಕ್ರ. ಸಂ.	ಉಪ ವಿಭಾಗದ ಹೆಸರು	ವಿಚಾರಣೆ ಸಂಖ್ಯೆಗಳು
1.	ತುಮಕೂರು ಸಿಎಸ್‌ಡಿ-1	BESCOM/2026-27/EL/WORK_INDENT1073
2.	ತುಮಕೂರು ಸಿಎಸ್‌ಡಿ-2	BESCOM/2026-27/EL/WORK_INDENT1074
3.	ಕೊರಟಗೆರೆ	BESCOM/2026-27/EL/WORK_INDENT1075
4.	ಸಿ-7 ಉಪವಿಭಾಗ, ಹೆಬ್ಬಾಳ ವಿಭಾಗ	BESCOM/2026-27/EL/WORK_INDENT1076

(1) ಬಿಡ್ ದಸ್ತಾವೇಜುಗಳ ಲಭ್ಯತೆ: **11-05-2026** ನಂತರದಲ್ಲಿ (2) ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **11-06-2026, 15:00** ಗಂಟೆ. (3) ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: **12-06-2026, 15:30** ಗಂಟೆಗೆ (4) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **20-05-2026, 11:00** ಗಂಟೆಗೆ. ಸ್ಥಳ: ಸಮ್ಮೇಳನ ಸಭಾಂಗಣ, 3ನೇ ಮಹಡಿ, ಬೆಳಕು ಭವನ, ಕಾರ್ಪೊರೇಟ್ ಕಚೇರಿ, ಬೆಸ್ಕಾಂ, ಕೆ.ಆರ್. ವೃತ್ತ, ಬೆಂಗಳೂರು-560 001.

ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್: https://kppp.karnataka.gov.in ಮೂಲಕ ಬಿಡ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಅಗತ್ಯ ನೆರವನ್ನು ಪಡೆದುಕೊಳ್ಳಬಹುದು. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಹಾಯ ಸಂಪರ್ಕ ಸಂಖ್ಯೆ: **+91-9240214000 / +91-9240214001 / +91-8046010000 / +91-8068948777** ಮತ್ತು ಇ ಮೇಲ್:support@eprochelpdesk.com. ಆಸಕ್ತ ಬಿಡ್‌ದಾರರು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಂಡು ಬಿಡ್ ದಾರರು ಕಚೇರಿ ಕೆಲಸದ ಸಮಯದಲ್ಲಿ ಸಹಾಯ ಪಡೆದುಕೊಳ್ಳಬಹುದಾಗಿರುತ್ತದೆ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/-
ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ) ಯೋಜನೆಗಳು, ಬೆವಿಕಂ.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ-572132,
ದೂ ಸಂಖ್ಯೆ 08137-282112 Email:eeyetmadhugiri4@gmail.com
ಕ್ರ.ಸಂ:ಕಾಇಂ:ವಿಜನಿನಿ/ಎಹೊಂಯೋ/ಮ/ವಿ.04/ಹ.ಅ-06/2026-24
ದಿನಾಂಕ: 04.05.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ ಮಧುಗಿರಿ ವಿಭಾಗ ವ್ಯಾಪ್ತಿಯ, ಚಿಂತಾಮಣಿ ವಿಧಾನ ಸಭಾ ಕ್ಷೇತ್ರದ "Construction of Checkdam and other development works for major nala near Kariyapalli Village, Kadadhanamari gram Panchayathi, Munganahalli Hobli in Chintamani taluk" (Indent No:505)" ಕಾಮಗಾರಿಗೆ ರೂ.253.73 ಲಕ್ಷಗಳಿಗೆ ಟೆಂಡರ್ ಅಹ್ವಾನಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ Percentage Tender ಮೂಲಕ ಅರ್ಹ ಬಿಡ್ಡುದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನ https://kppp.karnataka.gov.in ವೆಬ್ ಸೈಟ್ ಮೂಲಕ ದಿನಾಂಕ: 05.05.2026 ರಿಂದ ದಿನಾಂಕ: 12.05.2026 ರ ಸಂಜೆ 5:30 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಬಿಡ್ಡುದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: 08.05.2026 ರ ಸಂಜೆ 3:00 ಗಂಟೆಯವರೆಗೆ ಸಂಪರ್ಕಿಸಬಹುದು ಹಾಗೂ ಸ್ವೀಕೃತ ಟೆಂಡರ್‌ಗಳನ್ನು, ಕೆ.ಪಿ.ಪಿ-ಪೋರ್ಟಲ್‌ನಲ್ಲಿ ದಿನಾಂಕ: 14.05.2026 ರಂದು ಬೆಳಗ್ಗೆ 11:00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ. 04 ಮಧುಗಿರಿ ರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ ವಿಭಾಗ ನಂ.4, ವಿಜನಿನಿ, ಮಧುಗಿರಿ

DIPR/TUM/59/KSMCA/2026-27

INSTITUTE FOR SOCIAL AND ECONOMIC CHANGE
ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ
Dr. V.K.R.V. Rao Road, Nagarabhavi, Bengaluru - 560 072. India

Advt No. D/1/2026 7th May 2026

Corrigendum to Advt No. D/1/2026 Dated 1st May 2026

In addition to 10 points in advertisement notified as above, the following 2 (two) points are notified:
11. The notification No. D/1/2025 dated July 26, 2025 stands cancelled.
12. In view of 11 above, those who had applied in response to the said notification must apply afresh, if interested, in accordance with the Advertisement No. D/1/2026 dated 1st May 2026, including the time limit, i.e., 1st June 2026.

Sd/- REGISTRAR
DIPR/CP/559/SHIRDI SAI/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಶಿವಮೊಗ್ಗ.
1ನೇ ಮಹಡಿ, ಸತ್ಯಶ್ರೀ ಆರ್ಕೇಡ್, 5ನೇ ಪ್ಯಾರಲಲ್ ರಸ್ತೆ, ದುರ್ಗಿಗುಡಿ.
E-mail- domshimoga@gmail.com PH: (08182) 220206
ಸಂ:ಅಸಂಕಇಶಿ/ಆ.ಸಾ.ಟೆ/ಸಿ.ಆರ್-08/2026-27 ದಿನಾಂಕ: 06/05/2026

E PROCUREMENT SHORT TERM TENDER NOTIFICATION

ಶಿವಮೊಗ್ಗ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ/ ಕಾಲೇಜು, ಮೊ.ದೇ.ವ.ಶಾಲೆ/ ಕಾಲೇಜುಗಳಿಗೆ ಹಾಗೂ ವಿದ್ಯಾರ್ಥಿನಿಲಯಗಳಿಗೆ ಆಹಾರ ಹಾಗು ಇತರೆ ಅವಶ್ಯಕ ಸಾಮಗ್ರಿಗಳ ಪೂರೈಸಲು ಅರ್ಹ ಏಜೆನ್ಸಿ ಆಯ್ಕೆಗಾಗಿ ಆಸಕ್ತಿಯುಳ್ಳ ಟೆಂಡರ್‌ದಾರರಿಂದ E-Procurement (KPPP Portal) ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ. 1. ಟೆಂಡರ್ ನಂ.: MWD/2026-27/IND0128 **ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ:** ರೂ.457.59 ಲಕ್ಷ **ಟೆಂಡರ್ ಅರ್ಜಿ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:** 04.05.2026 **ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:** 19.05.2026 ರಂದು ಸಂಜೆ 5.00 ಗಂಟೆ **ಟೆಂಡರ್ ಅರ್ಜಿ ಶುಲ್ಕ:** As pe E-Procurement (KPPP Portal) **ಇ.ಎಂ.ಡಿ ಮೊತ್ತ :** 6.86 ಲಕ್ಷ

ಆಸಕ್ತಿಯುಳ್ಳ ಟೆಂಡರ್‌ದಾರರು Website: http://kppp.karnataka.gov.in ನಲ್ಲಿ ಅಪ್‌ಲೊಡ್ ಮಾಡುವುದು ಹಾಗೂ ಸದರಿ ವೆಬ್‌ಸೈಟ್‌ನಲ್ಲಿ ಟೆಂಡರ್ ದಸ್ತಾವೇಜು ಮತ್ತು ಮಾಹಿತಿಗಳು ಲಭ್ಯವಿದೆ.

ಸಹಿ/- ಜಿಲ್ಲಾ ಅಧಿಕಾರಿಗಳು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಶಿವಮೊಗ್ಗ ಜಿಲ್ಲೆ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/20/05/193

ಸೆನ್ಸೆಕ್ಸ್ ಅಲ್ಪ ಕುಸಿತ

ಮುಂಬಯಿ: ಬುಧವಾರ ಭಾರಿ ಏರಿಕೆ ಕಂಡಿದ್ದ ಷೇರುಪೇಟೆ ಗುರುವಾರ ತುಂಬಾ ಚಂಚಲತೆಯಿಂದ ಕೂಡಿತ್ತು. ವಿದೇಶಿ ನಿಧಿಯ ನಿರಂತರ ಹೊರಹರಿವು ಮತ್ತು ಭೌಗೋಳಿಕ ರಾಜಕೀಯ ಅನಿಶ್ಚಿತತೆಗಳ ನಡುವೆ ಹೂಡಿಕೆದಾರರು ಎಚ್ಚರಿಕೆಯ ಹೆಜ್ಜೆ ಇಟ್ಟರು. ಹೀಗಾಗಿ ಷೇರುಪೇಟೆ ದಿನಾಂತ್ಯದ ಹೊತ್ತಿಗೆ ಕೊಂಚ ಕುಸಿತ ದಾಖಲಿಸಿತು.

ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 114 ಅಂಕ ಕುಸಿದು 77,844.52ರಲ್ಲಿ ವಹಿವಾಟು ಕೊನೆಗೊಂಡಿತು. ಒಮ್ಮೆ 671.49 ಅಂಕಗಳಷ್ಟು ಏರಿಕೆ ಕಂಡು ಮತ್ತೆ ಕುಸಿತದ ಹಾದಿ ಹಿಡಿಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 4.30 ಅಂಕ ಕುಸಿದು 24,326.65ರಲ್ಲಿ ಸ್ಥಿರವಾಯಿತು. ಬುಧವಾರ ಸೆನ್ಸೆಕ್ಸ್ 940.73 ಹಾಗೂ ನಿಫ್ಟಿ 298.15 ಅಂಕ ಜಿಗಿತವಾಗಿತ್ತು. ''ಅಮೆರಿಕದ ಶಾಂತಿ ಪ್ರಸ್ತಾವನೆಗೆ ಇರಾನ್ ಪ್ರತಿಕ್ರಿಯೆಗಾಗಿ ಹೂಡಿಕೆದಾರರು ಕಾಯುತ್ತಿದ್ದರಿಂದ ಭಾರತೀಯ ಮಾರುಕಟ್ಟೆಗಳು ಬಹುತೇಕ ಸ್ತಬ್ಧವಾಗಿದ್ದವು,'' ಎಂದು ಹೂಡಿಕೆ ತಜ್ಞರು ತಿಳಿಸಿದ್ದಾರೆ.

ಏಷ್ಯಾದ ಮಾರುಕಟ್ಟೆಗಳ ಪೈಕಿ ದಕ್ಷಿಣ ಕೊರಿಯಾದ ಕೊಸ್ಪಿ ನಿಕ್ಕೈ 225 ಇಂಡೆಕ್ಸ್, ಶಾಂಘೈನ ಎಸ್ಎಸ್ಇ ಕಾಂಪೋಸಿಟ್ ಮತ್ತು ಹಾಂಕಾಂಗ್‌ನ ಹ್ಯಾಂಗ್‌ಸೆಂಗ್ ಸೂಚ್ಯಂಕಗಳು ಏರಿಕೆ ಕಂಡವು. ಐರೋಪ್ಯ ಮಾರುಕಟ್ಟೆಗಳು ಕುಸಿತ ಕಂಡರೆ, ಅಮೆರಿಕದ ಮಾರುಕಟ್ಟೆಗಳು ಬುಧವಾರ ಭಾರಿ ಏರಿಕೆಯೊಂದಿಗೆ ಅಂತ್ಯಗೊಂಡಿದ್ದವು...

ರೂಪಾಯಿ ಮೌಲ್ಯದಲ್ಲಿ 23 ಪೈಸೆ ಚೇತರಿಕೆ

ಮುಂಬಯಿ: ಡಾಲರ್ ಎದುರು ಆರಂಭದಲ್ಲಿ ಇಳಿಕೆ ಕಂಡ ರೂಪಾಯಿ ನಂತರ ಚೇತರಿಸಿಕೊಂಡಿತು. 23 ಪೈಸೆ ಏರಿ, 94.26 ರೂ. ಆಯಿತು. ಬುಧವಾರ 69 ಪೈಸೆ ಇಳಿಕೆಯಾಗಿತ್ತು. ಬ್ರೆಂಟ್ ಕಚ್ಚಾ ತೈಲ ಬ್ಯಾರೆಲ್‌ಗೆ 100 ಡಾಲರ್‌ಗಿಂತ ಕಡಿಮೆಯಾಗಿದ್ದರಿಂದ ಡಾಲರ್ ಮೌಲ್ಯ ಕುಸಿದದ್ದು ರೂಪಾಯಿ ಚೇತರಿಕೆಗೆ ಕಾರಣವಾಯಿತು. ಅಮೆರಿಕ ಮತ್ತು ಇರಾನ್ ನಡುವೆ ಶೀಘ್ರದಲ್ಲೇ ಶಾಂತಿ ಒಪ್ಪಂದ ಏರ್ಪಡುತ್ತದೆ ಎಂಬ ಆಶಾವಾದ ಹೂಡಿಕೆದಾರರಲ್ಲಿ ಮೂಡಿದೆ.

ಅಮೆರಿಕದಲ್ಲಿ ಭಾರತದ ಮಾವಿಗೆ ಭಾರಿ ಬೇಡಿಕೆ | ಎಲ್ಲರ ಕಣ್ಣು ಮ್ಯಾಂಗೊ ಪ್ಲೇನ್ ಮೇಲೆ!

ಒಂದು ಮಾವಿನ ಹಣ್ಣಿನ ಬೆಲೆ 466 ರೂ.!

ನ್ಯೂಯಾರ್ಕ್: ಮಾವಿಗೆ 'ಹಣ್ಣುಗಳ ರಾಜ' ಎಂದು ಹೇಳುವುದು ಸುಮ್ಮನೇ ಅಲ್ಲ. ಅಮೆರಿಕದಲ್ಲಿಯೂ ಭಾರತೀಯ ಮಾವಿಗೆ ಭಾರಿ ಬೇಡಿಕೆ. ಸುಂಕ, ಸಾಗಣೆ ಎಲ್ಲ ಸೇರಿ ಅಲ್ಲಿ ಈಗ ಒಂದು ಮಾವಿನ ಹಣ್ಣಿನ ಬೆಲೆ ಬರೋಬ್ಬರಿ 466 ರೂ. ಅಷ್ಟು ಹಣ ತೆತ್ತು ಖರೀದಿಸಲು ಅನಿವಾಸಿ ಭಾರತೀಯರು ಮಾತ್ರವಲ್ಲದೆ ಅಮೆರಿಕನ್ನರೂ ತುದಿಗಾಲಿನಲ್ಲಿ ನಿಂತಿದ್ದಾರೆ. ಭಾರತದಿಂದ ತಾಜಾ ಮಾವು ಅಮೆರಿಕಕ್ಕೆ ಬಂದಿಳಿಯುವುದಕ್ಕೆ ಮುಂಚಿತವಾಗಿಯೇ ಮುಂಗಡ ಬುಕಿಂಗ್ ನಿಂತು ಹೋಗಿದೆ. 10ರಿಂದ 12 ಮಾವಿನ ಹಣ್ಣುಗಳಿರುವ ಒಂದು ಪೆಟ್ಟಿಗೆಗೆ ಬರೋಬ್ಬರಿ 5,600 ರೂ. ಪಾವತಿಸಿ ಕಾಯುತ್ತಿದ್ದಾರೆ. ಕಳೆದ ವರ್ಷ ಇಷ್ಟೇ ಪ್ರಮಾಣದ ಮಾವಿನ ಧಾರಣೆ 3,700 -4,200 ರೂ. ಆಸುಪಾಸಿನಲ್ಲಿತ್ತು. ಈ ವರ್ಷ ಶೇ. 33ರಷ್ಟು ಬೆಲೆ ಏರಿದೆ.

ಇರಾನ್ ಯುದ್ಧದ ನಂತರ ತೈಲ ಬೆಲೆಯಲ್ಲಿ ಉಂಟಾದ ಏರಿಕೆ, ದುಬಾರಿಯಾದ ಹಡಗು ಮತ್ತು ವಿಮಾನಯಾನ ವೆಚ್ಚ, ವಿಮಾನಗಳ ಸಂಖ್ಯೆ ಕಡಿಮೆಯಾದ ಕಾರಣ ದಾಸ್ತಾನು ವಿಳಂಬದಿಂದ ಬೆಲೆ ಜಿಗಿತವಾಗಿದೆ. ಅನಿವಾಸಿ ಭಾರತೀಯರು ಬೆಲೆ ಬಗ್ಗೆ ಕೊಂಚ ಅಸಮಾಧಾನ ವ್ಯಕ್ತಪಡಿಸಿದರೂ, ಅಮೆರಿಕನ್ನರು ಮಾತ್ರ ದರದ ಬಗ್ಗೆ ಯೋಚಿಸುತ್ತಿಲ್ಲ, ಭಾರತದಿಂದ ಮಾವು ಯಾವಾಗ ಬರುತ್ತದೆಯೋ ಎಂದು ಅಲ್ಲಿನ ಜನ ಸಾಮಾಜಿಕ ಜಾಲತಾಣಗಳಲ್ಲಿ ಮಾಡುತ್ತಿರುವ ಪೋಸ್ಟ್‌ಗಳೂ ಭಾರಿ ವೈರಲ್ ಆಗುತ್ತಿವೆ.

27,000 ಮೆಟ್ರಿಕ್ ಟನ್ 2023-24ರಲ್ಲಿ ಭಾರತದಿಂದ ಅಮೆರಿಕಕ್ಕೆ ರಫ್ತಾಗಿದ್ದ ಮಾವಿನ ಪ್ರಮಾಣ

₹5,600 ಡಜನ್ ಮಾವಿಗೆ ಅಮೆರಿಕದಲ್ಲಿ ಈಗ ಇರುವ ಬೆಲೆ

ರುಚಿಯ ಮುಂದೆ ಬೆಲೆ ಗೌಣ: ಅಮೆರಿಕದ ಮಾರುಕಟ್ಟೆಗಳಲ್ಲಿ ಮೆಕ್ಸಿಕೊದ ಮಾವಿನಹಣ್ಣುಗಳು ವರ್ಷಪೂರ್ತಿ ಸಿಗುತ್ತವೆ. ಆದರೆ, ಭಾರತದ ಹಣ್ಣುಗಳ ರುಚಿಯ ಮುಂದೆ ಅನ್ಯದೇಶಗಳ ಹಣ್ಣುಗಳು ಗೌಣವಾಗಿವೆ. ಮುಖ್ಯವಾಗಿ ಮಹಾರಾಷ್ಟ್ರದ ಆಲ್ಫಾನ್ಸೋ, ಗುಜರಾತ್‌ನ ಕೇಸರ್, ಉತ್ತರ ಭಾರತದ ಚೌಸಾ ಮತ್ತು ಲಂಗ್ರಾ, ಹಾಗೂ ದಕ್ಷಿಣ ಭಾರತದ ಬಂಗನಪಲ್ಲಿ ತಳಿಗಳಿಗೆ ಅಲ್ಲಿ ವಿಪರೀತ ಡಿಮ್ಯಾಂಡ್ ಇದೆ.

ವಿಶ್ವದ ಬೇಡಿಕೆಯ ಅರ್ಧದಷ್ಟು ಮಾವಿನ ಹಣ್ಣನ್ನು ಭಾರತವೇ ಪೂರೈಸುತ್ತಿದ್ದರೂ, ದಶಕಗಳ ಕಾಲ ಅಮೆರಿಕದಲ್ಲಿ ಸುಮಾರು 18 ವರ್ಷ ನಿಷೇಧವಿತ್ತು. ಕೀಟಗಳನ್ನು ಕೊಲ್ಲಲು ಬಳಸುತ್ತಿದ್ದ 'ಹಾಟ್-ವಾಟರ್ ಟ್ರೀಟ್‌ಮೆಂಟ್' ಭಾರತೀಯ ಹಣ್ಣುಗಳ ರುಚಿ ಕೆಡಿಸುತ್ತಿತ್ತು. ಜತೆಗೆ ದಕ್ಷಿಣ ಅಮೆರಿಕದ ಲಾಬಿಯೂ ಇದಕ್ಕೆ ಅಡ್ಡಿಯಾಗಿತ್ತು. ಆದರೆ ಇದಕ್ಕೆ 'ಗಾಮಾ ರೇಡಿಯೇಶನ್' (ಕಿರಣಗಳ ಮೂಲಕ ಕ್ರಿಮಿನಾಶಕ ಮಾಡುವ ತಂತ್ರಜ್ಞಾನ) ಪರಿಹಾರ ನೀಡಿತು. 2006ರಲ್ಲಿ ಅಂದಿನ ಪ್ರಧಾನಿ ಡಾ.ಮನಮೋಹನ್ ಸಿಂಗ್ ಮತ್ತು ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್ ನಡುವೆ ನಡೆದ ಐತಿಹಾಸಿಕ ಒಪ್ಪಂದದ ಫಲವಾಗಿ 2007ರಲ್ಲಿ ಭಾರತೀಯ ಮಾವು ಅಧಿಕೃತವಾಗಿ ಅಮೆರಿಕದ ನೆಲಕ್ಕೆ ಕಾಲಿಟ್ಟಿತು.

ಮ್ಯಾಂಗೊ ಪಾಸ್: ಮಾವಿನ ಹಣ್ಣಿನ ಮೇಲಿನ ವ್ಯಾಮೋಹ ಎಷ್ಟಿದೆಯೆಂದರೆ 'ಜಿಜಿ ಮ್ಯಾಂಗೊ' ನಂತಹ ಕಂಪನಿಗಳು ಇಡೀ ಋತುವಿನಲ್ಲಿ 1,000 ಡಾಲರ್ (ಸುಮಾರು 94,000 ರೂ.) ಬೆಲೆಯಲ್ಲಿ 'ಮ್ಯಾಂಗೊ ಪಾಸ್' ಪೂರೈಸುವ ಆಫರ್ ನೀಡುತ್ತಿದೆ. ಈ ಹಣ್ಣುಗಳನ್ನು ಗ್ರಾಹಕರಿಗೆ ತಲುಪಿಸಲು ವಾಲ್‌ಮಾರ್ಟ್ ಮತ್ತು ಕಾಸ್ಟ್‌ಕೊದಂತಹ ಮಾರಾಟ ಸಂಸ್ಥೆಗಳು ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿವೆ.

ಹಣ್ಣುಗಳ ರಫ್ತಿನಿಂದ ಆದಾಯ ವೃದ್ಧಿ

ಲಖನೌ: ರೈತರ ಆದಾಯ ವೃದ್ಧಿ, ಉದ್ಯೋಗ ಸೃಷ್ಟಿ ಮತ್ತು ವಿದೇಶಿ ವಿನಿಮಯ ಹೆಚ್ಚಳಕ್ಕೆ ಭಾರತವು ಹಣ್ಣು ಮತ್ತು ತರಕಾರಿಗಳ ರಫ್ತನ್ನು ಗಣನೀಯವಾಗಿ ಹೆಚ್ಚಿಸುವ ಅಗತ್ಯವಿದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ಲಖನೌದಲ್ಲಿ ನಡೆಯುತ್ತಿರುವ 'ಫ್ರೂಟ್ ಹೊರೈಜೆನ್ 2026' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

''ಭಾರತವು ಹಲವಾರು ಹಣ್ಣಿನ ತಳಿಗಳಲ್ಲಿ ಅದರಲ್ಲೂ ವಿಶೇಷವಾಗಿ ಮಾವಿನ ಹಣ್ಣಿನ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ನಾವು ಬೆಳೆಯುವ ಮಾವಿನಹಣ್ಣಿನ ಪ್ರಮಾಣ ಮತ್ತು ಗುಣಮಟ್ಟಕ್ಕೆ ಜಗತ್ತಿನಲ್ಲಿ ಯಾವ ದೇಶವೂ ಸಾಟಿಯಿಲ್ಲ. ಮಾವು, ದ್ರಾಕ್ಷಿ, ಬಾಳೆ ಅಥವಾ ಲಿಚಿ ಹೀಗೆ ಪ್ರತಿಯೊಂದರಲ್ಲೂ ನಾವು ಪ್ರಮುಖ ಉತ್ಪಾದಕರಲ್ಲಿ ಒಬ್ಬರು. ಆದರೂ ನಮ್ಮ ರಫ್ತು ಪ್ರಮಾಣ ಇಂದಿಗೂ ಸಾಕಷ್ಟು ಕಡಿಮೆ ಇದೆ,'' ಎಂದು ಕಳವಳ ವ್ಯಕ್ತಪಡಿಸಿದರು.

''ಭಾರತೀಯ ಹಣ್ಣು ಮತ್ತು ತರಕಾರಿಗಳು ದೊಡ್ಡ ಅಂತರಾಷ್ಟ್ರೀಯ ಮಾರುಕಟ್ಟೆಗಳನ್ನು ತಲುಪಬೇಕೆಂದು ಸರಕಾರ ಬಯಸುತ್ತದೆ. ರಫ್ತು ಹೆಚ್ಚಾದಲ್ಲಿ ರೈತರ ಆದಾಯ ವೃದ್ಧಿಸುವುದಲ್ಲದೆ ವಿದೇಶಿ ವಿನಿಮಯ ಮತ್ತು ಉದ್ಯೋಗಾವಕಾಶಗಳು ಸಹ ಹೆಚ್ಚಾಗಲಿವೆ. ಈ ವಲಯವು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಚರ್ಚಿಸಲು ಸರಕಾರ ರೈತರು, ರಫ್ತುದಾರರು, ಸಂಸ್ಕರಣೆಕಾರರು ಮತ್ತು ಎಪೀಡಾ, ಎಂಐಡಿಎಚ್ ಮತತು ಐಸಿಎಆರ್ ನಂತಹ ಸಂಸ್ಥೆಗಳನ್ನು ಒಂದೇ ವೇದಿಕೆಗೆ ತಂದಿದೆ,' ಎಂದು ತಿಳಿಸಿದರು.

25, 26ರಂದು ಎಸ್‌ಬಿಐ ನೌಕರರ ಮುಷ್ಕರ

ಬೆಂಗಳೂರು: ದೀರ್ಘಕಾಲದಿಂದ ನನೆಗುದಿಗೆ ಬಿದ್ದಿರುವ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ಭಾರತೀಯ ಸ್ಟೇಟ್ ಬ್ಯಾಂಕ್ ನೌಕರರ ಒಕ್ಕೂಟ (ಎಐಎಸ್‌ಬಿಐಎಸ್‌ಎಫ್) ಮೇ 25 ಮತ್ತು 26 ರಂದು ಮುಷ್ಕರಕ್ಕೆ ಕರೆ ನೀಡಿದೆ. ''ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನಾವು ರಚನಾತ್ಮಕ ಹಾದಿಯಲ್ಲಿ ಮುನ್ನಡೆದೆವು. ಸಕಾರಾತ್ಮಕ ದೃಷ್ಟಿಕೋನ ನಮ್ಮದಾಗಿತ್ತು. ಆದರೆ ಪರಿಹಾರ ಕಾಣಸಲೇ ಇಲ್ಲ. ಈಗ ಮುಷ್ಕರ ಹೊರತುಪಡಿಸಿ ಬೇರೆ ಮಾರ್ಗವೇ ಇಲ್ಲ,'' ಎಂದಿರುವ ಒಕ್ಕೂಟವು, ''ಸರಕಾರ ತ್ವರಿತವಾಗಿ ಎಸ್‌ಬಿಐ ನೌಕರರ ವೇತನ ಸಮಸ್ಯೆಗಳನ್ನು ಪರಿಹರಿಸಬೇಕು. 2019ರಿಂದ ಸೇರಿದ ನೌಕರರಿಗೆ ಐಸಿಟಿ ವರ್ಗಾವಣೆ ಜಾರಿಗೆ ತರಬೇಕು. ಎನ್‌ಪಿಎಸ್‌ಗೆ ಒಳಪಡುವ ನೌಕರರಿಗೆ ಪಿಂಚಣಿ ನಿಧಿ ನಿರ್ವಹಣೆ ಆಯ್ಕೆ ನೀಡಬೇಕು. ಖಾಲಿ ಇರುವ ಹುದ್ದೆಗಳನ್ನು ತುಂಬಬೇಕು,'' ಎಂದು ಆಗ್ರಹಿಸಿದೆ.

ಡಿಜಿಟಲ್ ತಂತ್ರಜ್ಞಾನದಲ್ಲಿ ಮಹಿಳಾ ಸಬಲೀಕರಣ

ರಿಲಯನ್ಸ್ ಫೌಂಡೇಶನ್ ಮತ್ತು ಗೇಟ್ಸ್ ಫೌಂಡೇಶನ್ ನಿಂದ 'ಶೀ ಕನೆಕ್ಟ್ ಡಿಜಿಟಲ್ ಆಕ್ಸಿಲರೇಟರ್' ಉಪಕ್ರಮ

ಮುಂಬಯಿ/ದಿಲ್ಲಿ: ಡಿಜಿಟಲ್ ತಂತ್ರಜ್ಞಾನದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ರಿಲಯನ್ಸ್ ಫೌಂಡೇಷನ್ ಮತ್ತು ಗೇಟ್ಸ್ ಫೌಂಡೇಷನ್ 'ಶೀ ಕನೆಕ್ಟ್ ಡಿಜಿಟಲ್ ಆಕ್ಸಿಲರೇಟರ್' ಎಂಬ ಹೊಸ ಉಪಕ್ರಮವನ್ನು ಘೋಷಿಸಿವೆ. ಡಿಜಿಟಲ್ ಪರಿಹಾರಗಳನ್ನು ಕಂಡುಕೊಳ್ಳುವುದರ ಮೂಲಕ ಮಹಿಳೆಯರ ಜೀವನೋಪಾಯವನ್ನು ಸುಧಾರಿಸುವುದು ಈ ಅಭಿಯಾನದ ಉದ್ದೇಶವಾಗಿದೆ. ಇದಕ್ಕಾಗಿ ಮುಂದಿನ ಮೂರು ವರ್ಷಗಳಲ್ಲಿ 200 ಕೋಟಿ ರೂ. ವೆಚ್ಚ ಮಾಡಲಾಗುತ್ತದೆ. ಸ್ಥಳೀಯ ಮಟ್ಟದ ನಾವೀನ್ಯತೆಯನ್ನು ಉತ್ತೇಜಿಸಲಾಗುತ್ತದೆ. ಗೇಟ್ಸ್ ಫೌಂಡೇಷನ್ ಜೊತೆಗೂಡಿ ಕಾರ್ಯನಿರ್ವಹಿಸುವ 'ಶೀ ಕನೆಕ್ಟ್' ಭಾರತ ಮತ್ತು ಆಫ್ರಿಕಾ ಖಂಡದ 49 ದೇಶಗಳ ಮಡುವೆ ಜ್ಞಾನದ ಹಂಚಿಕೆಗೆ ಉತ್ತೇಜನ ನೀಡುತ್ತದೆ.

''ಮುಂದಿನ 3 ವರ್ಷಗಳಲ್ಲಿ ಭಾರತದಲ್ಲಿ ಮಹಿಳೆಯರ ಡಿಜಿಟಲ್ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಪ್ರಯತ್ನಗಳನ್ನು ನಾವು ಗುರುತಿಸಿ ಬೆಂಬಲಿಸುತ್ತೇವೆ ಮತ್ತು ಭಾರತದ ನಾವೀನ್ಯತೆಯನ್ನು ಗ್ಲೋಬಲ್ ಸೌತ್‌ನೊಂದಿಗೆ ಹಂಚಿಕೊಳ್ಳುತ್ತೇವೆ,'' ಎಂದು ರಿಲಯನ್ಸ್ ಫೌಂಡೇಶಷನ ಮಹಿಳಾ ಸಬಲೀಕರಣ ವಿಭಾಗದ ಮುಖ್ಯಸ್ಥರಾದ ಎನ್. ದೀಪ್ತಿ ರೆಡ್ಡಿ ತಿಳಿಸಿದ್ದಾರೆ.

''ಡಿಜಿಟಲ್ ಜಗತ್ತಿನಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗವಹಿಸಲು ಮಹಿಳೆಯರಿಗೆ ಅಗತ್ಯ ಪರಿಕರಗಳನ್ನು ಒದಗಿಸಬೇಕಾಗುತ್ತದೆ. ಇದರಿಂದ ಅವರಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ. ಇದರಿಂದ ಸಮಾಜದಲ್ಲಿ ಪರಿವರ್ತನೆಯಾಗುತ್ತದೆ. ಡಿಜಿಟಲ್ ಜಗತ್ತಿನಲ್ಲಿ ಲಿಂಗ ಸಮಾನತೆ ಸಾಧಿಸುವುದು ನಮ್ಮ ಗುರಿಯಾಗಿದೆ,'' ಎಂದು ಗೇಟ್ಸ್ ಫೌಂಡೇಷನ್‌ನ ಲಿಂಗ ಸಮಾನತೆ ವಿಭಾಗದ ಉಪ ನಿರ್ದೇಶಕಿ ಸಾಚಿ ಭಲ್ಲಾ ಹೇಳಿದ್ದಾರೆ.

ಕಾರ್ಮಿಕರ ಆರೋಗ್ಯ ತಪಾಸಣೆಗೆ ಚಾಲನೆ

40 ವರ್ಷ ದಾಟಿದ ಕಾರ್ಮಿಕರಿಗೆ ವಾರ್ಷಿಕ ತಪಾಸಣೆ ಕಡ್ಡಾಯ

ಹೊಸದಿಲ್ಲಿ: ನೂತನ ಕಾರ್ಮಿಕ ಸಂಹಿತೆಗಳು ಶ್ರಮಿಕ ವರ್ಗದ ಹಿತರಕ್ಷಣೆಗೆ ಹೊಸ ಭಾಷ್ಯ ಬರೆದಿದೆ. ಗುರುವಾರ ಕೇಂದ್ರ ಕಾರ್ಮಿಕ ಸಚಿವ ಡಾ. ಮನ್ಸುಖ್ ಮಂಡಾವೀಯ ಹೊಸ ಕಾರ್ಮಿಕ ಸಂಹಿತೆಗಳ ಅಡಿಯಲ್ಲಿ 40 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯೋಮಾನದ ಕಾರ್ಮಿಕರಿಗಾಗಿ ರಾಷ್ಟ್ರವ್ಯಾಪಿ ವಾರ್ಷಿಕ ಆರೋಗ್ಯ ತಪಾಸಣೆ ಉಪಕ್ರಮಕ್ಕೆ ಚಾಲನೆ ನೀಡಿದರು. ದೇಶಾದ್ಯಂತ 11 ಇಎಸ್ಐಸಿ ಆಸ್ಪತ್ರೆಗಳಲ್ಲಿ ಆರೋಗ್ಯ ತಪಾಸಣೆಗೆ ಚಾಲನೆ ನೀಡಲಾಯಿತು.

''ಇನ್ನುಮುಂದೆ ಪ್ರತಿವರ್ಷವೂ 40 ವರ್ಷ ದಾಟಿದ ಎಲ್ಲ ಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣೆ ಇರುತ್ತದೆ. ನಾಲ್ಕು ಕಾರ್ಮಿಕ ಸಂಹಿತೆಗಳ ಜಾರಿ ದೇಶದಾದ್ಯಂತ ಕಾರ್ಮಿಕರಿಗೆ ಘನತೆ, ಕಲ್ಯಾಣ ಮತ್ತು ಸಾಮಾಜಿಕ ಭದ್ರತೆಯನ್ನು ಖಚಿತಪಡಿಸುವ ಪ್ರಧಾನಿ ನರೇಂದ್ರ ಮೋದಿ ಅವರ ಗ್ಯಾರಂಟಿಯನ್ನು ಪ್ರತಿಬಿಂಬಿಸುತ್ತದೆ,'' ಎಂದು ಮಂಡಾವೀಯ ಹೇಳಿದರು.

''ಗಂಭೀರ ಕಾಯಿಲೆಗಳಿದ್ದರೆ ಆರೋಗ್ಯ ತಪಾಸಣೆಯಿಂದ ಅದು ಪತ್ತೆಯಾಗುತ್ತದೆ. ಆರೋಗ್ಯ ತಪಾಸಣಾ ಶಿಬಿರಗಳ ಸಮಯದಲ್ಲಿ ಗುರುತಿಸಲಾದ ಚಿಕಿತ್ಸೆ ಮತ್ತು ಔಷಧಿಗಳನ್ನು ಇಎಸ್ಐಸಿ ಮೂಲಕ ನೀಡಲಾಗುವುದು,'' ಎಂದು ಸಚಿವರು ತಿಳಿಸಿದ್ದಾರೆ. ಪ್ರಮುಖ ಕಾರ್ಮಿಕ ಸುಧಾರಣೆಗಳ ಮುಖ್ಯಾಂಶಗಳನ್ನು ಪ್ರಸ್ತಾಪಿಸಿದ ಅವರು, ''ಪುರುಷ ಮತ್ತು ಮಹಿಳಾ ಕಾರ್ಮಿಕರಿಗೆ ಸಮಾನ ವೇತನದ ನಿಬಂಧನೆಗಳನ್ನು ಖಾತ್ರಿಪಡಿಸಲಾಗಿದೆ, ಹೆರಿಗೆ ರಜೆಯನ್ನು 12 ವಾರಗಳಿಂದ 26 ವಾರಗಳಿಗೆ ಹೆಚ್ಚಿಸಲಾಗಿದೆ ಮತ್ತು ಮಹಿಳೆಯರಿಗಾಗಿ 'ಮನೆಯಿಂದ ಕೆಲಸ' ಮಾಡುವ ನಿಬಂಧನೆಗಳನ್ನು ಸಹ ಸೇರಿಸಲಾಗಿದೆ,'' ಎಂದು ಹೇಳಿದರು.

''ಅಪಾಯಕಾರಿ ಕೆಲಸಗಳಲ್ಲಿ ತೊಡಗಿರುವ ಕಾರ್ಮಿಕರು ಮತ್ತು 10ಕ್ಕಿಂತ ಕಡಿಮೆ ಕಾರ್ಮಿಕರಿರುವ ಘಟಕಗಳಲ್ಲಿ ಕೆಲಸ ಮಾಡುವ ಉದ್ಯೋಗಿಗಳನ್ನು ಈಗ ಇಎಸ್ಐಸಿ ವ್ಯಾಪ್ತಿಗೆ ತರಲಾಗುತ್ತಿದೆ,'' ಎಂದು ಡಾ. ಮಂಡಾವೀಯ ಹೇಳಿದರು. ''ಹಿಂದೆಲ್ಲ ಕಾರ್ಮಿಕರ ಅಹವಾಲುಗಳನ್ನು ಯಾರೊಬ್ಬರೂ ಕೇಳಿಸಿಕೊಳ್ಳುತ್ತಿರಲಿಲ್ಲ. ಈಗಿನ ಸರಕಾರ ಕಾರ್ಮಿಕರ ಹಿತರಕ್ಷಣೆಗೆ ಬದ್ಧವಾಗಿದೆ. ರಾಷ್ಟ್ರವ್ಯಾಪಿ ಆರೋಗ್ಯ ತಪಾಸಣೆ ಉಪಕ್ರಮವು ದೇಶದ ಶ್ರಮಿಕ ಪಡೆಗೆ ಘನತೆ, ರಕ್ಷಣೆ ಮತ್ತು ಉತ್ತಮ ಆರೋಗ್ಯ ಫಲಿತಾಂಶಗಳನ್ನು ಖಚಿತಪಡಿಸುತ್ತದೆ,'' ಎಂದಿದ್ದಾರೆ.

ಹೊಸ ಕಾರ್ಮಿಕ ಸಂಹಿತೆ ಅನುಷ್ಠಾನ

30 ಕೋಟಿ ದಶಕದ ಹಿಂದೆ ಸಾಮಾಜಿಕ ಭದ್ರತೆ ಯೋಜನೆ ವ್ಯಾಪ್ತಿಯಲ್ಲಿದ್ದ ಕಾರ್ಮಿಕರ ಸಂಖ್ಯೆ

94 ಕೋಟಿ ಈಗ ಸಾಮಾಜಿಕ ಭದ್ರತೆ ಯೋಜನೆಗಳ ವ್ಯಾಪ್ತಿಯಲ್ಲಿರುವ ಕಾರ್ಮಿಕರ ಸಂಖ್ಯೆ

ಇಎಸ್ಐಸಿ ಮೂಲಕ ಚಿಕಿತ್ಸೆ ಮತ್ತು ಔಷಧ

7 ಕೋಟಿ ದಶಕದ ಹಿಂದೆ ಇಎಸ್ಐಸಿ ವ್ಯಾಪ್ತಿಗೆ ಒಳಪಟ್ಟವರ ಸಂಖ್ಯೆ

15 ಕೋಟಿ ಈಗ ಇಸಿಐಸಿ ವ್ಯಾಪ್ತಿಗೆ ಒಳಪಟ್ಟವರ ಸಂಖ್ಯೆ

CRETA benefits up to ₹1 05 000*
CRETA Electric benefits up to ₹70 000*
EXTER benefits up to ₹45 000*
ALCAZAR benefits up to ₹75 000*

VENUE price starts at ₹7 99 900#.

Scan for offers, updates & support or give a missed call at 9555295868
6 hai toh safe hai — 6 airbags standard
3 YEAR Unlimited** Kilometer Warranty — Up to 7 years extended warranty^^

i20 starts at ₹5.99 Lakh~~. ALCAZAR available in 6 & 7 seater.
Hy-CNG Duo (Dual cylinder technology) also available in EXTER & Grand i10 NIOS.
For bulk deals contact: corporatesales@hmil.net

HYUNDAI

Lakshmi Hyundai: Hebbal Ph: 9900037900, Kalyan Nagar Ph: 8884441111, Whitefield Ph: 8884497700, Hennur Ph: 8904777500, Devanahalli Ph: 8884499037; **Pavan Hyundai:** Kanakpura Road Ph: 7337882522, Electronic City Ph: 7337882373; **Trident Hyundai:** SankeyRoad Ph: 7353762526 , K R Puram Ph: 9844266873, Hosur Road Ph: 9743786716, Indiranagar Ph: 9743107927, Yelahanka Ph: 7353750677, Yeshwantpur Ph: 9844701452 **Advaith Hyundai:** Residency Road, Ph: 9606076451, Marathahalli, Outer Ring Road, Ph: 9606076452, Vasanthnagar Ph: 9606076453, Bannerghatta Road Ph: 9606076454, Kormangala Ph: 9606076455, Avalahalli Ph: 9606076456, Sarjapura Ph: 9606076458, Bilekahalli Ph: 9606076457, Anekal Ph: 9964039537; **Blue Hyundai:** New BEL Road Ph: 9513000800, Magadi Road Ph: 9513200033, Rajajinagar Ph: 9591200001, Basavangudi, Ph: 9591211118, Mysore Road Ph: 9591100001; Hessarghatta Main Road: 9916208888; **Dhruvdesh Hyundai:** Banashankari 3rd stage Ph: 9205770577; **Nelamangala: Blue Hyundai** Ph: 9742245636; **Ramanagara: Advaith Hyundai** Ph: 9620594433; **Kanakpura: Pavan Hyundai** Ph: 7892718572, **Kolar: Advaith Hyundai:** Ph: 9620229885, **Tumkur: Pavan Hyundai:** Ph: 7337882383: **Tiptur: Advaith Hyundai:** Ph: 7619577050; **Chintamani: Advaith Hyundai:** Ph: 8147994737.

my Hyundai app | Hyundai Promise Certified Pre-Owned Car

*Terms & conditions apply. *Offers and benefits mentioned are valid till 31st May 2026. Offers and benefits mentioned include cash, corporate, government employee exclusive offers, upgrade offers, either exchange or scrappage benefits as applicable. Total benefit amount may vary depending upon the eligibility of the customer. Offers and benefits may vary from variant to variant. **3-year warranty or up to 100 000 km whichever is earlier for Grand i10 NIOS, AURA, i20 & i20 N Line. 3-year unlimited km warranty is applicable for EXTER, VENUE, VENUE N Line, CRETA, CRETA N Line, CRETA Electric, ALCAZAR, VERNA and IONIQ 5. ^^Up to 7 Years extended warranty or 140 000 km whichsoever is earlier is available for Grand i10 NIOS, i20, i20 N Line, AURA, VERNA, EXTER, VENUE, VENUE N Line, CRETA, CRETA N Line, CRETA Electric & ALCAZAR in all variants (Petrol/Diesel/CNG) and subject to payment. For more details, visit your nearest Hyundai showroom. ~~Price mentioned is ex-showroom price. ~Finance offers on select Hyundai vehicles are solely at the discretion of the financier, subject to their terms, and HMIL has no role in finance offers. #2 to 4 wheeler upgrade offer only applicable for customers who provide a valid original 2 wheeler registration certificate at the time of booking. ##CSD: Canteen Stores Department, KPKB: Kendriya Police Kalyan Bhandar. This advertisement and car shown here is for creative representation purposes only and the depictions are for illustrative purposes. Features and specifications shown may or may not be part of standard fitment and are subject to change without prior notice. Hyundai Motor India Limited reserves the right to change specifications, colour, equipment, and schemes at any time without prior notice. The black shade on glass is due to lighting effect. Size and colour may appear to vary due to lighting and position effect.